ಸರ್ ಎಂ. ವಿಶ್ವೇಶ್ವರಯ್ಯ

ಜೀವನ - ಸಾಧನೆ

ಡಾ. ವೂಡೇ ಪಿ. ಕೃಷ್ಣ

ಮೈಸೂರಿನ ದಿವಾನರಾಗಿ ಸರ್ ಎಂ.ವಿ.
(1912 - 1918)

ಸರ್ ಎಂ. ವಿಶ್ವೇಶ್ವರಯ್ಯ

ಜೀವನ - ಸಾಧನೆ

ಡಾ. ವೂಡೇ ಪಿ. ಕೃಷ್ಣ

ಭಾರತೀಯ ಇಂಜಿನಿಯರುಗಳ ಸಂಸ್ಥೆ
ಕರ್ನಾಟಕ ರಾಜ್ಯ ಕೇಂದ್ರ, ಬೆಂಗಳೂರು–560 001

Sir M. Visvesvaraya Jeevana-Sadhane : A Book on Sir M. Visvesvaraya by Dr. Wooday P. Krishna Published by The Institution of Engineers (India), Karnataka State Centre, # 3, Dr. Ambedkar Veedhi, Bangalore-560 001.

Pages : x+86

First Impression : 2012

' Publisher

Copies : 1000

Printed by :
JAP Systems
3/1A, Belimuth Road
Bangalore - 560 053

ಮುನ್ನುಡಿ

ಡಾ. ವೂಡೇ ಪಿ. ಕೃಷ್ಣ ಅವರನ್ನು ನಾನು ಕಳೆದ ಒಂದು ದಶಕದಿಂದ ಬಲ್ಲೆ. ಅವರು ನಾನು ಹತ್ತಿರದಿಂದ ಕಂಡ ಅತ್ಯಂತ ಸುಸಂಸ್ಕೃತ ವ್ಯಕ್ತಿತ್ವಗಳಲ್ಲಿ ಒಬ್ಬರು. ರಾಮಕೃಷ್ಣ ಪರಮಹಂಸ ಹಾಗು ವಿವೇಕಾನಂದರ ತತ್ತ್ವಾದರ್ಶಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡಿರುವ ಕೃಷ್ಣ ಹರೆಯದ ಉತ್ಸಾಹ ಹಾಗು ಪ್ರೌಢ ಚಿಂತನೆ ಎರಡನ್ನು ಹದವಾಗಿ ಒಳಗೊಂಡಿರುವ ವಿಶಿಷ್ಟ ವ್ಯಕ್ತಿ. 'ಸಮಾಜ ಸೇವೆ' ಇಂದು ಒಂದು ದಂಧೆಯ ಸ್ವರೂಪ ತಾಳಿರುವಾಗ ಕೃಷ್ಣ ಅಂಥವರು ಕೆಲವು ಮೌಲ್ಯಗಳನಿಟ್ಟುಕೊಂಡು ಬದುಕುತ್ತಾ 'ಸೇವಾ ಕ್ಷೇತ್ರ'ಕ್ಕೆ ಘನತೆಯನ್ನು, ಮೌಲಿಕತೆಯನ್ನು ತಂದು ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಅಧಃಪತನದತ್ತ ಸಾಗುತ್ತಿರುವ ಸಾರ್ವಜನಿಕ ವಲಯದಲ್ಲಿ ಕೃಷ್ಣ ಭರವಸೆಯ ಬೆಳ್ಳಿಗೆರೆಯಂತೆ ಕಾಣಿಸುತ್ತಾರೆ.

ಕೃಷ್ಣ ಅವರದು ಬಹುಮುಖ ವ್ಯಕ್ತಿತ್ವ. ಮೂಲತಃ ಇಂಜಿನಿಯರ್ ಆದ ಅವರು ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು. ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಮಾಡಿದ್ದಾರೆ. ಸಾಹಿತ್ಯ, ಸಂಗೀತ, ಚಿತ್ರಕಲೆಯಲ್ಲಿ ಅವರಿಗೆ ಅಪಾರ ಆಸಕ್ತಿ. ಯೂತ್ ಹಾಸ್ಟಲ್, ರೆಡ್‌ಕ್ರಾಸ್, ಕ್ಷಯರೋಗ ಸಂಸ್ಥೆ, ಗಾಂಧಿ ಪ್ರಣೀತ ಸಂಸ್ಥೆಗಳು, ಸೇವಾದಳ ಮೊದಲಾದ ಸಾರ್ವಜನಿಕ ಸೇವಾ ಸಂಸ್ಥೆಗಳ ಜೊತೆ ಅವರಿಗೆ ನಿಕಟ ಸಂಬಂಧ. ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ನೇತೃತ್ವ ವಹಿಸಿದ್ದಾರೆ. ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಚಟುವಟಿಕೆಗಳಲ್ಲಿ ಅವರು ಕ್ರಿಯಾಶೀಲ ವ್ಯಕ್ತಿ. ಹೀಗೆ ಅನೇಕ ಬಗೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕೃಷ್ಣ ಹದಿಹರೆಯದ ಉತ್ಸಾಹಿ.

ಕೃಷ್ಣ ಅವರ ಇಂಥ ವ್ಯಕ್ತಿತ್ವವೇ ಅವರನ್ನು ವಿಶ್ವೇಶ್ವರಯ್ಯ ನವರಂತಹ ಮೇಧಾವಿ ವ್ಯಕ್ತಿತ್ವದ ಕಡೆಗೆ ಆಕರ್ಷಿಸಿದೆ. ಕೃಷ್ಣ ಅವರಿಗೆ ವಿಶ್ವೇಶ್ವರಯ್ಯನವರು ಮಾದರಿ ಮತ್ತು ಗುರಿ. ಅವರ ಕ್ರಿಯಾಶೀಲತೆ, ಆಡಳಿತ ನಿಪುಣತೆ, ಪ್ರಾಮಾಣಿಕತೆ, ಸಾಮಾಜಿಕ ಕಳಕಳಿ– ಇವೆಲ್ಲವೂ ಕೃಷ್ಣ ಅವರಿಗೆ ಆಸಕ್ತಿಯ ಸಂಗತಿಗಳು. ಅನೇಕ ಸಲ ಈ ಬಗ್ಗೆ ಅವರು ನನ್ನೊಂದಿಗೆ ಹಂಚಿಕೊಂಡಿರುವುದುಂಟು. ನಮ್ಮ ಮಾತುಕತೆಯ ನಡುವೆ ವಿಶ್ವೇಶ್ವರಯ್ಯನವರ ವಿಚಾರಗಳು ಮತ್ತೆ ಮತ್ತೆ ಬರುತ್ತಿತ್ತು. ಈಗ ಕೃಷ್ಣ ಅವರು ತಮ್ಮ ವಿಚಾರಗಳಿಗೆ 'ಕೃತಿ'ಯ ರೂಪ ನೀಡಿರುವುದು ನನ್ನಂಥವನಿಗೆ ಅತ್ಯಂತ ಮೆಚ್ಚುಗೆಯ ಸಂಗತಿ.

ಈ ಪುಟ್ಟ ಪುಸ್ತಕ ವಿಶ್ವೇಶ್ವರಯ್ಯನವರ ಜೀವನ ಚರಿತ್ರೆಯಲ್ಲಿ ಅವರ ವ್ಯಕ್ತಿತ್ವವನ್ನು ಕೃಷ್ಣ ತಾವು ಕಂಡ ರೀತಿಯಲ್ಲಿ ಇಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ವಿಶ್ವೇಶ್ವರಯ್ಯನವರು ಯಾಕೆ ಮಹತ್ವದ ವ್ಯಕ್ತಿ, ಅವರ ವ್ಯಕ್ತಿತ್ವದ ಸ್ವರೂಪ ಯಾವ ಬಗೆಯದು, ಇಂದು ಅವರು ನಮಗೆ ಹೇಗೆ ಪ್ರಸ್ತುತ– ಮೊದಲಾದ ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಕೃಷ್ಣ ಅವರು ವಿಶ್ವೇಶ್ವರಯ್ಯನವರ ಬದುಕು-ಸಾಧನೆಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ವಿಶ್ವೇಶ್ವರಯ್ಯನವರ ಬಗೆಗೆ ಆಳವಾದ ಅಧ್ಯಯನ ನಡೆಸಿರುವ ಕೃಷ್ಣ ಅವರ ಬಗ್ಗೆ ಎಲ್ಲ ಮೂಲಗಳಿಂದಲೂ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ತಾವು ಸಂಗ್ರಹಿಸಿದ ಮಾಹಿತಿಗಳನ್ನು ತಮ್ಮ ಆಶಯಕ್ಕೆ ತಕ್ಕಂತೆ ಸೂಕ್ತವಾಗಿ ಬಳಸಿಕೊಳ್ಳುವುದರ ಮೂಲಕ ಇಡೀ ಕೃತಿಗೆ ಒಂದು ಚೌಕಟ್ಟನ್ನು ಒದಗಿಸಿ ಕೊಟ್ಟಿದ್ದಾರೆ. ಮಹಾರಾಜರು ಹಾಗು ವಿಶ್ವೇಶ್ವರಯ್ಯನವರು, ವಿಶ್ವೇಶ್ವರಯ್ಯನವರು ಹಾಗು ಮಹಾತ್ಮ ಗಾಂಧೀಜಿ ನಡುವೆ ನಡೆದಿರುವ ಪತ್ರವ್ಯವಹಾರ ವಿಶ್ವೇಶ್ವರಯ್ಯನವರ ವ್ಯಕ್ತಿತ್ವವನ್ನು ನಮಗೆ ಪರಿಣಾಮಕಾರಿಯಾಗಿ ಕಟ್ಟಿಕೊಡುವ ಅಥೆಂಟಿಕ್ ಭಾಗಗಳು.

ಇಡೀ ಪುಸ್ತಕವನ್ನು ನಾವು ಒಂದೇ ಓದಿನಲ್ಲಿ ಮುಗಿಸಬಹುದಾದಂತೆ ಸರಳವಾಗಿ ಕೃಷ್ಣ ರಚಿಸಿದ್ದಾರೆ. ಯುವ ಮನಸ್ಸುಗಳು ಈ ಪುಸ್ತಕವನ್ನು ಓದಿ ಪ್ರಭಾವಿತರಾದರೆ ಕೃಷ್ಣ ಅವರ ಶ್ರಮ ಸಾರ್ಥಕವಾದಂತೆ.

ಕೃಷ್ಣ ಇಂಥ ಮಹಾ ಚೇತನಗಳನ್ನು ಕುರಿತು ಮತ್ತಷ್ಟು ಕೃತಿಗಳನ್ನು ರಚಿಸಲಿ ಎಂದು ಆಶಿಸುತ್ತೇನೆ.

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

ಅರಿಕೆ

ಭಾರತೀಯ ಇಂಜಿನಿಯರುಗಳ ಸಂಸ್ಥೆ, ಕರ್ನಾಟಕ ರಾಜ್ಯ ಕೇಂದ್ರದ ಹಲವು ಪ್ರಕಟಣಾ ಯೋಜನೆಗಳಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ನವರ ಪರಿಚಯಾತ್ಮಕ ಪುಸ್ತಕವನ್ನು ಹೊರತರಬೇಕೆಂಬುದೂ ಒಂದು. ಭಾರತದ ಅತ್ಯುನ್ನತ ವ್ಯಕ್ತಿತ್ವಗಳಲ್ಲಿ ಒಬ್ಬರಾದ ವಿಶ್ವೇಶ್ವರಯ್ಯನವರ ನೂರೈವತ್ತನೆಯ ಜನ್ಮದಿನದಂದು ಅವರ ಪರಿಚಯಾತ್ಮಕ ಪುಸ್ತಕವು Engineer-Statesman Bharat Ratna Sir M. Visvesvaraya ಎಂಬ ಶೀರ್ಷಿಕೆಯೊಂದಿಗೆ ಆಂಗ್ಲಭಾಷೆಯಲ್ಲಿ ಬಿಡುಗಡೆ ಮಾಡಲಾಯಿತು.

ವಿಶ್ವೇಶ್ವರಯ್ಯನವರ ಜೀವನ ಹಾಗು ಸಾಧನೆಯ ಬಗೆಗೆ ಪರಿಚಯಾತ್ಮಕ ಪುಸ್ತಕವನ್ನು ಕನ್ನಡದಲ್ಲಿ ಪ್ರಕಟಿಸುವ ಯೋಜನೆಗೆ ಚಾಲನೆದೊರೆಯಿತು. ಈ ಯೋಜನೆಯ ಅನುಷ್ಠಾನದ ಸನ್ನಿವೇಶದಲ್ಲಿ ಅದರ ಜವಾಬ್ದಾರಿಯನ್ನು ನನಗೆ ವಹಿಸಲಾಯಿತು. ವಿಶ್ವೇಶ್ವರಯ್ಯನವರ ಅಗಾಧ ವ್ಯಕ್ತಿತ್ವ ಹಾಗು ಚಿಂತನೆಗಳನ್ನು ಸಂಕ್ಷಿಪ್ತಗೊಳಿಸಿ ಅಕ್ಷರ ರೂಪನೀಡಹೊರಟಿದ್ದು ಸಾಹಸವೇ ಸರಿ. ಈಗಾಗಲೇ ಆಂಗ್ಲ ಪುಸ್ತಕವನ್ನು ರೂಪಿಸಿದ ಶ್ರೀ ಕೆ. ವಿ. ಶ್ರೀನಿವಾಸನ್ ಅವರ ಜೊತೆಗೆ ಕೆಲಸಮಾಡಿದ ಅನುಭವದೊಂದಿಗೆ ನಾನು ವಹಿಸಿಕೊಂಡ ಹೊಣೆಯನ್ನು ಬಹುಮಟ್ಟಿಗೆ ಸಮರ್ಥವಾಗಿ ನಿಭಾಯಿಸಿದ್ದೇನೆ ಎಂಬ ತೃಪ್ತಿಯಿದೆ.

ನನ್ನ ಈ ಪ್ರಯತ್ನಕ್ಕೆ ಅವಕಾಶ ಮಾಡಿಕೊಟ್ಟ ಡಾ. ಕೆ. ಗೋಪಾಲಕೃಷ್ಣನ್ ಮತ್ತು ಮೆಚ್ಚುಗೆಯೊಂದಿಗೆ ಮುನ್ನುಡಿ ಬರೆದಿರುವ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಗೆ ಅಭಾರಿಯಾಗಿದ್ದೇನೆ. ಡಾ. ಎಲ್. ವಿ. ಮುರಳಿಕೃಷ್ಣ ರೆಡ್ಡಿ, ಪ್ರೊ. ಲಾರೆನ್ಸ್ ಸುರೇಂದ್ರ, ಶ್ರೀ ಡಿ. ವಿ. ನಾಗಭೂಷಣ್, ಶ್ರೀ ವಿನಯ್‌ಭಟ್, ಶ್ರೀ ಜಿ. ಶ್ರೀಕಾಂತ್, ಶ್ರೀ ಸಿ. ಎನ್. ಬಾಬು, ಪ್ರೊ. ನೋಟಕಾರ್‌ಸತೀಶ್, ಶ್ರೀ ಮುನಿಧರ್ಮಯ್ಯ ಹಾಗು ಪರೋಕ್ಷವಾಗಿ ಸಹಕರಿಸಿದ ಎಲ್ಲ ಆತ್ಮೀಯರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ವೂಡೇ ಪಿ. ಕೃಷ್ಣ

ಪ್ರಕಾಶಕರ ನುಡಿ

ಭಾರತೀಯ ಇಂಜಿನಿಯರುಗಳ ಸಂಸ್ಥೆ 1920ರಲ್ಲಿ ಸ್ಥಾಪನೆಯಾಯಿತು. ಇದು ಏಷ್ಯಾದ ಅತಿ ದೊಡ್ಡ ವೃತ್ತಿಪರ ಸಂಸ್ಥೆಗಳಲ್ಲಿ ಒಂದು. ಈ ಸಂಸ್ಥೆಯು 100ಕ್ಕೂ ಹೆಚ್ಚು ಸ್ಥಳೀಯ ಹಾಗು ರಾಜ್ಯ ಕೇಂದ್ರಗಳನ್ನು ಹೊಂದಿದೆ. ಸಂಸ್ಥೆಯ ಸುಮಾರು 500ಕ್ಕೂ ಹೆಚ್ಚು ತಾಂತ್ರಿಕ ಹಾಗು ವಿದ್ಯಾರ್ಥಿ ಘಟಕಗಳು ದೇಶದಾದ್ಯಂತ ಮತ್ತು ವಿದೇಶಗಳಲ್ಲೂ ಹರಡಿದೆ. ಸಂಸ್ಥೆಗೆ 1935ರಲ್ಲಿ Royal Charter of Incorporation ಅನ್ನು ಮಾನ್ಯ ಮಾಡಲಾಯಿತು.

ಕಳೆದ 92 ವರ್ಷಗಳಿಂದ ಸಂಸ್ಥೆಯು ವೃತ್ತಿಪರ ತಂತ್ರಜ್ಞರ, ಶಿಕ್ಷಣ ತಜ್ಞರ ಮತ್ತು ಸಂಶೋಧಕರ ಸೇವೆಗೆ ಅವಿರತ ಶ್ರಮಿಸುತ್ತಿದೆ. ಜೊತೆಗೆ ಹಲವು ಪ್ರಕಾರದ ತಾಂತ್ರಿಕ ಸಲಹಾ ಸೇವೆಗಳನ್ನು ಸರ್ಕಾರಕ್ಕೆ, ಶಿಕ್ಷಣ ಸಂಸ್ಥೆಗಳಿಗೆ, ಕೈಗಾರಿಕೆಗಳಿಗೆ ಮತ್ತು ಇಂಜಿನಿಯರ್‌ಗಳ ವರ್ಗಕ್ಕೆ ನೀಡುತ್ತಾ ಬಂದಿದೆ. ದೇಶದಾದ್ಯಂತ ತನ್ನ ವ್ಯಾಪ್ತಿಯನ್ನು ಹೊಂದಿರುವ ಈ ಸಂಸ್ಥೆಯ ಇಂದಿನ ಸದಸ್ಯರುಗಳ ಸಂಖ್ಯೆ 6,50,000.

ಸಂಸ್ಥೆಯ ಕರ್ನಾಟಕ ಕೇಂದ್ರವು ಪ್ರಾರಂಭವಾದದ್ದು 1934ರಲ್ಲಿ. ಇಂದು ದೇಶದಲ್ಲಿ ಅತ್ಯಂತ ಕ್ರಿಯಾಶೀಲ ಕೇಂದ್ರಗಳಲ್ಲಿ ಒಂದೆಂದು ಕರ್ನಾಟಕ ಕೇಂದ್ರವು ಹೆಸರು ಪಡೆದಿದೆ. ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದ ವಿಚಾರ ಗೋಷ್ಠಿಗಳು, ಕಾರ್ಯಗಾರಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಸಂವಾದಗಳನ್ನು ಕಾಲ ಕಾಲಕ್ಕೆ ಏರ್ಪಡಿಸುತ್ತ ಸಂಸ್ಥೆಯು ತನ್ನ ಸದಸ್ಯರುಗಳ ಜ್ಞಾನದವರ್ಧನೆಗೆ ಸದಾ ಶ್ರಮಿಸುತ್ತಿದೆ.

ಸಂಸ್ಥೆಯು ಭಾರತರತ್ನ ಸರ್ ಎಂ. ವಿ. ಅವರ ನೇರ ಆಶೀರ್ವಾದ ಪಡೆದಿರುವುದು ವಿಶೇಷ. ಸಂಸ್ಥೆಗೆ ಅಡಿಗಲ್ಲಿಟ್ಟಾಗ ವಿಶ್ವೇಶ್ವರಯ್ಯನವರು ಅಲ್ಲಿ ಉಪಸ್ಥಿತರಿದ್ದರು. ಸಣ್ಣ ಸಂಖ್ಯೆಯ ಸದಸ್ಯತ್ವದಿಂದ ಪ್ರಾರಂಭವಾದ ಸಂಸ್ಥೆಯ ಸದಸ್ಯರುಗಳ ಸಂಖ್ಯೆ ವೇಗವಾಗಿ ಹೆಚ್ಚಿತು. ಇಂದು ಸಂಸ್ಥೆಯಲ್ಲಿ ಸುಮಾರು 10,000 ಕಾರ್ಪೊರೇಟ್ ಸದಸ್ಯರು ಮತ್ತು ಸುಮಾರು 25,000 ನಾನ್-ಕಾರ್ಪೊರೇಟ್ ಸದಸ್ಯರಿದ್ದಾರೆ. ಸಂಸ್ಥೆಯು ರಾಜ್ಯಾದ್ಯಂತ ಏಳು ಸ್ಥಳೀಯ ಸಂಸ್ಥೆಯನ್ನು ಸ್ಥಾಪಿಸಿದೆ.

78 ವರ್ಷಗಳು ಸ್ಥಿರವಾಗಿ ನಿಂತಿರುವುದು ಸಂಸ್ಥೆಯ ಕಾರ್ಯಕ್ಷಮತೆಗೆ ಹಿಡಿದ ಕನ್ನಡಿಯಾಗಿದೆ. ಇಂದು ಸಂಸ್ಥೆಯು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಪೂರ್ಣ ವೃತ್ತಿಪರ ಸಂಸ್ಥೆಯಾಗಿ ಹೆಸರು ಮಾಡಿರುವುದಕ್ಕೆ ಅನೇಕರು ಕಾರಣಕರ್ತರಾಗಿದ್ದಾರೆ ಎಂದರೆ ತಪ್ಪಲ್ಲ.

ನಮ್ಮ ಸಂಸ್ಥೆಯಿಂದ 'ಸರ್ ಎಂ. ವಿಶ್ವೇಶ್ವರಯ್ಯ (ಜೀವನ-ಸಾಧನೆ)' ಕೃತಿಯು ಪ್ರಕಟವಾಗುತ್ತಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ. ವಿಶ್ವೇಶ್ವರಯ್ಯನವರ ಬಗ್ಗೆ ಪರಿಚಯಾತ್ಮಕ ಕೃತಿಯಂತೆ ಮೇಲ್ನೋಟಕ್ಕೆ ಕಂಡರೂ, ಕೃತಿಯು ಸರ್ ಎಂ. ವಿ. ಅವರ ವ್ಯಕ್ತಿತ್ವದ ಸಂಪೂರ್ಣತೆಯನ್ನು ಹಿಡಿದಿಟ್ಟಿದೆ ಎಂಬುದರಲ್ಲಿ ಸಂಶಯವಿಲ್ಲ. ಸರಳ ಭಾಷಾ ಪ್ರಯೋಗದೊಂದಿಗೆ ಸಾಮಾನ್ಯ ಓದುಗನೂ ಸಹ ವಿಶ್ವೇಶ್ವರಯ್ಯನವರ ಚೇತನದ ಪ್ರಭಾವಕ್ಕೆ ಒಳಗಾಗುವಂತೆ ಮಾಡುವಲ್ಲಿ ಡಾ. ವೂಡೇ ಪಿ. ಕೃಷ್ಣ ಯಶಸ್ವಿಯಾಗಿದ್ದಾರೆ. ಕೃಷ್ಣ ಅವರ ಸರಳ ಸಜ್ಜನಿಕೆಗೆ ಅವರ ಈ ಕೃತಿಯೇ ಸಾಕ್ಷೀಕರಿಸುತ್ತದೆ. ಇಂತಹ ಕೃತಿಯನ್ನು ನಮ್ಮ ಸಂಸ್ಥೆಯಿಂದ ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಕೃಷ್ಣ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಈ ಕೃತಿಗೆ ಪ್ರೀತಿಯಿಂದ ಮುನ್ನುಡಿ ಬರೆದ ಸುಪ್ರಸಿದ್ಧ ವಿಮರ್ಶಕರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಗೆ ಹಾಗು ಕೃತಿಯನ್ನು ಪ್ರಕಟಿಸುವಲ್ಲಿ ನೆರವಾದ ಶ್ರೀ ಮುನಿಧರ್ಮಯ್ಯ, ಶ್ರೀ ಸಿ. ರಾಮ್ ಭೂಪಾಲ್ ರೆಡ್ಡಿ ಹಾಗು ಪ್ರೊ. ನೋಟಕಾರ್ ಸತೀಶ್ ಅವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಡಾ. ಕೆ. ಗೋಪಾಲಕೃಷ್ಣನ್
ಅಧ್ಯಕ್ಷರು
ಭಾರತೀಯ ಇಂಜಿನಿಯರುಗಳ ಸಂಸ್ಥೆ
ಕರ್ನಾಟಕ ರಾಜ್ಯ ಕೇಂದ್ರ

ಪರಿವಿಡಿ

1.	ಕೌಟುಂಬಿಕ ಹಿನ್ನೆಲೆ	1
2.	ವಿದ್ಯಾರ್ಥಿ ಜೀವನ	3
3.	ವೃತ್ತಿ ಜೀವನದ ಆರಂಭದ ಹೆಜ್ಜೆಗಳು	5
4.	ಪ್ರಧಾನ ಇಂಜಿನಿಯರಾಗಿ ವಿಶ್ವೇಶ್ವರಯ್ಯ	11
5.	ದಿವಾನರಾಗಿ ವಿಶ್ವೇಶ್ವರಯ್ಯ	15
6.	ಹತಾಷೆಯಿಂದ ರಾಜೀನಾಮೆ	21
7.	ವಿಶ್ವೇಶ್ವರಯ್ಯನವರ ಮಹತ್ತರ ಕೆಲಸಗಳು	27
8.	ಸಲಹೆ ಹಾಗು ಸಮಿತಿಗಳ ಮಾರ್ಗದರ್ಶಕರಾಗಿ	31
9.	ಸರ್ ಎಂ.ವಿ. ಮತ್ತು ಮಹಾತ್ಮಾ ಗಾಂಧಿ	35
10.	ವೈಯಕ್ತಿಕ ಹವ್ಯಾಸಗಳು ಮತ್ತು ದೃಷ್ಟಿಕೋನ	43
11.	ವಿದೇಶ ಪ್ರಯಾಣ	47
12.	ವಿಶ್ವೇಶ್ವರಯ್ಯನವರ ವಿಚಾರಧಾರೆಗಳು	51
13.	ಭಾರತ ರತ್ನ ಪುರಸ್ಕಾರ	55
14.	ಸರ್ ಎಂ.ವಿ. ಅವರ ಕೆಲವು ನುಡಿಮುತ್ತುಗಳು	59
15.	ಪ್ರಶಸ್ತಿಗಳು ಮತ್ತು ಸನ್ಮಾನ	63
16.	ವಿಶ್ವೇಶ್ವರಯ್ಯನವರ ಪ್ರಕಟಣೆಗಳು	65
17.	ಪಂಚಭೂತಗಳಲ್ಲಿ ಲೀನ	69
18.	ವಿಶ್ವೇಶ್ವರಯ್ಯನವರ ಬದುಕಿನ ಪ್ರಮುಖ ವರ್ಷಗಳು	73
19.	ಸರ್ ಎಂ.ವಿ.ಯವರ ಬಗೆಗೆ ಪ್ರಮುಖರ ಅನಿಸಿಕೆಗಳು	81

ಕೌಟುಂಬಿಕ ಹಿನ್ನೆಲೆ

ಸರ್ ಎಂ. ವಿ. ಅವರ ತಾಯಿ
ಶ್ರೀಮತಿ ವೆಂಕಟಲಕ್ಷ್ಮಮ್ಮ

ಭಾರತ ಕಂಡಂತಹ ಅಪರೂಪದ ಅನರ್ಘ್ಯ ರತ್ನಗಳಲ್ಲಿ ಸರ್ ಎಂ. ವಿ. ಅವರೂ ಒಬ್ಬರು. ಸರ್ ಎಂ. ವಿ. ಎಂದೇ ಸುಪ್ರಸಿದ್ಧರಾದವರು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ಈ ಮೋಕ್ಷಗುಂಡಂ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಒಂದು ಹಳ್ಳಿ.

ಶತಮಾನಗಳ ಹಿಂದೆ 'ಪಂತರು' ಎಂದು ಕರೆಯುಲ್ಪಡುವ ಕುಟುಂಬವೊಂದು ಮೋಕ್ಷಗುಂಡಂನಿಂದ ಹತ್ತಿರದ ಪಟ್ಟಣವಾದ ಅಂದಿನ ಮೈಸೂರು ರಾಜ್ಯದ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರಕ್ಕೆ ವಲಸೆ ಬಂದಿತ್ತು. 'ಪಂತರು' ಸಮಾಜಕ್ಕೆ ಮಹತ್ತರವಾದ ಸೇವೆಯನ್ನು ಸಲ್ಲಿಸುವುದರಲ್ಲಿ ಹೆಸರಾದವರು. ಸರ್ ಎಂ. ವಿ. ಅವರ ಪೂರ್ವಜರಲ್ಲಿ ಒಬ್ಬರಾದ ಲಕ್ಷ್ಮೀಪತಿ ಭಟ್ಟರು ಅಂದಿನ ಮಂತ್ರಿಗಳಾಗಿದ್ದು, ತಮ್ಮ ಸಮಾಜ ಸೇವೆಗಾಗಿ ಐದು ಹಳ್ಳಿಗಳನ್ನು ಕೊಡುಗೆಯಾಗಿ ಪಡೆದಿದ್ದರು. ಮುದುಪಳ್ಳಿ ಅವುಗಳಲ್ಲಿ ಒಂದು. ಇದನ್ನು ಮುದ್ದೇನಹಳ್ಳಿ ಎಂದೂ ಸಹ ಕರೆಯುತ್ತಾರೆ. ಇದೇ ಮುದ್ದೇನ ಹಳ್ಳಿಯ ಪಂತರ ವಂಶಕ್ಕೆ ಸೇರಿದ ಶ್ರೀನಿವಾಸ ಶಾಸ್ತ್ರಿಗಳು ಜ್ಯೋತಿಷ್ಯಶಾಸ್ತ್ರ ಹಾಗು ಔಷಧಶಾಸ್ತ್ರಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಇವರ ಎರಡನೇ ಹೆಂಡತಿಯಾದ ವೆಂಕಟಲಕ್ಷ್ಮಮ್ಮ ಎರಡನೇ ಮಗನಾಗಿ ವಿಶ್ವೇಶ್ವರಯ್ಯನವರು 15ನೇ ಸೆಪ್ಟೆಂಬರ್ 1860ರಂದು ಜನಿಸಿದರು. ವಿಶ್ವೇಶ್ವರಯ್ಯ ಅವರಿಗೆ ಮೂರು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರಿದ್ದರು.

ಸರ್ ಎಂ. ವಿ. ಅವರು ಹುಟ್ಟಿದ ಮನೆ, ಮುದ್ದೇನಹಳ್ಳಿ



ಸರ್ ಎಂ. ವಿ. ಯವರ ವಂಶವೃಕ್ಷ

ವಿದ್ಯಾರ್ಥಿ ಜೀವನ

ಸರ್ ಎಂ. ವಿ. ವಿದ್ಯಾರ್ಥಿಯಾಗಿ

ವಿಶ್ವೇಶ್ವರಯ್ಯನವರ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನೆರವೇರಿತು. ಇವರ ನಡವಳಿಕೆ ಹಾಗು ಬುದ್ಧಿವಂತಿಕೆ ಅಂದಿನ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ವೆಂಕಟಪತಿ ಅಯ್ಯಂಗಾರರ ಹಾಗು ಆ ಶಾಲೆಯ ಮೊದಲ ಸಹಾಯಕರಾಗಿದ್ದ ನಾಥಮುನಿನಾಯ್ಡು ಅವರ ಮೆಚ್ಚುಗೆಗೆ ಪಾತ್ರವಾಗಿತ್ತು. ನಾಯ್ಡು ಅವರಂತೂ ತಮ್ಮ ಮನೆಯಲ್ಲಿ ಹೆಚ್ಚಿನ ಕಲಿಕಾ ಮಾಹಿತಿಯನ್ನು ನೀಡುತ್ತಿದ್ದರು. ಹೀಗೆ ಬಾಲ್ಯದಿಂದಲೇ ವಿಶ್ವೇಶ್ವರಯ್ಯನವರು ಎಲ್ಲರ ಗಮನ ಸೆಳೆಯಲಾರಂಭಿಸಿದ್ದರು. ಅಷ್ಟರಲ್ಲೇ ತಂದೆಯುವರು ಇಹಲೋಕವನ್ನು ತ್ಯಜಿಸಿದ್ದರಿಂದ ತಾಯಿಯೊಂದಿಗೆ ಬೆಂಗಳೂರಿನಲ್ಲಿರುವ ಮಾವನ ಮನೆಗೆ ಹೆಚ್ಚಿನ ಶಿಕ್ಷಣಕ್ಕಾಗಿ ಬಂದರು.

ಮೈಸೂರು ಸರ್ಕಾರದಲ್ಲಿ ಉನ್ನತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಇವರ ಮಾವ ಶ್ರೀ ಎಚ್.ರಾಮಯ್ಯನವರು 1875ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಪ್ರವೇಶ ಪಡೆಯಲು ಆಸರೆಯಾದರು. ಇಲ್ಲಿಯೂ ಸಹ ವಿಶ್ವೇಶ್ವರಯ್ಯನವರು ತಮ್ಮ ನಡವಳಿಕೆಯಿಂದ ಗಣಿತ ಪ್ರಾಧ್ಯಾಪಕರು ಹಾಗು ಕಾಲೇಜಿನ ಪ್ರಾಂಶುಪಾಲರಾಗಿದ್ದ ವಾಟರ್ಸ್ ಅವರ ಗಮನಸೆಳೆದರು. ವಾಟರ್ಸ್ ಅವರ ನೆರವು ಹಾಗು ಪ್ರೋತ್ಸಾಹದಿಂದ ವಿಶ್ವೇಶ್ವರಯ್ಯನವರು ಪ್ರಥಮ ದರ್ಜೆಯಲ್ಲಿ ಪದವಿ ಪಡೆದುಕೊಂಡರು.

ವಾಟರ್ಸ್, ಪ್ರಾಂಶುಪಾಲರು,
ಗಣಿತದ ಪ್ರಾಧ್ಯಾಪಕರು
ಸೆಂಟ್ರಲ್ ಕಾಲೇಜು, ಬೆಂಗಳೂರು.

ನಿವೃತ್ತಿಯ ಅನಂತರ ವಾಟರ್ಸ್ ಅವರು ಲಂಡನ್ನಿಗೆ ತೆರಳಿದರು. ವಾಟರ್ಸ್ ಅವರ ದೇಹಾಂತ್ಯದ ಬಳಿಕ ಪತಿಯ ಇಚ್ಛೆಯನ್ನು ಪೂರ್ಣಗೊಳಿಸಲು ವಾಟರ್ಸ್‌ರ ಪತ್ನಿ ಭಾರತದಲ್ಲಿದ್ದ ತಮ್ಮ ಮುಂಬಯಿಯ ಮನೆಗೆ ಬಂದು ವಿಶ್ವೇಶ್ವರಯ್ಯನವರನ್ನು ಕರೆದು ತಮ್ಮ ಗುರುಗಳು ನೀಡಬಯಸಿದ್ದ

ವಾಟರ್ಸ್‌ರವರು ಉಡುಗೊರೆಯಾಗಿ ನೀಡಿದ ಚಿನ್ನದ ಕಫ್‌ಲಿಂಕ್ಸ್

ಎರಡು ಚಿನ್ನದ ಕಫ್‌ಲಿಂಕ್ಸ್‌ನ್ನು ಉಡುಗೊರೆಯಾಗಿ ನೀಡಿದರು. ಈ ಕಫ್‌ಲಿಂಕ್ಸ್‌ನ್ನು ವಿಶ್ವೇಶ್ವರಯ್ಯ ನವರು ಜೀವನದುದ್ದಕ್ಕೂ ಬಹಳ ಹೆಮ್ಮೆಯಿಂದ ಧರಿಸುತ್ತಿದ್ದರು.

ಬೆಂಗಳೂರಿನಲ್ಲಿ ಶಿಕ್ಷಣವು ಇಂದಿನಂತೆಯೇ ಅಂದೂ ಸಹಾ ದುಬಾರಿಯಾಗಿತ್ತು. ಆರ್ಥಿಕವಾಗಿ ಅಷ್ಟೇನೂ ಸಬಲರಾಗಿರದ ವಿಶ್ವೇಶ್ವರಯ್ಯನವರಿಗೆ ಶಿಕ್ಷಣದ ವೆಚ್ಚವನ್ನು ಭರಿಸುವುದು ಸ್ವಲ್ಪ ಕಷ್ಟವಾಗಿತ್ತು. ಆದ್ದರಿಂದ ಸರ್ ಎಂ. ವಿ. ಯವರು ಶಿಕ್ಷಣದ ಜೊತೆಜೊತೆಗೆ ಆದಾಯದ ಮೂಲ ವನ್ನೂ ಹುಡುಕಿಕೊಳ್ಳುವುದು ಅನಿವಾರ್ಯ ವಾಯಿತು. ಆಗ ವಿಶ್ವೇಶ್ವರಯ್ಯನವರು ವಿಧ್ಯಾರ್ಥಿ ಗಳಿಗೆ ಖಾಸಗಿಯಾಗಿ ಪಾಠ ಹೇಳಿಕೊಡುವ ಮೂಲಕ ಹಣಗಳಿಸಲು ಪ್ರಾರಂಭಿಸಿದರು. ಹೀಗೆ ಸರ್ ಎಂ. ವಿ. ಯವರ ಹತ್ತಿರ ಪಾಠ ಹೇಳಿಸಿಕೊಂಡ ವಿದ್ಯಾರ್ಥಿಗಳಲ್ಲಿ ಸಿ.ಎ. ನಂಜಪ್ಪ ಒಬ್ಬರು. ಅವರು ಮುಂದೆ ಮೈಸೂರು ಮೆಡಿಕಲ್ ಸರ್ವೀಸ್‌ನಲ್ಲಿ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರಾಗಿ ಹೆಸರು ಮಾಡಿದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ, ಸರ್ ಎಂ. ವಿ. ಯವರು ಆಗಿನ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ 1880ರಲ್ಲಿ ಬಿ.ಎ. ಪದವಿಯನ್ನು ಪಡೆದರು. ನಂತರ ಪೂನಾದಲ್ಲಿ (ಈಗ ಪುಣೆ) ವಿಜ್ಞಾನ ವಿದ್ಯಾಲಯವನ್ನು (ಇಂಜಿನಿಯರಿಂಗ್ ಕಾಲೇಜು ಆಕಾಲಕ್ಕೆ ಈ ಹೆಸರಿನಿಂದ ಕರೆಯಲ್ಪಡುತಿತ್ತು) ಮೈಸೂರು ರಾಜ್ಯದ ವಿದ್ಯಾರ್ಥಿವೇತನದೊಂದಿಗೆ ಸೇರಿಕೊಂಡರು. ಆ ವಯಸ್ಸಿನಲ್ಲಿಯೇ ಸರ್ ಎಂ. ವಿ. ಯವರು ಉಡುಗೆ ತೊಡುಗೆಗಳಲ್ಲಿ, ಹವ್ಯಾಸಗಳಲ್ಲಿ, ಗುಣನಡತೆಗಳಲ್ಲಿ, ದಿನನಿತ್ಯದ ಕೆಲಸಗಳಲ್ಲಿ, ನೈತಿಕ ಬಲವುಳ್ಳ ವ್ಯಕ್ತಿಗಳ ಜೊತೆಗಿನ ನಿರಂತರ ಒಡನಾಟ ಹಾಗು ವಾತುಕತೆಯಿಂದ ಪ್ರೇರಿತರಾಗಿದ್ದರು. ಪ್ರಸಿದ್ಧ ಸಂಸ್ಥೆಗಳಿಗೆ ಆಗಾಗ ಭೇಟಿ ನೀಡುವುದರ ಮೂಲಕ ಅಪಾರ ಅನುಭವ ಮತ್ತು ಜ್ಞಾನವನ್ನು ಸರ್ ಎಂ. ವಿ. ಯವರು ಪಡೆದರು.

1883 ನವೆಂಬರ್‌ನಲ್ಲಿ ಪೂನಾದಲ್ಲಿರುವ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಮೊದಲನೆಯ ರ್‍ಯಾಂಕ್‌ನೊಂದಿಗೆ Licentiate in Civil Engineering(L.C.E.) ಪದವಿಯನ್ನು ಪಡೆದುಕೊಂಡರು. (ಈ L.C.E. ಪದವಿಯು ಇಂದಿನ ಬಿ.ಇ.– ಸಿವಿಲ್ ಪದವಿಗೆ ಸರಿಸಮವಾದದ್ದು.)

ವೃತ್ತಿ ಜೀವನದ ಆರಂಭದ ಹೆಜ್ಜೆಗಳು

ಸರ್ ಎಂ. ವಿ. ಯವರು ಮೊದಲು ಕೆಲಸಕ್ಕೆ ಸೇರಿದ್ದು ಮಾರ್ಚ್ 1884ರಲ್ಲಿ. ಆಗ ಮುಂಬಯಿ ಸರಕಾರದ ವತಿಯಿಂದ Public Works Departmentನಲ್ಲಿ ಸಹಾಯಕ ಇಂಜಿನಿಯರ್ ಆಗಿ ನಾಸಿಕ್‌ನಲ್ಲಿ ನೇಮಿಸಲ್ಪಟ್ಟರು. ಅಲ್ಲಿಂದ ಸರ್ ಎಂ. ವಿ. ಯವರ ವೃತ್ತಿ ಜೀವನ ಬಹುಬೇಗ ಬೆಳೆಯತೊಡಗಿತು. 1884ರಿಂದ 1908ರವರೆಗೆ (24 ವರ್ಷ) ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡಿದ ಸರ್ ಎಂ. ವಿ. ತಮ್ಮ ಕ್ಷೇತ್ರದಲ್ಲಿ ಪ್ರಚಲಿತರಾಗಿದ್ದರು. ಪ್ರಧಾನ ಇಂಜಿನಿಯರ್ ಹುದ್ದೆಯನ್ನು ಬ್ರಿಟೀಷ್ ಅಧಿಕಾರಿಗಳಿಗೆ ಸೀಮಿತವಾದ್ದರಿಂದ ಆ ಹುದ್ದೆಗೆ ಅವಕಾಶ ಸಿಗಲಿಲ್ಲ.

1884ರಿಂದ 1908ರವರೆಗೆ ಸರ್ ಎಂ. ವಿ. ಯವರು ಕೆಳಕಂಡ ಕೆಲಸಗಳನ್ನು ನಿರ್ವಹಿಸಿದರು :

- 1884 – ಮುಂಬಯಿ ಸರಕಾರದಿಂದ Public Works Department ನಲ್ಲಿ ನೇಮಿಸಲ್ಪಟ್ಟು ಮಾರ್ಚ್ 1884ರಲ್ಲಿ ಕೆಲಸಕ್ಕೆ ಸೇರಿಕೊಂಡರು. ನಾಸಿಕ್ ಮತ್ತು ಖಾನ್‌ದೇಶ್‌ನಲ್ಲಿ ಸೇವೆ ಸಲ್ಲಿಸಿದರು.
- 1885 – ಹಂಗಾಮಿ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಕೆಲಸಮಾಡುತ್ತಾ ಇಲಾಖೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಅಕ್ಟೋಬರ್ 1885ರಲ್ಲಿ ಪ್ರಥಮ ದರ್ಜೆಯ ಸಹಾಯಕ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದರು.
- 1887 – ನವೆಂಬರ್‌ನಲ್ಲಿ ಸಿವಿಲ್ ಇಂಜಿನಿಯರ್ ಸಂಸ್ಥೆಯ (ಲಂಡನ್) ಅಸೋಸಿಯೇಟ್ ಮೆಂಬರ್ ಆದರು.
- 1891 – Deccan Club – ಪೂನಾದಲ್ಲಿ ಸ್ಥಾಪಿಸಲ್ಪಟ್ಟಿತು.
- 1894–95 – ಸುಕ್ಕೂರು ಚರಂಡಿ ಮತ್ತು ನೀರಿನ ಕೆಲಸಗಳಲ್ಲಿ ತೊಡಗಿಸಿಕೊಂಡರು.
- 1896 – ಸೂರತ್ ಜಿಲ್ಲೆಯಲ್ಲಿ ನೇಮಿಸಲ್ಪಟ್ಟರು.
- 1897 – ಪುನಃ ಪೂನಾದಲ್ಲಿ ಸಹಾಯಕ ಇಂಜಿನಿಯರ್‌ನಿಂದ ಪ್ರಧಾನ ಇಂಜಿನಿಯರ್ ಆಗಿ ನೇಮಿಸಲ್ಪಟ್ಟರು.
- 1898 – ಜಪಾನಿಗೆ ಭೇಟಿ ನೀಡಿದರು. ಆ ಪ್ರವಾಸ ಇವರಲ್ಲಿ ಸಾಕಷ್ಟು ಪ್ರಭಾವ ಬೀರಿತು.
- 1899 – ಪೂನಾದ ನೀರಾವರಿ ಜಿಲ್ಲೆಗೆ ಕಾರ್ಯನಿರ್ವಾಹಕ ಇಂಜಿನಿಯರ್ ಆದರು. ನೀರಾವರಿ ಕೆಲಸಗಳನ್ನು ಪೂನಾದಲ್ಲಿ ಪ್ರಾರಂಭಿಸಿದರು. ಪ್ರಗತಿಪರ ಜ್ಞಾಪಕ ಪತ್ರವನ್ನು ನೀರಾವರಿ ನಿಯೋಗಕ್ಕೆ

ಸಲ್ಲಿಸಿದರು ಮತ್ತು Block System of Irrigation ಎನ್ನುವ ವಿಚಾರವನ್ನು ಪ್ರಾರಂಭಿಸಿದರು.

- 1901 – ಮುಂಬಯಿ ಸರಕಾರದಿಂದ ಹಂಗಾಮಿ ಸ್ಯಾನಿಟರಿ ಇಂಜಿನಿಯರ್ ಆಗಿ ನೇಮಿಸಲ್ಪಟ್ಟರು. ಪೂನಾದ ಚರಂಡಿ ನೀರಿನ ವಿಲೇವಾರಿಗೆ ರಚನಾಕ್ರಮ ಕೈಗೊಂಡರು. ಬಹಳ ವರ್ಷ ಪೂನಾದಲ್ಲಿದ್ದುದರಿಂದ ಸರ್ ಎಂ. ವಿ. ಯವರಿಗೆ ರಾಣಡೇ, ಗೋಖಲೆ ಮತ್ತು ತಿಲಕರಂತಹ ಕೆಲವು ಸುಪ್ರಸಿದ್ಧ ವ್ಯಕ್ತಿಗಳ ಪರಿಚಯವಾಯಿತು.
- 1901–03 – ಸರ್ ಎಂ. ವಿ. ಪೂನಾದ ಖದಕವಾಸ್ಲಾ ಡ್ಯಾಮ್‌ನ ಯಾಂತ್ರಿಕ ಕಾಲುವೆ ಗೇಟ್‌ಗಳನ್ನು ಪೇಟೆಂಟ್ ಮಾಡಿದರು. ಈ ಕೆಲಸವನ್ನು ಕೆಳಗೆ ಅವರ ಶಬ್ದಗಳಲ್ಲಿ ವಿವರಿಸಲಾಗಿದೆ.


EIGHT ANNAS

This Indenture made the Seventeenth day of December One thousand nine hundred and two Between M. Visvesvaraya a Civil Engineer in the Public Works Department of the Bombay Presidency hereinafter called "the Patentee" which expression unless repugnant to the subject or context shall include his heirs executors administrators and assigns of the one part and George Gahagan, Roland Hayes Gahagan Edwin George Gahagan George Alfred Mayes Gahagan and Thomas Gahagan all of Bombay Europeans carrying on business in Bombay under the name and firm of Geo. Gahagan and Company Engineers and Contractors of Bombay hereinafter called "the Licensees" which expression shall unless repugnant to the subject or context be deemed to include the person or persons for the time being constituting the firm of Geo. Gahagan and Company of the other part Whereas in a specification filed in accordance with the Indian Invention Act No. 5 of 18[illegible] the Patentee has been granted the exclusive privilege of using exercising and vending in British India a certain invention of an improved system of Automatic Sluice Gates and of authorising others to make a copy of the specification

1901–1903 ರಲ್ಲಿ ಸರ್ ಎಂ. ವಿ. ಪೂನಾದ ಖದಕವಾಸ್ಲಾ ಡ್ಯಾಮ್‌ನ ಯಾಂತ್ರಿಕ ಕಾಲುವೆ ಗೇಟ್‌ಗಳನ್ನು ಪೇಟೆಂಟ್ ಮಾಡಿದರು (ಮೈಸೂರಿನ ಕೃಷ್ಣರಾಜ ಸಾಗರ ಮತ್ತು ಗ್ವಾಲಿಯರ್‌ನ ತಿಗ್ರಾ ಡ್ಯಾಮ್‌ಗಳಿಗೂ ಈ ಸೇವೆ ಕಲ್ಪಿಸಲಾಗಿತ್ತು) ಆದರೆ ಸರಕಾರದ ವತಿಯಿಂದ ಈ ಕೆಲಸವನ್ನು ಮಾಡಿದುದರಿಂದ ಇವರು ಯಾವುದೇ ರೀತಿಯ ಸಂಭಾವನೆಯನ್ನೂ ಪಡೆಯಲಿಲ್ಲ. 17–12–1902ರಲ್ಲಿ ಎಂ. ವಿಶ್ವೇಶ್ವರಯ್ಯ(ಪೇಟೆಂಟ್ ಪಡೆದವರು) ಮತ್ತು ಅನುಮತಿ ಪಡೆದವರ ಮಧ್ಯೆ ಮಾಡಿದ ಕರಾರು ಪತ್ರದ ಛಾಯಾಚಿತ್ರ ಇದಾಗಿದೆ.

"... ಪ್ರತೀ ವರ್ಷವೂ ಅಣೆಕಟ್ಟಿನ ಉಳಿತಾಯದ ಮಿತಿಗಿಂತ 6ರಿಂದ 8ಅಡಿ ಹೆಚ್ಚಿನ ನೀರು ಹೊರಗೆ ಹರಿದುಹೋಗುತ್ತಿತ್ತು. ಹಾಗಾಗಿ ಅಣೆಕಟ್ಟಿನ ಉಳಿತಾಯ ಮಿತಿಗಿಂತ 8 ಅಡಿ ಎತ್ತರದಲ್ಲಿ ಜಲಾಶಯದ ನೀರಿನ ಉಳಿತಾಯದ ಮಿತಿಯನ್ನು ಶಾಶ್ವತವಾಗಿ ಹೆಚ್ಚಿಸಲು ನಾನು ಯಾಂತ್ರಿಕ ಗೇಟನ್ನು ರಚಿಸಿದೆ. ಇದು ಅಣೆಕಟ್ಟನ್ನು ಎತ್ತರಮಾಡದೆಯೇ ಜಲಾಶಯದ ಶೇಖರಣಾ ಸಾಮರ್ಥ್ಯವನ್ನು ಶೇಕಡಾ 25ರಷ್ಟು ಹೆಚ್ಚಿಸಿದೆ. ಈ ಗೇಟ್‌ಗಳು ನೀರಿನ ಮಟ್ಟವು ಹಿಂದಿನ ಪ್ರವಾಹದಲ್ಲಿಯ ನೀರಿನ

ಸರ್ ಎಂ. ವಿ. ಯವರು ಭಾವನಗರದ ಮಹಾರಾಜಾ (ಗುಜರಾತ್) ಅವರ ಜೊತೆ ಬೋಟೆಡ್ ಟ್ಯಾಂಕ್‌ನ ಜಾಗವನ್ನು ಪರಿಶೀಲಿಸುತ್ತಿರುವುದು.

ಮಟ್ಟದವರೆಗೆ ಏರಲು ಬಿಡುತ್ತವೆ ಮತ್ತು ನೀರಿನ ಮಟ್ಟವು ಅದಕ್ಕಿಂತ ಹೆಚ್ಚಾದಾಗ ಗೇಟ್‌ಗಳು ಯಾಂತ್ರಿಕವಾಗಿ ತೆರೆದುಕೊಂಡು ಅಣೆಕಟ್ಟಿನಲ್ಲಿರುವ ಹೆಚ್ಚಿನ ನೀರನ್ನು ಹೊರಹೋಗಲು ಬಿಡುತ್ತದೆ. ನೀರಿನ ಮಟ್ಟವು ಜಲಾಶಯದ ನೀರಿನ ಉಳಿತಾಯದ ಮಟ್ಟಕ್ಕಿಂತ 8 ಅಡಿ ಕೆಳಗಿಳಿದಾಗ ಗೇಟುಗಳು ಯಾಂತ್ರಿಕವಾಗಿ ಮುಚ್ಚಿಕೊಳ್ಳುತ್ತವೆ ಮತ್ತು ಇನ್ನೂ ಹೆಚ್ಚಿನ ನೀರಿನ ನಷ್ಟವಾಗುವುದನ್ನು ತಪ್ಪಿಸುತ್ತವೆ."

ಈ ಮೇಲಿನ ಕೆಲಸವನ್ನು ಸರ್ ಎಂ. ವಿ. ಯವರು ಸರಕಾರದ ವತಿಯಿಂದ ಮಾಡಿರುವುದರಿಂದ ಯಾವುದೇ ರೀತಿಯ ಸಂಭಾವನೆಯನ್ನು ಪಡೆಯಲಿಲ್ಲ. ಇದೇ ರೀತಿಯ ಗೇಟ್‌ಗಳನ್ನು ಕೆಲವು ಇತರೇ ಜಲಾಶಯಗಳಿಗೂ ಅನಂತರ ಕಲ್ಪಿಸಲಾಗಿತ್ತು. (ಮೈಸೂರಿನ ಕೃಷ್ಣರಾಜ ಸಾಗರ ಜಲಾಶಯ ಮತ್ತು ಗ್ವಾಲಿಯರ್‌ನ ತಿಗ್ರಾ ಡ್ಯಾಮ್ ಇತ್ಯಾದಿ)

ವಿಶ್ವೇಶ್ವರಯ್ಯನವರ ಯಶಸ್ವೀ ಸಂಶೋಧನೆಗಳಲ್ಲಿ Block System of Irrigation ಕೂಡಾ ಒಂದು. ಈ ವ್ಯವಸ್ಥೆಯನ್ನು ನಾಲ್ಕು ವರ್ಷಗಳ ಪ್ರಯೋಗದ ನಂತರ ಅನುಷ್ಠಾನಗೊಳಿಸಲಾಯಿತು. ಮುಂಬಯಿ ಸರಕಾರದ ಹಿರಿಯ ಸದಸ್ಯರಾದ ಸರ್ ಜಾನ್ ಮುಯರ್ ಮೆಕೆನ್ಜಿಯವರು ಜನವರಿ 1908ರಂದು ಬಾಂಬೆಯ ಸಂಸದೀಯ ಸಭೆಯಲ್ಲಿ ಈ ವ್ಯವಸ್ಥೆಯನ್ನು ಅಧಿಕೃತವಾಗಿ ಅನುಷ್ಠಾನಗೊಳಿಸುತ್ತಾ ಈ ರೀತಿ ಹೇಳಿದರು–

" ಇದರ ಸಂಪೂರ್ಣ ಕೀರ್ತಿ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಸಲ್ಲುತ್ತದೆ. ಅವರ ಜೊತೆ ಕೆಲಸ ಮಾಡುವುದು ಒಂದು ಹೆಮ್ಮೆಯ ವಿಚಾರ ಎಂದರು."

ಸರ್ ಎಂ. ವಿ. ಯವರ ಸಾಧನೆಯು ಅವರಿಗೆ 1904ರಲ್ಲಿ Fellow of Bombay University ಆಗಿ ನೊಂದಾಯಿಸಿಕೊಳ್ಳುವ ಅವಕಾಶ ಮತ್ತು ಸರ್ಕಾರದ ಖಾಯಂ ಸ್ಯಾನಿಟರಿ ಇಂಜಿನಿಯರ್ ಆಗಿ ನೇಮಿಸಿಕೊಳ್ಳುವಂತಾಯಿತು.

1905ರಲ್ಲಿ ಪ್ರಸ್ತುತ ಜವಾಬ್ದಾರಿಗಳ ಜೊತೆಗೆ ಇವರು ನೀರಾವರಿ ಸರಬರಾಜಿಗೆ ವಿಶೇಷ ಅಧಿಕಾರಿಯಾಗಿ ನೇಮಿಸಲ್ಪಟ್ಟರು.

1906ರಲ್ಲಿ ಏಡೆನ್‌ನ ಬಂದರಿಗೆ ಪ್ರತಿನಿಧಿಯಾಗಿ ನಿಯೋಜಿಸಲ್ಪಟ್ಟರು. ಅಲ್ಲಿನ ಅಧಿಕಾರಿಗಳಿಗೆ ಒಳ ಚರಂಡಿ ವ್ಯವಸ್ಥೆಗೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಳನ್ನು ರೂಪಿಸುವಲ್ಲಿ ಸಹಾಯ ಮಾಡುವುದು ಈ ನಿಯೋಜನೆಯ ಉದ್ದೇಶವಾಗಿತ್ತು. ಇದೇ ರೀತಿಯ ವ್ಯವಸ್ಥೆಯು ಕೊಲ್ಲಾಪುರದಲ್ಲೂ ರಚಿಸಲ್ಪಟ್ಟಿತು.

1907ರಲ್ಲಿ ವಿಶ್ವೇಶ್ವರಯ್ಯನವರಿಗೆ ಮೂರು ವಿಭಾಗಗಳ ಮೇಲ್ವಿಚಾರಣೆಯನ್ನು ಹೆಚ್ಚುವರಿ ಜವಾಬ್ದಾರಿಯಾಗಿ ನೀಡಲಾಯಿತು. ಅಷ್ಟರ ಹೊತ್ತಿಗಾಗಲೇ ಸರ್ ಎಂ. ವಿ. ಯವರು ಸುಮರು 18 ಹಿರಿಯ ಅಧಿಕಾರಿಗಳನ್ನು ಹಿಂದಿಕ್ಕಿದ್ದರು. ಇದು ನಿಜಕ್ಕೂ ಪ್ರಶಂಸನೀಯ. ಸರ್ ಎಂ. ವಿ. ಯವರು ತಮ್ಮ ಬೆಳವಣಿಗೆಯಿಂದಾಗಿ ಪ್ರಧಾನ ಇಂಜಿನಿಯರ್ ಹುದ್ದೆಯು ತಾನಾಗಿಯೇ ಸಿಗಬಹುದೆಂದು ಕೊಂಡಿದ್ದರು.

ಅಮೇರಿಕಾದ ವಾಷಿಂಗ್ ಟನ್ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಂದಿನ ಟ್ಯೂರಿಸ್ಟ್ ಬಸ್‌ನಲ್ಲಿ ಪ್ರಯಾಣಿಸುತ್ತಿರುವುದು (1908)

ನಿವೃತ್ತಿಗೂ ಮೊದಲು 1908–09ರಲ್ಲಿ ಸರ್ ಎಂ. ವಿ. ಯವರು ಇಟಲಿ, ಇಂಗ್ಲೆಂಡ್, ಅಮೇರಿಕಾ, ಕೆನಡಾ, ಸ್ವೀಡನ್, ರಷ್ಯಾ ಇತ್ಯಾದಿ ದೇಶಗಳಿಗೆ

ತಮ್ಮ ರಜಾದಿನಗಳಲ್ಲಿ ಪ್ರವಾಸ ಕೈಗೊಂಡರು. ಸರ್ ಎಂ. ವಿ. ಯವರು ಇಟಲಿಯ ಮಿಲಾನ್‌ನಲ್ಲಿದ್ದಾಗ ಹೈದರಾ ಬಾದಿನ ನಿಜಾಮರ ಸರಕಾರದಿಂದ ಅವರಿಗೆ ಒಂದು ಸಂದೇಶ ಬಂತು. ಅವರು ಈ ಸಂದೇಶವನ್ನು ಸ್ವೀಕರಿಸಿ 1908 ಏಪ್ರಿಲ್ 15ರಂದು ಪ್ರಧಾನ ಇಂಜಿನಿಯರ್ ಆಗಿ ಸೇರಿ ಕೊಂಡರು. ಅವರನ್ನು ಈ ಕೆಳಕಂಡ ಸೇವೆ ಸಲ್ಲಿಸಲು ಕೇಳಿಕೊಳ್ಳಲಾಗಿತ್ತು.

- ಹೈದರಾಬಾದ್ ನಗರದ ಪುನರ್ ನಿರ್ಮಾಣಕ್ಕೆ ಸಹಾಯ ಮತ್ತು ಸಲಹೆ ನೀಡುವುದು
- ಭವಿಷ್ಯದಲ್ಲಿ ನಗರವನ್ನು ನೆರೆಯಿಂದ ಕಾಪಾಡಲು ಯೋಜನೆ ರೂಪು ಗೊಳಿಸುವುದು
- ಹೈದರಾಬಾದ್ ನಗರ ಮತ್ತು ಚಂದರ್ ಘಾಟ್‌ಗಳಿಗಾಗಿ ಚರಂಡಿ ವ್ಯವಸ್ಥೆಯ ಯೋಜನೆಯನ್ನು ರೂಪುಗೊಳಿಸುವುದು.

ಸರ್ ಎಂ. ವಿ. ಮುಂಬಯಿಯ ಸರಕಾರಿ ಸೇವೆಯನ್ನು ಬಿಟ್ಟಾಗ (1908)

ವಿಸ್ತಾರವಾದ ಸಮೀಕ್ಷೆ ಮತ್ತು ತಪಾಸಣೆಯ ನಂತರ ವಿಶ್ವೇಶ್ವರಯ್ಯನವರು ಜಲಾಶಯಗಳ ನಿರ್ಮಾಣಕ್ಕೆ ಸಲಹೆ ನೀಡಿದರು. ನಗರದ ಮೇಲ್ಭಾಗದಲ್ಲಿ 13.5 ಮತ್ತು 10.5 ಕಿಲೋ ಮೀಟರ್ ದೂರದಲ್ಲಿ ಒಂದು 'ಮೂಸಿ' ನದಿಗೆ ಅಡ್ಡಲಾಗಿ ಹಾಗೂ ಇನ್ನೊಂದು ಅದರ ಉಪನದಿಯಾದ 'ಇಸಿ'ಗೆ. ನಗರಗಳಲ್ಲಿರುವ ನದಿಯ ದಡಗಳನ್ನು ಎತ್ತರಕ್ಕೆ ಏರಿಸುವುದು ಆಧುನಿಕ ಚರಂಡಿ ವ್ಯವಸ್ಥೆಯನ್ನು ರೂಪಿಸುವುದು ಅವರು ಕೈಗೊಂಡ ಇತರ ಕೆಲಸಗಳು. ಈ ಕೆಲಸಗಳು ಪೂರ್ಣವಾದ ನಂತರ ಸರ್ ಎಂ. ವಿ. ಯವರು ಹೈದರಾಬಾದ್ ನಗರದಿಂದ ನಿರ್ಗಮಿಸಿದರು.

ಮುಂಬಯಿ ಸರಕಾರಕ್ಕೆ 24 ವರ್ಷ ಸೇವೆಸಲ್ಲಿಸಿದ ನಂತರ ತಮ್ಮ 47ನೇ ವಯಸ್ಸಿನಲ್ಲಿ ಸರ್ ಎಂ. ವಿ. ಯವರು ನಿವೃತ್ತಿ ಪಡೆದುಕೊಂಡರು. 1908ರಲ್ಲಿ ಅವರು ಕಚೇರಿಯಿಂದ ಹೊರಬಂದರು. ಅವರು ಪೂರ್ತಿ ನಿವೃತ್ತಿ ವೇತನ ಪಡೆಯುವುದಕ್ಕೆ ಅರ್ಹರಾಗಿಲ್ಲದಿದ್ದರೂ ಸಹಾ ಅವರ ಅಸಾಧಾರಣವಾದ ಪ್ರಶಂಸನೀಯ ಸೇವೆಯಿಂದಾಗಿ ಮಾರ್ಚ್ 1908ರಲ್ಲಿ ಮುಂಬಯಿ ಸರಕಾರವು ಭಾರತ ಸರಕಾರವನ್ನು ವಿಶೇಷ ಪರಿಗಣನೆಯ ಮೂಲಕ ಹೆಚ್ಚುವರಿ ವೇತನ ನೀಡಬೇಕೆಂದು ಕೇಳಿಕೊಂಡಿತು.

ಮುಂಬಯಿನಲ್ಲಿರುವಾಗ ವಿಶ್ವೇಶ್ವರಯ್ಯನವರು ಟಾಟಾರಂಥಹ ಅರ್ಥಿಕ ಸಹಾಯ ಮಾಡುವವರ ಜೊತೆ ಮತ್ತು ಇತರ ಕೆಲವು ಸಂಘ ಸಂಸ್ಥೆಗಳ ಜೊತೆ ಗೆಳೆತನ ಬೆಳೆಸಿಕೊಂಡಿದ್ದರು. ಟಾಟಾರವರಿಗೆ ಬೆಂಗಳೂರಿನಲ್ಲಿ ವಿಜ್ಞಾನ ಸಂಸ್ಥೆ ಪ್ರಾರಂಭಿಸಲು ಸಹಾಯಮಾಡುವಂತೆ ವಿಶ್ವೇಶ್ವರಯ್ಯನವರು ಅಂದಿನ ಮೈಸೂರಿನ ದಿವಾನರಾದ ಸರ್ ಪಿ. ಎನ್. ಕೃಷ್ಣಮೂರ್ತಿಯವರಿಗೆ ಒಂದು ಪತ್ರ ಬರೆದರು. ಮೈಸೂರಿನ ಅಧಿಕಾರಿಗಳು ಇದನ್ನು ಒಪ್ಪಿದರು. ಈ ರೀತಿಯಾಗಿ ಬೆಂಗಳೂರಿನಲ್ಲಿ 1908ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಪ್ರಾರಂಭಿಸಲ್ಪಟ್ಟಿತು.

1909 ಮಾರ್ಚ್‌ನಲ್ಲಿ ದಿವಾನರಾಗಿದ್ದ ಮಾಧವರಾವ್ ಅವರು ನಿವೃತ್ತಿ ಹೊಂದಿದ ಕಾರಣ ಮೇ 1909ರಲ್ಲಿ ಟಿ. ಆನಂದ್‌ರಾವ್ ಅವರು ಮೈಸೂರಿನ ದಿವಾನರಾಗಿ ಅಧಿಕಾರ ವಹಿಸಿಕೊಂಡರು. ಅದೇ ವೇಳೆಗೆ ಅಂದರೆ ಜೂನ್ 1909ರಲ್ಲಿ ಪ್ರಧಾನ ಇಂಜಿನಿಯರ್ ಆಗಿದ್ದ ಎಂ. ಮ್ಯಾಕ್‌ಹುಚೀನ್ ಅವರು ನಿವೃತ್ತರಾಗಿದ್ದರು. ಆನಂದರಾವ್ ಅವರು ಮುಖ್ಯ ಇಂಜಿನಿಯರಾಗಿ ಸೇವೆ ಸಲ್ಲಿಸಲು ವಿಶ್ವೇಶ್ವರಯ್ಯ ಅವರನ್ನು ಆಹ್ವಾನಿಸಿದರು. ಸರ್ಕಾರವು ಕೈಗಾರಿಕೆಗಳಿಗೆ ಉತ್ತೇಜನ ನೀಡುವುದಾದರೆ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದಾದರೆ ಮಾತ್ರ ನಾನು ಬರಲು ಸಿದ್ಧ ಎಂದು ವಿಶ್ವೇಶ್ವರಯ್ಯನವರು ಹೇಳಿದರು. ಇದಕ್ಕೆ ದಿವಾನರಿಂದ ಒಪ್ಪಿಗೆ ದೊರೆಯಿತು. ಈ ಭರವಸೆಯ ಮೇರೆಗೆ ವಿಶ್ವೇಶ್ವರಯ್ಯನವರು ನವೆಂಬರ್ 15, 1909ರಲ್ಲಿ ಪ್ರಧಾನ ಇಂಜಿನಿಯರ್ ಆಗಿ ನೇಮಕಗೊಳ್ಳುವುದರ ಜೊತೆಗೆ ಸರ್ಕಾರಿ ರೈಲ್ವೆಗೆ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟರು. ಇಲ್ಲಿಂದ ಮೈಸೂರು ಸರ್ಕಾರದ ವತಿಯಿಂದ ಸೇವೆಯನ್ನು ಪ್ರಾರಂಭಿಸಿದರು.

ಪ್ರಧಾನ ಇಂಜಿನಿಯರಾಗಿ ವಿಶ್ವೇಶ್ವರಯ್ಯ

ಮೈಸೂರಿನ ಪ್ರಧಾನ ಎಂಜಿನಿಯರ್ ಆಗಿ ಸರ್ ಎಂ. ವಿ. (1909–1912)

ಸರ್ ಕೆ. ಶೇಷಾದ್ರಿ ಐಯ್ಯರ್‌ರವರು ಮೈಸೂರಿನ ದಿವಾನರಗಿದ್ದ ಸಮಯದಲ್ಲಿ ಶಿವನಸಮುದ್ರದಲ್ಲಿರುವ ಕಾವೇರಿ ಜಲಪಾತವು 9,700 ಕಿಲೋ ವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುತ್ತಿತ್ತು. ಇದರಿಂದ 8,200ಕಿಲೋ ವ್ಯಾಟ್ ವಿದ್ಯುತ್ತನ್ನು 140ಕಿಲೋ ಮೀಟರ್ ದೂರದಲ್ಲಿರುವ ಕೋಲಾರದ ಚಿನ್ನದ ಗಣಿಗೆ ಸರಬರಾಜು ಮಾಡಲಾಗುತ್ತಿತ್ತು. ಬೇಸಿಗೆಯ ಸಮಯದಲ್ಲಿ ನೀರಿನ ಪ್ರವಾಹವು ತುಂಬಾ ಕಡಿಮೆಯಿದ್ದಾಗ ವಿದ್ಯುತ್ತಿನ ಸರಬರಾಜು ಅನಿಯಮಿತವಾಗಿರುತ್ತಿತ್ತು. ಶ್ರೀರಂಗ ಪಟ್ಟಣದಿಂದ 15ಕಿಲೋ ಮೀಟರ್ ದೂರದಲ್ಲಿರುವ ಕನ್ನಂಬಾಡಿ ಊರಿನಲ್ಲಿ ಅಣೆಕಟ್ಟಿನ ರಚನೆಗೆ ಯೋಜನೆಗಳನ್ನು ಹಾಕಿಕೊಳ್ಳಲಾಗಿತ್ತು. ಆದರೆ ಹೆಚ್ಚಿನ ಕೆಲಸಗಳೇನೂ ಆಗಿರಲಿಲ್ಲ. ಆಗ ವಿದ್ಯುತ್ ನಿಗಮಕ್ಕೆ ಸರಕಾರದ ಕಾರ್ಯದರ್ಶಿಯಾಗಿದ್ದ ವಿಶ್ವೇಶ್ವರಯ್ಯನವರು ಕಾವೇರಿಯ ನೀರನ್ನು ನೀರಾವರಿ ಹಾಗೂ ವಿದ್ಯುತ್ ಉತ್ಪಾದನೆ ಎರಡಕ್ಕೂ ಉಪಯೋಗಿಸುವಂತಹ ಯೋಜನೆಯನ್ನು ರೂಪಿಸಿದರು. ಅನಂತರ ಕೋಲಾರದ ಚಿನ್ನದ ಗಣಿಯ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿರುವ ಕಾರ್ಯದರ್ಶಿ ಗಳೊಂದಿಗೆ ಹಾಗೂ Chief Electrical Engineer ಆದಂತಹ ಎಚ್. ಪಿ. ಗಿಬ್ಸ್ ಅವರೊಂದಿಗೆ ಚರ್ಚಿಸಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದರು.

48,000 ಮಿಲಿಯನ್ ಕ್ಯುಬಿಕ್ ಅಡಿ ನೀರನ್ನು ಶೇಖರಿಸಿಡಲು 124 ಅಡಿ ಎತ್ತರದ ಕಲ್ಲಿನ ಅಣೆಕಟ್ಟನ್ನು ನಿರ್ಮಿಸಲು ಉದ್ದೇಶಿಸಲಾಯಿತು. ಇದು 60,000 ಕಿಲೋ ವ್ಯಾಟ್ ಗಿಂತಲೂ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಹಾಗೂ 1,50,000 ಎಕರೆ ಪ್ರದೇಶಗಳಿಗೆ ನೀರಾವರಿಗಾಗಿ ಉಪಯೋಗಿಸಲು ತೀರ್ಮಾನಿಸಲಾಯಿತು.

ಈ ಯೋಜನೆಯು ಕೋಲಾರದ ಚಿನ್ನದ ಗಣಿಯ ವಿದ್ಯುತ್ತಿನ ಅವಶ್ಯಕತೆಯನ್ನು ಮತ್ತು ಮೈಸೂರಿನ ಹಾಗೂ ಬೆಂಗಳೂರಿನ ಕೈಗಾರಿಕೆಗಳ ವಿದ್ಯುತ್ ಅವಶ್ಯಕತೆಯನ್ನೂ ಸಹ ಪೂರೈಸುತ್ತದೆ ಎಂದು ಅಂದಾಜಿಸಲಾಗಿತ್ತು. ಈ ಯೋಜನೆಗೆ 2.5 ಕೋಟಿ ಹಣ ಖರ್ಚಾಗುವುದೆಂದು ಅಂದಾಜಿಸಲಾಗಿತ್ತು. ಇಷ್ಟು ಮೊತ್ತದ ಹಣ ಖರ್ಚು

ಮಾಡುವುದು ಸರ್ಕಾರಕ್ಕೆ ಮತ್ತು ಜನರಿಗೆ ಇಷ್ಟವಿರಲಿಲ್ಲ. ಆದ್ದರಿಂದ ಈ ಯೋಜನೆಯು ಅಲ್ಲಿಯೇ ನಿಂತು ಬಿಟ್ಟಿತು. ಇದರಿಂದ ಬೇಸರಗೊಂಡ ವಿಶ್ವೇಶ್ವರಯ್ಯನವರು ಕೆಲಕಾಲ ರಜೆ ತೆಗೆದುಕೊಂಡರು. ಅವರು ರಜೆಯಿಂದ ಹಿಂತಿರುಗಿದ ಅನಂತರ ಈ ಯೋಜನೆಗೆ ಸರ್ಕಾರವು ಯಾವುದೇ ಮಾರ್ಪಾಡು ಇಲ್ಲದೆ ಒಪ್ಪಿಗೆ ನೀಡಿತು.

ಮದ್ರಾಸ್ ಸರ್ಕಾರವು ಕನ್ನಂಬಾಡಿ ಅಣೇಕಟ್ಟಿನಿಂದ 100 ಕಿ.ಮೀ. ಕೆಳಗೆ ಅಣೇಕಟ್ಟೊಂದನ್ನು ಕಟ್ಟುವ ಯೋಜನೆ ಹಾಕಿಕೊಂಡಿದ್ದರಿಂದ ಮತ್ತು ಈ ಮೆಟ್ಟೂರು ನದಿಗೆ ಕಾವೇರಿ ನದಿಯಿಂದ ಸಾಕಷ್ಟು ನೀರು ಸಿಗದೆ ಇರಬಹುದು ಎನ್ನುವ ಕಾರಣದಿಂದ ಈ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಪ್ರಾರಂಭದ ತೊಂದರೆಗಳಾದವು. ವೈಸ್‌ರಾಯ್ ಅವರ ಮುಂದೆ ವಿಶ್ವೇಶ್ವರಯ್ಯನವರ ಧನಾತ್ಮಕ ಚರ್ಚೆಯಿಂದಾಗಿ ಮೊದಲ ಹಂತದ ಕೆಲಸಕ್ಕೆ ಒಪ್ಪಿಗೆ ಸಿಕ್ಕಿತು. ಕೊನೆಗೆ Arbitration Committee ಕೊಟ್ಟ ತೀರ್ಪಿನಿಂದಾಗಿ ಯೋಜನೆಯನ್ನು ಮೊದಲಿನಂತೆಯೇ ಜಾರಿಗೊಳಿಸಲು ತೀರ್ಮಾನಿಸಲಾಯಿತು. ಇಡೀ ಯೋಜನೆಯು ವೇಗವಾಗಿ ಮುಗಿಯಿತು. ಇಂದು ಇದೇ ಜಲಾಶಯವೇ ಕೃಷ್ಣರಾಜಸಾಗರ ಎಂದು ಜನಪ್ರಿಯವಾಗಿರುವುದು.

ಅಕ್ಟೋಬರ್ 07, 1916ರಂದು ವಿಶ್ವೇಶ್ವರಯ್ಯನವರು Mysore Representative Assembly ಯಲ್ಲಿ ಮೈಸೂರಿನ ತಾರ್ಕಿಕವಾದ ಹಕ್ಕುಗಳನ್ನು ಈ ರೀತಿ ವಿವರಿಸಿದರು.



ಬ್ರಿಟೀಷ್ ಸರಕಾರವು 1915ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯರವರಿಗೆ ನೈಟ್ ಕಮಾಂಡರ್ ಆಫ್ ಇಂಡಿಯನ್ ಎಂಪೈರ್ (K.C.I.E) ಬಿರುದು ನೀಡಿತು. ಈ ಬಿರುದು ಅವರ ಹೆಸರಿನ ಜೊತೆ 'ಸರ್' ಎನ್ನುವ ಪದವನ್ನು ಉಪಯೋಗಿಸಲು ಅನುವು ಮಾಡಿಕೊಟ್ಟಿತು. ಅಲ್ಲಿಂದಲೇ ಅವರು ಸರ್ ಎಂ. ವಿಶ್ವೇಶ್ವರಯ್ಯ ಎನ್ನುವ ಹೆಸರಿನಿಂದ ಖ್ಯಾತರಾದರು. ಈ ಚಿತ್ರದಲ್ಲಿರುವುದು K.C.I.E ಬಿರುದಿನ ಬಾಕ್ಸ್ ಮತ್ತು ಪದಕ.

ಮೈಸೂರಿನ 1,15,000 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ಕಾವೇರಿ ನದಿಯಿಂದ ನೀರುಣಿಸಲ್ಪಡುತ್ತಿದೆ. ನದಿಯ ಬುಡದಲ್ಲಿರುವ ಮದ್ರಾಸಿನ ಅಧಿಪತ್ಯದಲ್ಲಿರುವ 12,25,500 ಎಕರೆ ಪ್ರದೇಶವು ಇದೇ ರೀತಿಯ ಪ್ರಯೋಜನವನ್ನು ಪಡೆದುಕೊಳ್ಳುತ್ತಿದೆ. ಅಂದರೆ ಮದ್ರಾಸಿನ ಅಧಿಪತ್ಯದಲ್ಲಿರುವ ಕಾವೇರಿ ನದಿಯಿಂದಾಗಿ ಶೇಕಡಾ 92 ಭಾಗವು ನೀರಾವರಿ ಪ್ರಯೋಜನವನ್ನು ಪಡೆದುಕೊಳ್ಳುತ್ತಿದೆ ಮತ್ತು ಮೈಸೂರಿನ ಶೇಕಡಾ 8 ಭಾಗ ಮಾತ್ರ ಈ ರೀತಿಯ ಪ್ರಯೋಜನ ಪಡೆದುಕೊಳ್ಳುತ್ತಿದೆ.

"...... ಮೈಸೂರು ನೀಡಿದ ಸಂಪೂರ್ಣ ಹರಿವಿನ ಅಧಿಕ ಭಾಗಕ್ಕೆ ಹೋಲಿಸಿದರೆ ರಾಜ್ಯ ಪಡೆದುಕೊಂಡ ಲಾಭವು ಸಂಪೂರ್ಣವಾಗಿ ಅಸಮರ್ಪಕವಾಗಿದೆ....."

"ಮೈಸೂರು ಮತ್ತು ಮದ್ರಾಸಿನ ನೀರಾವರಿಗೆ ಬಳಸಿಕೊಂಡ ನಂತರವೂ ಪ್ರತೀ ವರ್ಷ ನದಿಯ ಹರಿವಿನ ಅಧಿಕ ಭಾಗವು ಪ್ರಯೋಜನವಿಲ್ಲದೆ ಸಮುದ್ರ ಸೇರುತ್ತಿದೆ. ನದಿಯ ಹರಿವಿನ ಕೇವಲ ಸಣ್ಣ ಭಾಗವನ್ನು ಹಿಡಿದಿಟ್ಟುಕೊಳ್ಳಲು ಈ ಯೋಜನೆಯನ್ನು ಉದ್ದೇಶಿಸಲಾಗಿದೆ."

"ಮೈಸೂರು ರಾಜ್ಯದಲ್ಲಿ ವಿಸ್ತರಿಸಲು ಪ್ರಸ್ತಾಪಿಸಿದ ನೀರಾವರಿಯು ಕೇವಲ 1,50,000 ಎಕರೆ ಮಾತ್ರ. ಆದರೆ ಮದ್ರಾಸ್ ಅಧಿಪತ್ಯವು ಈಗಾಗಲೇ ದೊಡ್ಡದಿರುವ ನೀರಾವರಿಯನ್ನು 3,20,000 ಎಕರೆಗಳಿಗೆ ವಿಸ್ತರಿಸಲು ಅವಲೋಕಿಸುತ್ತಿದೆ, ಅಂದರೆ ಮೈಸೂರಿನ ಜಲಾಶಯದಿಂದ ನೀರಾವರಿಗೊಳಪಡುವ ಪ್ರದೇಶಕ್ಕಿಂತ ಎರಡು ಪಟ್ಟು ಹೆಚ್ಚಿನ ಪ್ರದೇಶ ನೀರಾವರಿಗೊಳಪಡುತ್ತದೆ."

ಆ ದಿನದವರೆಗೆ ಕೃಷ್ಣರಾಜಸಾಗರ ಜಲಾಶಯವು ಭಾರತದಲ್ಲಿ ಕಟ್ಟಿದ ಅತೀ ದೊಡ್ಡ ಜಲಾಶಯುವಾಗಿತ್ತು. ಇದು ಒಂದು ಬಹು ಉಪಯೋಗಿ ಯೋಜನೆಯಾಗಿದ್ದು ನೀರಾವರಿ ಮತ್ತು ವಿದ್ಯುತ್ ಸರಬರಾಜು ಎರಡರಲ್ಲೂ ಉಪಯೋಗಕಾರಿಯಾಗಿತ್ತು. ಮಂಡ್ಯದ ಕಬ್ಬಿನ ಕಾರ್ಖಾನೆ ಮತ್ತು ಅದರ ಸುತ್ತ ಮುತ್ತ ಬೆಳೆವ ಅರ್ಥಿಕ ಬೆಳೆಯಾದ ಕಬ್ಬು ಇವತ್ತಿಗೂ ಜೀವಂತವಾಗಿದೆ ಎಂದರೆ ಅದಕ್ಕೆ ಕಾರಣ ಕೃಷ್ಣರಾಜಸಾಗರ ಜಲಾಶಯ.

ವಿಶ್ವೇಶ್ವರಯ್ಯನವರು ಮುಖ್ಯಸ್ಥರಾಗಿದ್ದ ಸಮಿತಿಯು ಶೈಕ್ಷಣಿಕ ಕ್ಷೇತ್ರದಲ್ಲಿ ಬೆಳವಣಿಗೆಯನ್ನುಂಟುಮಾಡುವ ಕೆಲಸವನ್ನು ಕೈಗೆತ್ತಿಕೊಂಡಿತು. ಸೆಪ್ಟೆಂಬರ್ 1912ರಲ್ಲಿ ಸರಕಾರಕ್ಕೆ ತಾಂತ್ರಿಕ ಶಿಕ್ಷಣದ ಮೇಲಿನ ವರದಿಯನ್ನು ಮಂಡಿಸಲಾಯಿತು.

ಆ ಸಮಯದಲ್ಲಿ ಬೆಂಗಳೂರು-ಹರಿಹರ, ಬೆಂಗಳೂರು-ಗುಂತಕಲ್, ಬೆಂಗಳೂರು-ಮದ್ರಾಸ್‌ನಂತಹ ಮುಖ್ಯ ರೈಲ್ವೇ ಮಾರ್ಗಗಳನ್ನು ಹೊರದೇಶದ ಖಾಸಗೀ ಸಂಸ್ಥೆಗಳು ನಡೆಸುತ್ತಿದ್ದವು. ರಾಜ್ಯದಲ್ಲಿ ಇದರ ಕಾರ್ಯನಿರ್ವಹಣೆಯನ್ನು ಮತ್ತು ರೈಲ್ವೇ ನಿಗಮದ ಆರ್ಥಿಕ ವ್ಯವಹಾರವನ್ನು ಸರಕಾರವು ತೆಗೆದುಕೊಳ್ಳಬೇಕು ಎಂದು ವಿಶ್ವೇಶ್ವರಯ್ಯನವರು ಅಪೇಕ್ಷೆ ಪಟ್ಟರು. ದಿಲ್ಲಿ ಮತ್ತು ಲಂಡನ್‌ನಲ್ಲಿ ಮೇಲ್ಮಟ್ಟದ ಮಾತುಕತೆ ನಡೆಸಿದ ನಂತರ ರೈಲ್ವೇ ನಿಗಮದ ಆರ್ಥಿಕ ವ್ಯವಹಾರವನ್ನು ಸರಕಾರವು ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಲಾಯಿತು.

ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿ
*ಸರ್ ಎಂ. ವಿಶ್ವೇಶ್ವರಯ್ಯನವರು **(1880)***

ದಿವಾನರಾಗಿ ವಿಶ್ವೇಶ್ವರಯ್ಯ

1912ರಲ್ಲಿ ಟಿ. ಆನಂದರಾವ್ ಅವರು ತಮ್ಮ ದಿವಾನಗಿರಿಯಿಂದ ನಿವೃತ್ತಿ ಹೊಂದಿದರು. ಆ ಸಮಯದಲ್ಲಿ ಹಿರಿಯ ಮತ್ತು ಅನುಭವಿ ಕಾರ್ಯ ನಿರ್ವಾಹಕರು ಲಭ್ಯ ವಿದ್ದರೂ, ಮಹಾರಾಜರಿಗೆ ವಿಶ್ವೇಶ್ವರಯ್ಯನವರಿಗೆ ದಿವಾನಗಿರಿ ನೀಡಬೇಕು ಎನ್ನುವ ಹಂಬಲ ವಿತ್ತು. ಅವರು ಇದರ ಬಗ್ಗೆ ವಿಶ್ವೇಶ್ವರಯ್ಯ ಅವರ ಹತ್ತಿರ ವಿನಂತಿಸಿಕೊಂಡಾಗ ಅದಕ್ಕೆ ವಿಶ್ವೇಶ್ವರಯ್ಯನವರು ಒಪ್ಪಿಗೆ ಸೂಚಿಸಿದರು. ವಿಶ್ವೇಶ್ವರಯ್ಯ ನವರು 1912 ನವೆಂಬರ್‌ನಲ್ಲಿ ಮೈಸೂರಿನ ದಿವಾನರಾಗಿ ಅಧಿಕಾರ ವಹಿಸಿ ಕೊಂಡರು.

ಮೈಸೂರಿನ ದಿವಾನರಾಗಿ ಸರ್ ಎಂ. ವಿ.
(1912–1918)

ಹೊಸ ಕೆಲಸವನ್ನು ಪ್ರಾರಂಭಿಸುವುದಕ್ಕೆ ಹಿಂದೇಟು ಹಾಕುವುದು, ಮಹತ್ವಾಕಾಂಕ್ಷೆ ಇಲ್ಲದಿರುವುದು ಮತ್ತು ಸಂಘಟನಾ ಶಕ್ತಿಯ ಕೊರತೆ ಇವು ಜನಸಾಮಾನ್ಯರು ಅನುಭವಿಸುತ್ತಿರುವ ಸಮಸ್ಯೆಗಳು ಎನ್ನುವುದನ್ನು ತಮ್ಮ ಕೆಲಸದ ಆರಂಭದಲ್ಲಿಯೇ ವಿಶ್ವೇಶ್ವರಯ್ಯನವರು ಅರಿತುಕೊಂಡರು. ಈ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ತಮ್ಮ ಯೋಜನೆಗಳನ್ನು ರೂಪಿಸಿದರು. "ಉತ್ತಮವಾಗಿ ಕೆಲಸ ಮಾಡು, ಉತ್ತಮವಾಗಿ ಗಳಿಸು ಮತ್ತು ಉತ್ತಮವಾಗಿ ಜೀವಿಸು" ಎನ್ನುವುದು ಇವರ ಸಿದ್ಧಾಂತವಾಗಿತ್ತು. ಜನರನ್ನು ಈ ದಿಸೆಯಲ್ಲಿ ಸಿದ್ಧಮಾಡುವುದು ಇವರ ಗುರಿಯಾಗಿತ್ತು. ಸರ್ ಎಂ. ವಿ. ಯವರಿಗೆ ತಮ್ಮ ಸ್ವಂತ ಏಳಿಗೆಯ ಬಗ್ಗೆ ಯಾವುದೇ ಆಸೆಯಿರಲಿಲ್ಲ. ಅವರ ಬಳಿ ಅಧಿಕಾರವಿತ್ತು. ಅವರು ಬಯಸಿದ ಉದ್ಯಮ ಮಾಡುವ ಸ್ವತಂತ್ರವಿದ್ದಿತು. ಕೌಟುಂಬಿಕ ಹಾಗೂ ಸ್ವಂತ ವಿಚಾರಗಳಿಗೆ ಯಾವುದೇ ಅಡ್ಡಿ ಆತಂಕಗಳಿರಲಿಲ್ಲ. ಇವರ ದಿವಾನಗಿರಿಯ ಉದ್ದಕ್ಕೂ ಮೈಸೂರು ರಾಜ್ಯವು ಹೊಸ ಜೀವಕಳೆ ಮತ್ತು ಚಟುವಟಿಕೆಗಳಿಂದ ಅಭಿವೃದ್ಧಿಯತ್ತ ಸಾಗಿತು.

ವಿಶ್ವೇಶ್ವರಯ್ಯನವರು "ಸಮರ್ಪಕ ಲೆಕ್ಕಶೋಧನೆ (Efficiency Auditing)" ಎನ್ನುವ ವ್ಯವಸ್ಥೆಯನ್ನು ಸರಕಾರೀ ವಿಭಾಗಗಳಲ್ಲಿ ಮತ್ತು ಸರಕಾರೀ ಸೇವೆಯಲ್ಲಿರುವ ಜನರಲ್ಲಿರುವ ಶಿಸ್ತು ಮತ್ತು ದಕ್ಷತೆಯನ್ನು ಉಳಿಸುಕೊಳ್ಳುವ ಉದ್ದೇಶದಿಂದ

ನಿರಂತರವಾಗಿ ಜಾರಿಯಲ್ಲಿರಿಸಿದರು. 1913ರಲ್ಲಿ ಅವರು Mysore Representative Assembly ಯನ್ನುದ್ದೇಶಿಸಿ ಮಾತನಾಡುವಾಗ ಈ ವಿಚಾರದ ಕುರಿತಾಗಿ ತರ್ಕಬದ್ಧವಾದ ವಿವರಣೆಯನ್ನು ಈ ಕೆಳಗಿನಂತೆ ನೀಡಿದರು.

"ನಮ್ಮ ದೇಶದಲ್ಲಿ ಯುರೋಪಿಯನ್ ಮಾದರಿಯಲ್ಲಿ ಸರಕಾರೀ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ. ಆದರೆ ಇಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಲ್ಪಟ್ಟ ಉದ್ಯೋಗಿಗಳಲ್ಲಿ ಯುರೋಪಿನ ವ್ಯಾವಹಾರಿಕ ಹವ್ಯಾಸಗಳನ್ನು ಅನುಸರಿಸುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ Efficiency Auditing ಕೂಡಾ ಆರ್ಥಿಕ ಲೆಕ್ಕಶೋಧನೆಯಷ್ಟೇ ಮುಖ್ಯ."

ಲಾರ್ಡ್ ಮತ್ತು ಲೇಡಿ ಹಾರ್ಡಿಂಜ್‌ಯವರು
ಮೈಸೂರಿಗೆ ಭೇಟಿ ಕೊಟ್ಟಾಗ ಅವರ ಜೊತೆ ಸರ್ ಎಂ. ವಿ. (1913)

ಆರ್ಥಿಕ ಸಮಿತಿಯು ವಿಶ್ವೇಶ್ವರಯ್ಯನವರ ನಿರ್ದೇಶನದಂತೆ ಈ ಕೆಳಕಂಡ ಸಂಸ್ಥೆಗಳನ್ನು ಪ್ರಾರಂಭಿಸಿತು:

- ಮೈಸೂರು ವಿಶ್ವವಿದ್ಯಾನಿಲಯ (ಜುಲೈ 01, 1916)
- ಬೆಂಗಳೂರಿನಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು (1916)
- ಮಹಿಳಾ ಕಾಲೇಜು, ಮಹಿಳೆಯರ ಹಾಸ್ಟೆಲಿನ ಜೊತೆಗೆ (1916)
- ಬ್ಯಾಂಕ್ ಆಫ್ ಮೈಸೂರು (ಅಕ್ಟೋಬರ್ 1913)
- ದಿ ಮೈಸೂರು ಚೇಂಬರ್ ಆಫ್ ಕಾಮರ್ಸ್ (1916).

- ಮೈಸೂರಿನ ಹತ್ತಿರ ಕೃಷ್ಣರಾಜೇಂದ್ರ ಟೆಕ್ಸ್‌ಟೈಲ್ ಮಿಲ್ (1916).
- ಗಂಧದ ಮರದ ಎಣ್ಣೆಯ ಫ್ಯಾಕ್ಟರಿ (1916).
- ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಭದ್ರಾವತಿ (1918).
- ಭದ್ರಾವತಿಯ ಹತ್ತಿರ ಸಿಮೆಂಟ್ ಮತ್ತು ಪೇಪರ್ ಉದ್ಯಮಗಳ ಅಭಿವೃದ್ಧಿ.
- ರೈಲ್ವೇ ಹಳಿಗಳು ಬೀರೂರು-ಶಿವಮೊಗ್ಗ, ನಂಜನಗೂಡು-ಚಾಮರಾಜನಗರ, ಮೈಸೂರು-ಅರಸೀಕೆರೆ, ಬೆಂಗಳೂರು-ಕೋಲಾರ ಮಾರ್ಗವಾಗಿ ಚಿಕ್ಕಬಳ್ಳಾಪುರ.
- ಮೈಸೂರಿನಲ್ಲಿ ತಾಂತ್ರಿಕ ಮತ್ತು ಕೈಗಾರಿಕಾ ತರಬೇತಿ ಕೇಂದ್ರ (1914).
- ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಸಾರ್ವಜನಿಕ ಗ್ರಂಥಾಲಯ(1915).
- ಈಗಿರುವ ಆಸ್ಪತ್ರೆಗಳ ಅಭಿವೃದ್ಧಿ ಮತ್ತು ಹೊಸ ಆಸ್ಪತ್ರೆಗಳ ನಿರ್ಮಾಣ.
- ಜಪಾನಿನ ಅನುಭವಿಗಳಿಂದ ರೇಷ್ಮೆ ಕೈಗಾರಿಕೆಯ ಸ್ಥಾಪನೆ.
- ಆಮದು ಮಾಡಿಕೊಂಡ ಮರೀನೋ ಕುರಿಯ ಮುಖಾಂತರ ಕುರಿ ಸಾಕಾಣಿಕೆ.
- ಕೋಳಿ ಸಾಕಾಣಿಕೆ, ಹೈನುಗಾರಿಕೆ ಮತ್ತು ಗೊಂಬೆ ತಯಾರಿಕಾ ಉದ್ಯಮಗಳ ಅಭಿವೃದ್ಧಿ.
- ವೈಜ್ಞಾನಿಕ ಕೃಷಿ ವಿಧಾನಗಳಿಂದ ಆರ್ಥಿಕ ಬೆಳೆಗಳ ಅಭಿವೃದ್ಧಿ.
- ಬೆಂಗಳೂರಿನಲ್ಲಿ ವಿಶೇಷ ಪ್ರಯೋಗಾಲಯಗಳಲ್ಲಿ ರಾಸಾಯನಿಕ ಮತ್ತು ಕೀಟ ಸಂಬಂಧೀ ಸಂಶೋಧನೆ.
- ಕೈಗಾರಿಕಾ ಶಾಲೆಗಳ ಸ್ಥಾಪನೆ ಮತ್ತು ಜಿಲ್ಲೆಯಾದ್ಯಂತ ಜಟಿಲವಾದ ಯಂತ್ರಗಳನ್ನು ಉಪಯೋಗಿಸುವ ವಿಧಾನವನ್ನು ಕನ್ನಡ ಭಾಷೆಯ ನಿಪುಣರ ಮೂಲಕ ವಿವರಿಸಲಾಯಿತು. ಏಕೆಂದರೆ ಕನ್ನಡವು ಎಲ್ಲರಿಗೂ ತಿಳಿದ ಭಾಷೆಯಾಗಿತ್ತು.
- ಬೆಂಗಳೂರಿನಲ್ಲಿ ಕನ್ನಡದ ಶ್ರೇಷ್ಠ ಪಂಡಿತರನ್ನು ಒಂದುಗೂಡಿಸಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ.
- ಬೆಂಗಳೂರು ಮತ್ತು ಮೈಸೂರಿನಲ್ಲಿ ಆಧುನಿಕ ಹೊಟೇಲುಗಳ ಸ್ಥಾಪನೆ (1916).



ಮೈಸೂರಿನ ವಿಶ್ವವಿದ್ಯಾನಿಲಯ ಇರುವ ಕ್ರಾ ಫೋರ್ಡ್ ಭವನದ ಒಂದು ನೋಟ.

ಅಕ್ಟೋಬರ್ 19, 1918ರಂದು ನಡೆದ ಮೈಸೂರು ವಿಶ್ವವಿದ್ಯಾಲಯದ ಮೊದಲನೆಯ ಘಟಿಕೋತ್ಸವದಂದು ಮಹಾರಾಜರು ಸರ್ ಎಂ. ವಿ. ಯವರ ಸಾಧನೆಯನ್ನು ಪ್ರಶಂಸಿಸಿದ್ದು ಹೀಗೆ:

"ನಾನು ಈ ಸಂದರ್ಭದಲ್ಲಿ ನನ್ನ ಪರವಾಗಿ ಮತ್ತು ರಾಜ್ಯದ ಜನತೆಯ ಪರವಾಗಿ ಸರ್ ಎಂ. ವಿ. ಯವರಿಗೆ ಹೃದಯಪೂರ್ವ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಇಂದಿನ ಈ ಸಮಾರಂಭ ನಡೆಯುತ್ತಿರುವುದಕ್ಕೆ ಮುಖ್ಯ ಕಾರಣ ವಿಶ್ವೇಶ್ವರಯ್ಯನವರು. ಏಕೆಂದರೆ ಈ ವಿಶ್ವವಿದ್ಯಾಲಯ ಒಂದು ಕಾಲದಲ್ಲಿ ಕೇವಲ ಕನಸಾಗಿತ್ತು. ಇದು ನನಸಾಗುತ್ತದೆ ಎಂದು ನಾವು ಯಾರೂ ಊಹಿಸಿರಲಿಲ್ಲ. ಆದರೆ ಇಂದು ಇದು ನನಸಾಗಿದೆ ಎಂದರೆ ಅದಕ್ಕೆ ಕಾರಣವಾದದ್ದು ವಿಶ್ವೇಶ್ವರಯ್ಯನವರ ಶ್ರಮ."

ಯುರೋಪ್ ಮತ್ತು ಪಶ್ಚಿಮ ಏಷ್ಯಾಗಳಲ್ಲಿ ಮೊದಲನೇ ಮಹಾ ಯುದ್ಧವು ಉಗ್ರ ಸ್ಥಿತಿಯಲ್ಲಿ ಇದ್ದಾಗ ಸರ್ ಎಂ. ವಿ. ಯವರು ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಬೇಕಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಕೆಲಸಗಳನ್ನು ಸಂಯೋಜಿಸಬೇಕಿತ್ತು ಮತ್ತು ಅವುಗಳನ್ನು ಜಾರಿಗೆ ತರಬೇಕಿತ್ತು. ಅವರ ವೇಗ, ಬುದ್ಧಿವಂತಿಕೆಗೆ ಮತ್ತು ಸಾಮರ್ಥ್ಯಕ್ಕೆ ಸಮಾನವಾಗಿ ಕೆಲಸ ಮಾಡಲು ಸಾಧ್ಯವಾಗದವರು ಅವರನ್ನು ಟೀಕಿಸತೊಡಗಿದರು. ಅವರ ಯೋಜನೆಗಳನ್ನು ಕಾಲ್ಪನಿಕ, ವ್ಯರ್ಥ ಮತ್ತು ಭಗ್ನ ಎಂದು ಕರೆದರು. 1916 – 17ರ ಸುಮಾರಿಗೆ ನೆರೆಯ ಮದ್ರಾಸ್ ರಾಜ್ಯದಲ್ಲಿ ಒಂದೇ ಜನಾಂಗದ ಪ್ರಭುತ್ವದ ವಿರುದ್ಧ ಚಳುವಳಿಯು ಪ್ರಾರಂಭವಾಯಿತು. ಯೋಗ್ಯತೆ ಮತ್ತು ಸಾಮರ್ಥ್ಯವನ್ನು ಕಡೆಗಣಿಸುವುದರಿಂದ ಉತ್ಪತ್ತಿಗೆ ಮತ್ತು ಆಡಳಿತಾತ್ಮಕ ಕಾರ್ಯ ನಿರ್ವಹಣೆಗೆ ತೊಂದರೆಯಾಗಬಹುದೆಂದು

ಮತ್ತು ಕಷ್ಟಪಟ್ಟು ಮಾಡುತ್ತಿರುವ ಕೆಲಸಗಳಿಗೆ ತೊಂದರೆಯಾಗಬಹುದೆಂದು ವಿಶ್ವೇಶ್ವರಯ್ಯನವರು ಹೆದರಿದರು.

ಆದರೆ ಸರ್ ಎಂ. ವಿ. ಯವರು ತಮ್ಮ ಸ್ವಂತ ಆಸಕ್ತಿಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಯಾರಿಂದಲೂ ಟೀಕೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಇತರ ಹಲವು ಬೇರೆ ರೀತಿಯ ಟೀಕೆಗಳನ್ನು ಮಾಡತೊಡಗಿದರು. ಎಲ್ಲಾ ಕೆಲಸಗಳನ್ನೂ ತಾವೇ ಮಾಡಬೇಕೆಂದು ಬಯಸುತ್ತಾರೆ, ಸಹೊದ್ಯೋಗಿಗಳ ಜೊತೆ ಚರ್ಚೆ ಮಾಡುವುದಿಲ್ಲ, ರಾಜ್ಯಕ್ಕೆ ಲಾಭ ತರುವುದು ಸಂಶಯ ಇರುವಂತಹ ಕೆಲಸಗಳನ್ನು ಪ್ರಾರಂಭಿಸುತ್ತಾರೆ, ಖರ್ಚುಗಳು ಹೆಚ್ಚಾಗುತ್ತಿವೆ ಮುಂತಾದ ಟೀಕೆಗಳನ್ನು ವಿಶ್ವೇಶ್ವರಯ್ಯನವರ ವಿರೋಧಿಗಳು ಮಾಡತೊಡಗಿದರು. ದುರದೃಷ್ಟ ಎಂದರೆ ಸರ್ ಎಂ. ವಿ. ಯವರ ವಿರೋಧಿಗಳು ಮಹಾರಾಜರ ಓಲೈಕೆ ಮಾಡಿದ್ದರು. ಮಹಾರಾಜರೂ ಸಹ ಅವರ ಮಾತನ್ನು ಕೇಳತೊಡಗಿದರು. ಆದ್ದರಿಂದ ನಿಧಾನವಾಗಿ ಮಹಾರಾಜ ಮತ್ತು ದಿವಾನರ ನಡುವಿನ ಪತ್ರ ವ್ಯವಹಾರಗಳ ದಾಟಿಯೇ ಬದಲಾಯಿತು. ಸರ್ ಎಂ. ವಿ. ಯವರಿಗೆ ಕೊನೆಯ 18ತಿಂಗಳ ದಿವಾನಗಿರಿಯು ಬಹಳ ಯಾತನೆಯನ್ನು ಕೊಟ್ಟಿತ್ತು. ಡಿಸೆಂಬರ್ 1918ರಲ್ಲಿ ಸರ್ ಎಂ. ವಿ. ಯವರು ದಿವಾನಗಿರಿಯನ್ನು ತ್ಯಜಿಸಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ
ಅಂದಿನ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್
ಅವರೊಂದಿಗೆ ಸರ್ ಎಂ. ವಿ. ಭೇಟಿ ನೀಡಿದ ದೃಶ್ಯ

ಹತಾಷೆಯಿಂದ ರಾಜೀನಾಮೆ

ಸರ್ ಎಂ. ವಿಶ್ವೇಶ್ವರಯ್ಯನವರು 16ನೇ ನವಂಬರ್ 1917ರಂದು ಮೈಸೂರಿನ ದಿವಾನಗಿರಿಗೆ ರಾಜೀನಾಮೆ ಸಲ್ಲಿಸಿದರು. ಸರ್ ಎಂ.ವಿ ಮತ್ತು ಮಹಾರಾಜರ ಮಧ್ಯೆ ಬಹಳಷ್ಟು ಪತ್ರವ್ಯವಹಾರಗಳು ನಡೆದವು.

ಮೊದಲ ರಾಜೀನಾಮೆ ಪತ್ರ

ನನ್ನ ದಿವಾನ ಕಚೇರಿಯ ರಾಜೀನಾಮೆಯನ್ನು ವಿನಯದಿಂದ ಮುಂದಿಡುತ್ತೇನೆ. ಮಹಾರಾಜರು ಸಂತೋಷದಿಂದ, ನನಗೆ ಎರಡು ಸಂದರ್ಶನಗಳನ್ನು ಆಗಸ್ಟ್ ಮತ್ತು ಅಕ್ಟೋಬರ್‌ನ ಕೊನೆಯಲ್ಲಿ ನೀಡಿದ್ದಾರೆ. ನಾನು ಅವರಿಗೆ ನನ್ನ ಕರ್ತವ್ಯ ನಿರ್ವಹಿಸುವಾಗಿನ ಕಷ್ಟಗಳನ್ನು ವಿವರಿಸಿದ್ದೇನೆ. ಕೆಲವು ತಿಂಗಳುಗಳ ಕಾಲ ಕೆಲಸಗಳು ಸರಾಗವಾಗಿ ನಡೆಯುತ್ತಿದ್ದವು. ಆದರೆ ನಾವು ನಿಮ್ಮ ಗಮನಕ್ಕೆ ತಂದ ತೊಂದರೆಗಳು ಪುನಃ ಉದ್ಭವಿಸಿದೆ. ಇನ್ನೊಂದು ಸಂದರ್ಶನವನ್ನು ಕೇಳುವ ಬದಲು ನಾನು ರಾಜ್ಯ ಸರ್ಕಾರದ ಸೇವೆಯಿಂದ ರಾಜೀನಾಮೆ ಪಡೆಯಲು ನಿರ್ಧರಿಸಿದ್ದೇನೆ.

ವರ್ಷದ ಹಿಂದೆ ಮಹಾರಾಜರು ನನ್ನಿಂದ ಅಥವಾ ಮಂಡಲದಿಂದ ಬಂದ ಪ್ರಸ್ತಾಪದಲ್ಲಿ ಏನಾದರೂ ಬದಲಾವಣೆಗಳಾಗಬೇಕಿದ್ದಲ್ಲಿ ಕಾರ್ಯದರ್ಶಿಗೆ ನನ್ನನ್ನು ಭೇಟಿ ಮಾಡಲು ಹೇಳುತ್ತಿದ್ದರು. ಈ ದಿನಗಳಲ್ಲಿ ನನಗೆ ಆ ಸೌಲಭ್ಯ ಇಲ್ಲ. ಕೇಂದ್ರ ಕಾರ್ಯಸ್ಥಾನದಲ್ಲಿ ನನ್ನ ಬಗ್ಗೆ ಇರುವ ಭಾವನೆಯು ಈಗ ಸತ್ಯಕ್ಕೆ ವಿರುದ್ಧವಾಗಿದೆ.

ಸರಕಾರ ಕೈಗೊಂಡ ದೊಡ್ಡ ಪ್ರಮಾಣದ ಕೆಲಸ ಅಥವಾ ಯೋಜನೆಯು ಸಫಲವಾಗಬೇಕೆಂದರೆ ಏಕರೂಪದ ಕಾರ್ಯ ವೈಖರಿಯು ಬಹಳ ಮುಖ್ಯ. ಒಂದು ಸರಪಳಿಗೆ 20 ಕೊಂಡಿಗಳಿದ್ದರೂ ಅದರಲ್ಲಿ ಒಂದು ಕೊಂಡಿ ಸಡಿಲವಾದರೆ ಇಡೀ ಸರಪಳಿಯೇ ದುರ್ಬಲವಾಗುತ್ತದೆ. ಅದೇ ರೀತಿ, ಒಂದು ಯೋಜನೆಯ ಆಶಯಗಳಲ್ಲಿ ಒಬ್ಬರ ಅಭಿಪ್ರಾಯವು ಬೇರೆಯಾಗಿದ್ದರೂ ಸಹ ಅದು ಇಡೀ ಯೋಜನೆಗೇ ಮುಳುವಾಗಬಹುದು.

ಮೈಸೂರಿನಲ್ಲಿನ ಕೆಲಸದಲ್ಲಿ ಬಹಳ ಅನನುಕೂಲಕರವಾದ ಪ್ರಭಾವಗಳಿವೆ. ಬಿಗಿಯಾಗಿ ನಿರ್ವಹಣೆ ಮಾಡುವುದರಿಂದ ಇವುಗಳಿಗೆಲ್ಲ ತಡೆಯೊಡ್ಡಬಹುದು. ಒಡಿತವನ್ನು ಸಡಿಲಗೊಳಿಸಿದ ತಕ್ಷಣ, ಸರಕಾರದ ಮೇಲಿನ ನಂಬಿಕೆಯು ಅಲುಗಾಡುತ್ತದೆ, ಸಾರ್ವಜನಿಕ ಹಿತಾಸಕ್ತರು ವಿಪತ್ತಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ.

ಆಡಳಿತದ ಮೇಲೆ ನಿಯಂತ್ರಣ ಸಾಧಿಸುವ ವಿಷಯದಲ್ಲಿ ತಾವು ನನ್ನ ಮೇಲೆ ಸಂಪೂರ್ಣ ವಿಶ್ವಾಸ ಇಟ್ಟಿಲ್ಲ ಎನ್ನುವುದು ಕೆಲವು ಘಟನೆಗಳಿಂದ ನನಗೆ ಮನವರಿಕೆಯಾಗಿದೆ. ಆದ ಕಾರಣ ನನಗೆ ಅಧಿಕಾರದಲ್ಲಿ ಮುಂದುವರೆಯುವುದು ಕಷ್ಟವಾಗಿದೆ.

ಮಹಾರಾಜರು ತಮ್ಮ ಎಂದಿನ ಉದಾರತನದಿಂದ, ಸರ್ಕಾರಕ್ಕೆ ನಿಷ್ಠೆಯಿಂದ ಮತ್ತು ಶ್ರಮವಹಿಸಿ ಕೆಲಸ ಮಾಡುವ ಕೆಲವು ಅಧಿಕಾರಿಗಳಿಗೆ ವೇತನವನ್ನು ಸ್ವಲ್ಪ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಹಾರಾಜರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ವಿನಯಪೂರ್ವಕವಾಗಿ ತಿಳಿದುಕೊಳ್ಳುತ್ತೇನೆ. ಮಹಾರಾಜರು ವಿನಯಪೂರ್ವಕ ಪರಿಶೀಲನೆಗೆ ಒಪ್ಪಿದರೆ, ನಾನು ಅಧಿಕಾರಿಗಳ ಹೆಸರನ್ನು ಮಂಡಿಸುತ್ತೇನೆ.

ನನ್ನ ಬಿಡುಗಡೆಯ ಈ ತಿಂಗಳ ಅಂತ್ಯಕ್ಕಿಂತ ಮೊದಲು ಬರಬಹುದೆಂದು ತಿಳಿಯುತ್ತೇನೆ. ಅದರೊಳಗೆ ಈಗ ರಜದಲ್ಲಿರುವ ಇಬ್ಬರು ಮಂಡಲದ ಸದಸ್ಯರು ಕೆಲಸಕ್ಕೆ ಹಿಂದಿರುಗುತ್ತಾರೆ.

ಮಹಾರಾಜರ ಆಪ್ತ ಕಾರ್ಯದರ್ಶಿಯವರಾದ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ ಸರ್ ಎಂ. ವಿ. ಯವರಿಗೆ ಪತ್ರ, ಜನವರಿ 4, 1917

ನೀವು ಮಹಾರಾಜರನ್ನು ಭೇಟಿ ಮಾಡಲು ಇಂದು ಮಧ್ಯಾನ್ಹ ಹೋಗುತ್ತಿದ್ದೀರಿ ಎಂದು ತಿಳಿಯುತ್ತೇನೆ. ಇದು ಮುಖ್ಯವಾದ ಸಂದರ್ಶನವಾಗಿರುತ್ತದೆ. ಅವರನ್ನು ಬಲವಂತಪಡಿಸಬೇಡಿ. ತಪ್ಪಿತಸ್ಥ ಭಾವನೆ ನಿಮ್ಮದಾಗುತ್ತದೆ ಅವರದ್ದಲ್ಲ. ನಿಮ್ಮ ಕ್ಷೇಮ ಬಯಸುವವರ ಅಭಿಪ್ರಾಯವಿದು. ಆಲೋಚಿಸಿದ ಅಭಿಪ್ರಾಯ. ಅವರ ಗುರಿಯ ಬಗೆಗಿನ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ನೀವು ಎಷ್ಟೇ ಅನುಮಾನಿಸಿದರೂ ನನ್ನ ಮಾತನ್ನು ಕೇಳಿ. ನಿಮ್ಮ ದಾರಿಯಲ್ಲಿಟ್ಟಿರುವಂತಹ ಒಳ್ಳೆಯ ಅವಕಾಶಗಳನ್ನು ಉದ್ದೇಶಪೂರ್ವಕವಾಗಿ ನಿರಾಕರಿಸಬೇಡಿ ಮತ್ತು ರಾಜ್ಯಕ್ಕೆ ಹಾಗೂ ನಿಮ್ಮ ಗೌರವಕ್ಕೆ ಕುಂದುಂಟುಮಾಡುವಂತಹ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಖಂಡಿತವಾಗಿಯೂ ನಾನು ಈ ಪತ್ರವನ್ನು ಬರೆಯುತ್ತಿರುವಷ್ಟೇ ನಿಶ್ಚಿತವಾಗಿ ನೀವು ಭವಿಷ್ಯದಲ್ಲಿ ನೊಂದುಕೊಳ್ಳುತ್ತೀರಿ. ಅದ್ದರಿಂದ ನಾನು ಹೇಳುತ್ತೇನೆ, ಎಲ್ಲಾ ಬಲಗಳನ್ನು ಉಪಯೋಗಿಸಿ ನಾನು ಆಜ್ಞೆ ಮಾಡುತ್ತೇನೆ "ಬೇಡ" ಎಂದು. ಎಂದಿನಂತೆಯೇ ನನ್ನನ್ನು ನಂಬಿ.

ಸರ್ ಎಂ.ವಿ.ಯವರಿಗೆ ಮಹಾರಾಜರ ಪತ್ರ ಫೆಬ್ರವರಿ 1917

"ನಿಮಗೆ ಮುಖತಃ ಹೇಳುವುದಕ್ಕಿಂತ ಪತ್ರದಲ್ಲಿ ಬರೆಯುವುದು ಉತ್ತಮ ಎಂದು ನಾನು ಯೋಚಿಸುತ್ತೇನೆ. ಇದರಿಂದ ನಿಮ್ಮ ಎರಡನೇ ಪತ್ರದ ವಿಚಾರವಾಗಿ ನಾನು ಹೇಳಬೇಕೆಂದಿರುವ ವಿಚಾರಗಳ ಬಗ್ಗೆ ಅಲೋಚಿಸಲು ನಿಮಗೆ ಹೆಚ್ಚಿನ ಸಮಯ ನೀಡಿದಂತಾಗುತ್ತದೆ. ನಿಮಗೆ ಯಾವುದೇ ರೀತಿಯ ಕಿರುಕುಳ ಕೊಡುವುದು ಅಥವಾ ನಿಮ್ಮ ಕೆಲಸಗಳಿಗೆ ಅಡ್ಡಿಯುಂಟುಮಾಡುವುದು ನನ್ನ ಕಾರ್ಯದರ್ಶಿಯ ಉದ್ದೇಶವಾಗಿರಲಿಲ್ಲ ಎಂದು ಖಚಿತಪಡಿಸುತ್ತೇನೆ. ನಿಮ್ಮ ಆಡಳಿತದ ಕೆಲಸಗಳಿಗೆ ಸಹಾಯ ಮಾಡುವುದು ಅವರ ಕರ್ತವ್ಯ ಮತ್ತು ನನಗೆ ತಿಳಿದಿರುವಂತೆ ಇದಕ್ಕಾಗಿ ಅವರು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ನನ್ನ ವಿಚಾರಣೆಯಿಂದ ಮತ್ತು ಅವಲೋಕನದಿಂದ ಅವರು ಅವರ ಅಧಿಕಾರವನ್ನು ತಪ್ಪು ಕೆಲಸಗಳಿಗಾಗಿ

ಉಪಯೋಗಿಸಿಕೊಳ್ಳಲಿಲ್ಲ ಎಂದು ಅರಿತಿದ್ದೇನೆ. ನಾನು ನಿಮಗೆ ಈ ಭರವಸೆಯನ್ನು ನೀಡಬಲ್ಲೆ ಹಾಗೂ ಇದನ್ನು ಒಪ್ಪಿಕೊಳ್ಳುವುದು ಅಥವಾ ಇಲ್ಲದೇ ಇರುವುದನ್ನು ನಿಮಗೆ ಬಿಟ್ಟುಬಿಡುತ್ತೇನೆ."

ಕೊನೆಯ ರಾಜೀನಾಮೆ ಪತ್ರ ನವೆಂಬರ್ 16, 1917

ನಿನ್ನೆಯ ಮಧ್ಯಾಹ್ನದ ಮಾತುಕತೆಯ ನಂತರ, ಗೌರವಯುತವಾಗಿ ರಾಜೀನಾಮೆ ನೀಡುವುದಲ್ಲದೆ ನನಗೆ ಬೇರೇನೂ ಉಳಿದಿಲ್ಲ.

ಮಹಾರಾಜರಿಗೆ ಇಂದಿನವರೆಗೆ ಕಾಯುವುದಾಗಿ ಮಾತುಕೊಟ್ಟಿದ್ದೆ. ಆದರೆ ನಾನು ನನ್ನ ಕೊನೆಯ ಪ್ರಾತಿನಿಧ್ಯವನ್ನು ಪತ್ರದ ಮೂಲಕ ನೀಡುವುದೇ ಸೂಕ್ತವೆಂದೆನಿಸಿತು. ಶ್ರೀ ಮಿರ್ಜಾರವರಿಗೂ ನನ್ನ ನಿರ್ಧಾರದ ಬಗ್ಗೆ ನಿನ್ನೆ ರಾತ್ರಿ ಹೇಳಿದ್ದೆ.

ನನಗೆ ಮಹಾರಾಜರು ನೀಡಿರುವ ಟಿಪ್ಪಣಿಯನ್ನು ಹಿಂದಿರುಗಿಸುತ್ತೇನೆ. ನನಗೆ ವಿವಾದಾಸ್ಪದವಾಗುವುದಕ್ಕೆ ಯಾವುದೇ ಇಚ್ಛೆಯಿಲ್ಲ ಎಂದು ಹೇಳಲು ಇಷ್ಟಪಡುತ್ತೇನೆ.

ನನ್ನ ಸೇವೆಯ ಪ್ರಾರಂಭದ 3 ವರ್ಷಗಳಲ್ಲಿದ್ದಂತಹ ಬೆಂಬಲ ಮತ್ತು ಸಹಾನುಭೂತಿಯು ಮಹಾರಾಜರ ಕಡೆಯಿಂದ ಸಿಗದಿದ್ದರೆ, ಆಡಳಿತ ನಡೆಸುವುದು ಅಪ್ರಯೋಜಕ ಪ್ರಯತ್ನವಾಗುತ್ತದೆ. ನನ್ನ ದಾರಿಯಲ್ಲಿ ಬಹಳಷ್ಟು ಕಷ್ಟಗಳಿವೆ ಎಂದು ನನಗೆ ಪ್ರಾಮಾಣಿಕವಾಗಿ ಅನಿಸದಿದ್ದರೆ ನಾನು ಈಗ ತೆಗೆದುಕೊಂಡ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಿರಲಿಲ್ಲ. ಶ್ರೀ ಮಿರ್ಜಾರವರು ಮಹಾರಾಜರಿಗೆ ಹೇಳಿರಬಹುದು, ನಾನು ಅವರಿಗೆ ಕಳೆದ ಎರಡು ತಿಂಗಳಲ್ಲಿ ಕಡೇಪಕ್ಷ ಎರಡು ಬಾರಿಯಾದರೂ ಹೇಳಿದ್ದೇನೆ; ನನ್ನ ಸ್ಥಾನವನ್ನು ಆರಾಮದಾಯಕವಾಗಿ ಮಾಡಿದರೆ ನನಗೆ ಮಹಾರಾಜರ ಮತ್ತು ದೇಶದ ಸೇವೆಯಲ್ಲಿ ಮುಂದುವರೆಯಲು ಉತ್ಕಟವಾದ ಇಚ್ಛೆಯಿದೆ ಎಂದು. ಆರಾಮದಾಯಕವೆಂದರೆ ಸುಲಭ, ವೈಯಕ್ತಿಕ ಸಹಾಯ ಅಥವಾ ಅಧಿಕಾರ ಹೆಚ್ಚಳ ಎಂದರ್ಥವಲ್ಲ. ನನಗೆ ಜನರನ್ನು ನಿಭಾಯಿಸಲು ಬೇಕಾಗುವ ಸೌಕರ್ಯಗಳು ಸಿಕ್ಕರೆ ಸಾಕು.

ನಾನು ಮಹಾರಾಜರಿಗೆ ಭರವಸೆ ನೀಡುತ್ತೇನೆ, ನಾನು ಎಲ್ಲಿಯೇ ಜೀವಿಸುತ್ತಿದ್ದರೂ ಕಾವೇರಿ ಜಲಾಶಯಕ್ಕೆ ಕೆಲಸ ಮಾಡಲು, ಸರಕಾರಕ್ಕೆ ಸಲಹೆ ನೀಡಲು, ಇದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು ಹಾಗೂ ಕಾವೇರಿಯ ವಿವಾದಕ್ಕೆ ಸಂಬಂಧಿಸಿದ ರಾಷ್ಟ್ರೀಯ ಪ್ರಶ್ನೆಗಳಿಗೆ ಉತ್ತರಿಸಲು ಅಗತ್ಯವಿದ್ದರೆ ನಾನು ಸದಾ ಸಿದ್ಧನಾಗಿರುತ್ತೇನೆ.

ಯಾರ ಗಮನಕ್ಕೂ ಬಾರದಂತೆ ನನಗೆ ಸಾರ್ವಜನಿಕ ಸೇವೆಯಿಂದ ಹೊರನಡೆಯಲು ಅವಕಾಶ ಮಾಡಿಕೊಡಬೇಕೆಂಬುದು ನನ್ನ ಅಗತ್ಯ ಮತ್ತು ಆಸಕ್ತಿಯಾಗಿದೆ. ನನ್ನ ರಾಜೀನಾಮೆಯ ಬಗೆಗಿನ ಪ್ರಶ್ನೆಗಳನ್ನು ಗೌಪ್ಯವಾಗಿಡುವುದು

ಬಹಳ ಕಷ್ಟಕರವಾಗುತ್ತದೆ. ಮಹಾರಾಜರು 26ರಂದು ನನ್ನ ಶೀಘ್ರ ಬಿಡುಗಡೆಗೆ ಅನುಮತಿ ನೀಡಿದರೆ ಅದು ಬಹಳ ದೊಡ್ಡ ಸಹಾಯವಾಗುತ್ತದೆ.

ಮಹಾರಾಜರ ದೃಷ್ಟಿಯಲ್ಲಿ ಯಾವುದಾದರೂ ಯೋಜನೆಗಳು ಅಪೂರ್ಣವಾಗಿದ್ದಲ್ಲಿ ಅವುಗಳ ಬಗ್ಗೆ ಹಿರಿಯ ಸದಸ್ಯರಾದ ಕಾಂತರಾಜ ಅರಸುರವರು ಗಮನ ಹರಿಸುತ್ತಾರೆ. ನಿಸ್ಸಂಶಯವಾಗಿ ಅವರು ಈ ಕೆಲಸ ಮಾಡುತ್ತಾರೆ.

ಮಂಡಲದಲ್ಲಿ ಉಳಿದಿರುವ ಕೆಲಸಗಳನ್ನು ಬಿಟ್ಟು ಬೇರೆ ಯಾವುದೂ ಉಲ್ಲೇಖಿಸುವಂತಹ ಬಾಕಿಗಳಿಲ್ಲ. ನಾನು ನಿನ್ನೆ ತೆಗೆದುಕೊಂಡ ಲೆಕ್ಕದ ಪ್ರಕಾರ 186 ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಉಳಿದಿವೆ.

ಮಹಾರಾಜರು ತೆಗೆದುಕೊಳ್ಳುವಂತಹ ಯಾವುದೇ ನಿರ್ಧಾರವನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ನನ್ನ ದೃಷ್ಟಿಕೋನವನ್ನು ಮಹಾರಾಜರು ಒಪ್ಪದಿದ್ದಲ್ಲಿ ನನಗೆ ಯಾವುದೇ ದೂರುಗಳಿಲ್ಲ. ಅದರ ಪರಿಣಾಮವನ್ನು ನಾನು ಒಪ್ಪಿಕೊಳ್ಳುವುದು ಸೂಕ್ತವಾಗಿರುತ್ತದೆ.

ಕೊನೆಯದಾಗಿ ನನ್ನ ಯಾವುದೇ ನಡತೆ ಅಥವಾ ಶಬ್ದಗಳು ಮಹಾರಾಜರಿಗೆ ನೋವನ್ನುಂಟುಮಾಡಿದ್ದರೆ ನಾನು ಮಹಾರಾಜರ ಕಾಲಿಗೆ ಬಿದ್ದು ಕ್ಷಮೆ ಯಾಚಿಸುತ್ತೇನೆ. ನನ್ನ ಈಗಿನ ಮತ್ತು ಹಿಂದಿನ ಒಂದೆರಡು ಖಾಸಗೀ ಪತ್ರಗಳು ಕಟುವಾದ ಶಬ್ದಗಳನ್ನೊಳಗೊಂಡಿದ್ದವು. ಅವು ಮಹಾರಾಜರ ಗಮನ ಸೆಳೆಯಲು ಮಾತ್ರ ಬಳಸಿದ ಶಬ್ದಗಳಾಗಿದ್ದವು.

ಮಹಾರಾಜರ ಬಹು ಉನ್ನತ ಗುಣಕ್ಕೆ ಮತ್ತು ಯೋಚನೆಗೆ ನನ್ನ ಅಪಾರವಾದ ಗೌರವವನ್ನು ಸೂಚಿಸುತ್ತೇನೆ. ನನ್ನ ಈ 6 ವರ್ಷದ ಅವಧಿಯಲ್ಲಿ ನಾನು ಪಡೆದುಕೊಂಡ ಕರುಣೆಗೆ ನನ್ನ ಆಳವಾದ ಕೃತಜ್ಞತೆಗಳು.

ಮೈಸೂರಿನ ದಿವಾನಗಿರಿಯನ್ನು ತ್ಯಜಿಸಿದಾಗ ಸರ್ ಎಂ.ವಿ.ಯವರು ಮಾಡಿದ ಬೀಳ್ಕೊಡುಗೆಯ ಭಾಷಣ ಡಿಸೆಂಬರ್ 9, 1918

"ಈವರೆಗೆ ನಾನು ಹೇಳಿದ ಸಿದ್ಧಾಂತ ಮತ್ತು ಅವುಗಳ ಆಚರಣೆಯಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ ಎಂದು ಹೇಳಲು ನನಗೆ ಕ್ಷಮೆಯಿದೆ ಎಂದು ತಿಳಿದುಕೊಳ್ಳುತ್ತೇನೆ. ನಾನು ಒಂದು ಸಮುದಾಯದ ಪರವಾಗಿ ಮತ್ತು ಇನ್ನೊಂದು ಸಮುದಾಯದ ವಿರುದ್ಧವಾಗಿ ಇದ್ದೇನೆ ಎಂದು ಕೆಲವೊಂದು ಗುಂಪುಗಳು ಕೆಲವೊಮ್ಮೆ ಹೇಳುತ್ತಿದ್ದರು. ಆದರೆ ನಾನು ತಕ್ಕಡಿಯನ್ನು ಸರಿದೂಗಿಸಲು ಪ್ರಯತ್ನಿಸುತ್ತಿದ್ದೆ ಎನ್ನುವ ವಿಷಯವನ್ನು ಸಮಯವೇ ಎಲ್ಲರಿಗೂ ತಿಳಿಸುತ್ತದೆ. ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯು ರಾಜ್ಯದ ಏಳಿಗೆಗೆ ಜವಾಬ್ದಾರನೆಂಬುದನ್ನು ನಾನು ಒಪ್ಪಿಕೊಳ್ಳಲು ಇಚ್ಚಿಸುತ್ತೇನೆ. ಮೈಸೂರಿನ ಜನರನ್ನು

ಮತ್ತು ಕಾನೂನನ್ನು ರಕ್ಷಿಸುವುದು ನನ್ನ ಮೊದಲ ಮತ್ತು ಮುಖ್ಯವಾದ ಕೆಲಸವಾಗಿತ್ತು ಎಂದು ನಾನು ತಿಳಿದಿದ್ದೆ.

ನನ್ನ ಕೆಲವು ಯೋಚನೆಗಳು ಕಾರ್ಯರೂಪಕ್ಕೆ ಬರಲಿಲ್ಲ ಎನ್ನುವುದರ ಬಗ್ಗೆ ನನಗೆ ನೋವಿದೆ. ಮಾಡಬಹುದಾದಂತಹ ಕೆಲಸಗಳು ಯಶಸ್ವಿಯಾಗಲಿಲ್ಲ ಎನ್ನುವುದರ ಬಗ್ಗೆ ನನಗೆ ಬೇಜಾರಿದೆ. ಜನರ ಪ್ರೀತಿಗಾಗಿ ಅವರಿಗೆ ನಾನು ಆಭಾರಿಯಾಗಿದ್ದೇನೆ. ಈ ಆರು ವರ್ಷಗಳಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಅಥವಾ ಆಡಳಿತದ ಕೆಲಸಗಳನ್ನು ವಿರೂಪಗೊಳಿಸುವಂತಹ ಕಾರ್ಯಗಳು ನಡೆದಿಲ್ಲ. ಮೈಸೂರಿನ ಜನರು ಜವಾಬ್ದಾರಿಯುಳ್ಳವರು ಮತ್ತು ಸ್ಪಂದಿಸುವಂತಹವರು ಎಂದು ನಾನು ತಿಳಿದುಕೊಂಡೆ. ಹಳ್ಳಿಯ ಜನರ ಸಮುದಾಯವು, ಸಾರ್ವಜನಿಕ ಮುಖಂಡರಿಗಿಂತ ಯಾವುದರಲ್ಲಿಯೂ ಕಡಿಮೆಯಿಲ್ಲ. ಅವರು ನಂಬಿಕಸ್ಥರಾಗಿದ್ದರು. ಇದು ಯಶಸ್ವೀ ಆಡಳಿತದಿಂದಲ್ಲ. ಬದಲಿಗೆ ನಿಷ್ಠಾವಂತ ಸರಕಾರ ಅವರ ಸೇವೆಯುನ್ನು ಮಾಡಲು ಕಾತರವಾಗಿದ್ದುದರಿಂದ ಎಂದು ನಾನು ನಂಬುತ್ತೇನೆ.

ನಾನು ಈ ಸಂದರ್ಭದಲ್ಲಿ ಭಾರತ ಮತ್ತು ಯುರೋಪ್‌ನ ಮಾಧ್ಯಮದವರಿಗೆ, ನನ್ನ ಸಮಯದಲ್ಲಿನ ಮೈಸೂರಿನ ಆಡಳಿತದ ಬಗೆಗಿನ ಉದಾರ ಮನೋಭಾವ ಮತ್ತು ನಿಷ್ಪಕ್ಷಪಾತಕ್ಕೆ ಧನ್ಯವಾದ ಸಲ್ಲಿಸಲು ಇಚ್ಛಿಸುತ್ತೇನೆ. ನಾನು ರಾಜ್ಯಕ್ಕೆ ನೀಡಿದ ಸೇವೆಗಳಿಗೆ ಮಹಾರಾಜರು ನೀಡಿದ ಎಲ್ಲಾ ಸಹಕಾರ, ಮಾರ್ಗದರ್ಶನ, ಉತ್ತೇಜನ ಹಾಗೂ ಸ್ಫೂರ್ತಿಗಾಗಿ ನಾನು ಮಹಾರಾಜರಿಗೆ ನನ್ನ ಆಳವಾದ ಕೃತಜ್ಞತೆಯನ್ನು ಹೇಳದೆಯೇ ಈ ಕಛೇರಿಯಿಂದ ನಿರ್ಗಮಿಸುವಂತಿಲ್ಲ."


The Mysore Gazette

EXTRAORDINARY.

Published by Authority.

NOTIFICATION

ದಿ ಮೈಸೂರ್ ಗೆಜೆಟ್ ನೋಟಿಫೀಕೇಷನ್‌ನಲ್ಲಿ ಪ್ರಕಟವಾದ ಪ್ರಶಂಸನಾ ಪತ್ರ. ಈ ಪತ್ರದಲ್ಲಿ ಸರ್ ಎಂ. ವಿ. ಅವರಿಗೆ ತಿಂಗಳಿಗೆ 1,250 ರೂಪಾಯಿಗಳನ್ನು ಪಿಂಚಣಿಯಾಗಿ ಮಂಜೂರು ಮಾಡಿರುವುದನ್ನು ಇಲ್ಲಿ ಗಮನಿಸಬಹುದು. (9,ಜೂನ್, 1919)

ಬೆಂಗಳೂರಿನ ಎಚ್.ಎ.ಎಲ್.
ಕಾರ್ಖಾನೆಗೆ ಭೇಟಿ ನೀಡಿದ ಸಂದರ್ಭ (1950)

ವಿಶ್ವೇಶ್ವರಯ್ಯನವರ ಮಹತ್ತರ ಕೆಲಸಗಳು

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದಿ ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್ ಆಗಿ ಅಕ್ಟೋಬರ್ 1913ರಂದು ಮೈಸೂರಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹಾಯದೊಂದಿಗೆ ಸ್ಥಾಪಿಸಲ್ಪಟ್ಟಿತು. ಆ ಸಮಯದಲ್ಲಿ ಸರ್ ಎಂ. ವಿ. ಯವರು ಮೈಸೂರಿನ ದೀವಾನರಾಗಿದ್ದರು. ಅಕ್ಟೋಬರ್ 1913ರಲ್ಲಿ ಬ್ಯಾಂಕ್ ತನ್ನ ಬೆಳ್ಳಿ ಮಹೋತ್ಸವವನ್ನು ಆಚರಿಸಿಕೊಂಡಿತು. ಈ ಸಂದರ್ಭದಲ್ಲಿ ಸರ್ ಎಮ್. ವಿ. ಯವರು ತಮ್ಮ ಸಂದೇಶವನ್ನು ಬ್ಯಾಂಕ್‌ನ ಬೆಂಗಳೂರಿನ ಮ್ಯಾನೇಜರ್‌ಗೆ 21–10–1938ರಂದು ಕಳಿಸಿದರು.

1919ರಲ್ಲಿ ದಿವಾನಗಿರಿಗೆ ರಾಜೀನಾಮೆ ನೀಡಿದ 3 ತಿಂಗಳಿನ ನಂತರ ಯುದ್ಧದಿಂದ ತೊಂದರೆ ಉಂಟಾದ ಪ್ರದೇಶಗಳಲ್ಲಿ ಹಾಗೂ ಮೊದಲನೇ ಮಹಾಯುದ್ಧ ನಡೆದ ಪ್ರದೇಶಗಳ ಆರ್ಥಿಕತೆ ಮತ್ತು ಜೀವನದ ಪುನರ್ ನಿರ್ಮಾಣದ ಬಗ್ಗೆ ತಿಳಿದುಕೊಳ್ಳಲು ಅಮೇರಿಕಾ ಮತ್ತು ಯುರೋಪ್ ದೇಶಗಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಪ್ರವಾಸ ಕೈಗೊಂಡರು.



ಪ್ರಖ್ಯಾತ ಬೃಂದಾವನ ಉದ್ಯಾನವನ

ಮೈಸೂರಿನ ಕೃಷ್ಣರಾಜಸಾಗರ ಜಲಾಶಯ

ಕನ್ನಂಬಾಡಿಯ ಅಣೆಕಟ್ಟಿನ ಎತ್ತರವನ್ನು ಮೊದಲೇ ಯೋಚಿಸಿದಂತೆ 36 ಮೀಟರುಗಳಿಗೆ ಏರಿಸಿ, ಕೆಲಸ ಪೂರ್ಣ ಗೊಳಿಸಲು ಸರ್ ಎಂ. ವಿ. ಯವರ ಸೇವೆ ಅಗತ್ಯವಾಗಿತ್ತು. 24.38 ಮೀ. ಎತ್ತರದ ಮೊದಲನೇ ಹಂತ 1918ರಲ್ಲಿ ಮುಗಿದಿತ್ತು. ಸರ್ ಎಂ. ವಿ. ಯವರು ದಿವಾನಗಿರಿ ಬಿಟ್ಟ ನಂತರ ಹಣದ ಕೊರತೆಯಿಂದಾಗಿ 1924ರ ವರೆಗೆ ಅಣೆಕಟ್ಟಿನ ಕೆಲಸ ನಿಂತುಹೋಗಿತ್ತು. 1930ರಲ್ಲಿ ಅಣೆಕಟ್ಟಿನ ಎತ್ತರವನ್ನು ಅದರ ಪೂರ್ಣ ಎತ್ತರವಾದ 36.62 ಮೀಟರ್‌ಗೆ ಏರಿಸಲಾಯಿತು. ಉನ್ನತ ಮಟ್ಟದ ಇರ್ವಿನ್ ನಾಲೆಯನ್ನು 1932ರಲ್ಲಿ ಮುಗಿಸಲಾಯಿತು. ಇದು ಈಗಿನ ವಿಶ್ವೇಶ್ವರಯ್ಯ ನಾಲೆ. ಈ ನಾಲೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರಾವರಿಯ ಬ್ಲಾಕ್ ಪದ್ಧತಿಯನ್ನು ಪರಿಚಯಿಸಲಾಯಿತು.

ಸರ್. ಎಂ. ವಿ. ಭದ್ರಾವತಿ ಐರನ್ ವರ್ಕ್ಸ್‌ನ ಚೆರ್‌ಮನ್ ಆಗಿದ್ದಾಗ.

ಭದ್ರಾವತಿ ಕಬ್ಬಿಣ ಮತ್ತು ಸ್ಟೀಲ್ ಕಾರ್ಖಾನೆಯು 1918ರಲ್ಲಿ ಪ್ರಾರಂಭವಾಯಿತು. ಇದರ ಕೆಲಸ ಕಾರ್ಯಗಳು ಯುದ್ಧದ ನಂತರದ ಪರಿಣಾಮಗಳಿಂದಾಗಿ 1923ರ ವರೆಗೆ ತಡವಾಯಿತು. ಮುಂಬಯಿಯಲ್ಲಿ ನೆಲೆಸಿದ್ದ ಸರ್ ಎಂ. ವಿ. ಅವರನ್ನು ಸಹಾಯಕ್ಕಾಗಿ ಕರೆಸಿಕೊಳ್ಳಲಾಯಿತು. ಈ ಕೆಲಸವನ್ನು ಅವರು ಆಶ್ಚರ್ಯಕರ ರೀತಿಯಲ್ಲಿ ಮೈಸೂರಿನ ಎಲ್ಲಾ ಅಧಿಕಾರಿಗಳು ಸೇವೆಗೆ ತಯಾರಾಗುವಂತೆ ಮಾಡುವುದರ ಮೂಲಕ ಮುಗಿಸಿದರು. ಸುಮಾರು ಆರೂ ವರೆ ವರ್ಷಗಳ ಸತತ ಪರಿಶ್ರಮದ ನಂತರ ಭದ್ರಾವತಿಯಲ್ಲಿ ತಯಾರಾಗುವ ಕಬ್ಬಿಣವು ಮಾರುಕಟ್ಟೆಯಲ್ಲಿ ಅತ್ಯಂತ ಕಡಿಮೆ ಬೆಲೆಗೆ ಸಿಗುವಂತಾಯಿತು. ನಂತರ ಈ ಕಾರ್ಖಾನೆಯು ಜೋಗ ಜಲಪಾತದಿಂದ ವಿದ್ಯುತ್ ಉತ್ಪಾದಿಸುವಲ್ಲಿ ಸಹಾಯ ಮಾಡುವಂತಾಯಿತು. ಆ ಸಮಯದಲ್ಲಿ ಸುಮಾರು 5,000 ಕೆಲಸಗಾರರು ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಈ ಕೆಲಸದ ಸಫಲತೆಯ ನಂತರ ಸರ್. ಎಂ.ವಿಯವರು ಅಧ್ಯಕ್ಷ ಪದವಿಯಿಂದ ನಿವೃತ್ತಿ ಹೊಂದಿದರು.

ಮದ್ರಾಸಿನ ಹಿಂದಿನ ಗವರ್ನರ್ ಮತ್ತು ಮಹಾರಾಜರ ಖಸಗೀ ಕಾರ್ಯದರ್ಶಿಗಳಾದ ಸರ್. ಚಾರ್ಲ್ಸ್ ಟೋಡುಂಟರ್ ಅವರು ನವೆಂಬರ್ 1927ರಂದು ಸರ್ ಎಂ. ವಿ. ಯವರಿಗೆ ಪತ್ರವೊಂದನ್ನು ಬರೆದರು : “ ನನ್ನ ಭದ್ರಾವತಿಯ ಸಂತೋಷಭರಿತ ಭೇಟಿಗೆ ಮತ್ತು ಅದರಲ್ಲಿನ ಎಲ್ಲಾ ಅಚ್ಚರಿಗಳಿಗೆ

ನಾನು ನಿಮಗೆ ಹೇಗೆ ಧನ್ಯವಾದ ಹೇಳಬೇಕೆಂದು ತಿಳಿಯುತ್ತಿಲ್ಲ. ನಾನು ಎಲ್ಲಕ್ಕಿಂತ ಹೆಚ್ಚಾಗಿ ಪ್ರಭಾವಿತನಾದದ್ದು ಸರ್ ಎಂ. ವಿ. ಯವರ ಶಕ್ತಿಯಿಂದ. ಇದನ್ನು ಅವರು ಎಲ್ಲರಿಗೂ ಹರಡಿದಂತೆ ಕಾಣುತ್ತದೆ. ನಾನು ಇಷ್ಟೊಂದು ಉತ್ಸಾಹ ಹೊಂದಿದವರನ್ನು ಎಂದಿಗೂ ಭೇಟಿ ಆಗಿರಲಿಲ್ಲ. ಉತ್ತಮ ಶಿಕ್ಷಣ ಪಡೆದವರೂ ಸಹ ತಮ್ಮ ಕೋಟುಗಳನ್ನು ತೆಗೆದು ಭದ್ರಾವತಿಯ ಯಶಸ್ಸಿಗೆ ದುಡಿಯಲು ತಯಾರಾಗಿದ್ದಾರೆ. ಈ ಕೆಲಸವು ಯಶಸ್ವಿಯಾದರೆ ನೀವು ನಿಮ್ಮನ್ನು ನಂಬಿದ ಮೈಸೂರಿಗೆ ಅತ್ಯುತ್ತಮ ಕೆಲಸ ಮಾಡಿದಂತಾಗುತ್ತದೆ."

ಸರ್ ಎಂ. ವಿ. ಯವರ ಸೇವೆಗಾಗಿ ಅವರಿಗೆ 1.50 ಲಕ್ಷದ ಗೌರವ ಧನವನ್ನು ನೀಡು ವಂತಾಯಿತು. ಆದರೆ ಅವರು ಅದನ್ನು ಆಧುನಿಕ ತಾಂತ್ರಿಕ ಸಂಸ್ಥೆಯ ಸ್ಥಾಪನೆಗೆ ದಾನ ಮಾಡಿದರು. ಆ ಸಂಸ್ಥೆಗೆ ಆಗಿನ ಯುವ ರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಹೆಸರನ್ನು ಇಡಲಾಯಿತು. ಅದು ಈಗಿನ ಬೆಂಗಳೂರಿನಲ್ಲಿರುವ Shri Jaya Chamarajendra Occupational Institute.

ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ***Occupational Institute****ನ ಒಂದು ನೋಟ*

ಬೆಂಗಳೂರಿನ ***Occupational Institute****ನ ಬೆಳ್ಳಿ ಮಹೋತ್ಸವದಲ್ಲಿ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರ ಜೊತೆ ಸರ್ ಎಂ. ವಿ.*

ಬೆಂಗಳೂರಿನಲ್ಲಿ ಹೆಚ್ಚಾಗುತ್ತಿರುವ ನೀರಿನ ಅಗತ್ಯವನ್ನು ಪೂರೈಸಲು ಸರ್ ಎಂ. ವಿ. ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಬೆಂಗಳೂರಿನಿಂದ 16 ಮೈಲಿ ದೂರದಲ್ಲಿರುವ ತಿಪ್ಪಗೊಂಡನಹಳ್ಳಿಯಲ್ಲಿ ಜಲಾಶಯದ ನಿರ್ಮಾಣಕ್ಕೆ ಯೋಜನೆ ಕೈಗೊಳ್ಳಲಾಯಿತು. ಈ ಜಲಾಶಯವು 3000 ಮಿಲಿಯನ್ ಕ್ಯೂಬಿಕ್ ಅಡಿ ನೀರನ್ನು ಶೇಖರಿಸಿ ಇಡುವ ಸಾಮರ್ಥ್ಯವನ್ನು ಹೊಂದಿತ್ತು

ಮತ್ತು ದಿನಕ್ಕೆ 10 ಮಿಲಿಯನ್ ಗ್ಯಾಲನ್ ಶುದ್ಧೀಕರಿಸಿದ ನೀರನ್ನು ನಗರಕ್ಕೆ ಸರಬರಾಜು ಮಾಡುವಷ್ಟು ಸಶಕ್ತವಾಗಿತ್ತು. ಇದು 50 ರ ದಶಕದ ಮಧ್ಯಭಾಗದವರೆಗೆ ನಗರದ ನೀರಿನ ಅವಶ್ಯಕತೆಯನ್ನು ಪೂರೈಸಿತು.

ಸರ್ ಎಂ. ವಿ. ಯವರು 1935 ರಲ್ಲಿ ವಾಹನಗಳ ಕೈಗಾರಿಕೆಯ ಕೆಲಸದ ಬಗ್ಗೆ ತಿಳಿದುಕೊಳ್ಳಲು ಯುರೋಪ್ ಮತ್ತು ಅಮೇರಿಕಾ ಪ್ರವಾಸ ಕೈಗೊಂಡು ಒಂದು ವರದಿಯನ್ನು ಸಲ್ಲಿಸಿದರು. ಆದರೆ ಕೆಲವು ರಾಜಕೀಯ ಕಾರಣಗಳಿಂದ ಈ ಯೋಜನೆಯನ್ನು ಮೈಸೂರು ಮತ್ತು ಮುಂಬಯಿಯಲ್ಲಿ ಜಾರಿಗೊಳಿಸಲಿಲ್ಲ.

ಸರ್ ಎಂ. ವಿ. ಯವರು ಫ್ರಾಂಕ್ ಮತ್ತು ಎಫ್. ಬೇಲ್ ಜೊತೆ ಅಮೇರಿಕಾದಲ್ಲಿ (1935)

ಯುದ್ಧದ ನಂತರ ಬ್ರಿಟೀಷ್ ಸರ್ಕಾರದಲ್ಲಿ ಯುದ್ಧದಿಂದ ಹಾನಿಗೊಳಗಾದ ವಿಮಾನಗಳ ರಿಪೇರಿಗೆ ಯಾವುದೇ ರೀತಿಯ ಸೌಲಭ್ಯಗಳಿರಲಿಲ್ಲ. ಆಗ ಭಾರತದಲ್ಲಿ ವಿಮಾನ ಕಾರ್ಖಾನೆಯೊಂದರ ಅಗತ್ಯವನ್ನು ಬ್ರಿಟೀಷ್ ಸರ್ಕಾರ ಮನಗಂಡಿತು. ಶ್ರೀ ವಾಲ್ಚಂದ್ ಹೀರಾಚಂದ್ ಅವರಿಗೆ ಬೆಂಗಳೂರಿನಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸಲು ಅನುಮತಿ ಸಿಕ್ಕಿತು. ಯುದ್ಧದ ನಂತರ ಈ ಕಾರ್ಖಾನೆಯನ್ನು ಭಾರತ ಸರ್ಕಾರವು ಮೈಸೂರು ಸರ್ಕಾರದ ಸಹಭಾಗಿತ್ವದೊಂದಿದೆ ಸುಪರ್ದಿಗೆ ತೆಗೆದುಕೊಂಡಿತು.

ಸರ್ ಎಂ. ವಿ. ಯವರು ಹಳ್ಳಿಗಾಡಿನ ಜೀವನದ ಏಳಿಗೆಯಿಲ್ಲದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅರಿತರು. ಇದಕ್ಕಾಗಿ ಅವರು ಹಳ್ಳಿ, ಜಿಲ್ಲೆ ಮತ್ತು ತಾಲೂಕು ಸಮಿತಿಗಳನ್ನು ಸ್ಥಾಪಿಸಿದರು. ಅವರು ಅಖಿಲ ಭಾರತ ಉತ್ಪಾದಕರ ಸಂಘದ ಅಧ್ಯಕ್ಷರಾಗಿದ್ದಾಗ 1949ರಲ್ಲಿ ಗ್ರಾಮೀಣ ಭಾರತದ ಕೈಗಾರಿಕೀಕರಣ ಯೋಜನೆಯನ್ನು ಸರಕಾರಕ್ಕೆ ಸಲ್ಲಿಸಿದರು. ಅದಕ್ಕೆ ಯಾವುದೇ ಬದಲಾವಣೆಯನ್ನೂ ಮಾಡದೇ ಎಲ್ಲಾ ರಾಜ್ಯಗಳಿಗೂ ಸರಕಾರ ಅದನ್ನು ವಿತರಿಸಿತು.

ಜುಲೈ 1928ರ ವೇಳೆಗೆ ಬೆಂಗಳೂರು ಹಿಂದೆಂದೂ ಕಾಣದಂತಹ ಕೋಮುಗಲಭೆಗೆ ತುತ್ತಾಯಿತು. ಆ ಸಮಯದಲ್ಲಿ ಇಡೀ ನಗರದಲ್ಲಿ ಗೊಂದಲ ಮತ್ತು ಭಯದ ವಾತಾವರಣವಿತ್ತು. ಆಗಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಜನರಲ್ಲಿ ಐಕ್ಯತೆಯನ್ನು ಸ್ಥಾಪಿಸುವುದಕ್ಕಾಗಿ ಸರ್ ಎಂ. ವಿ. ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಈ ಸಮಿತಿಯ ವರದಿಯು ಗೊಂದಲದ ವಾತಾವರಣವನ್ನು ನಿವಾರಿಸುವಲ್ಲಿ ಸಾಕಷ್ಟು ನೆರವಾಯಿತು. ಮೈಸೂರು ರಾಜ್ಯದ ಜನರು ಸರ್ ಎಂ. ವಿ. ಯವರಲ್ಲಿ ಎಷ್ಟೊಂದು ವಿಶ್ವಾಸ ಇಟ್ಟಿದ್ದರು ಎನ್ನುವುದಕ್ಕೆ ಇದೊಂದು ಉದಾಹರಣೆ.

ಸಲಹೆ ಹಾಗು ಸಮಿತಿಗಳ ಮಾರ್ಗದರ್ಶಕರಾಗಿ

ಸರ್ಕಾರಿ ವ್ಯಕ್ತಿಗಳು ಮತ್ತು ಕೈಗಾರೀಕೋದ್ಯಮಿಗಳು ವಿವಿಧ ವಿಷಯಗಳ ಮೇಲೆ ವಿಶ್ವೇಶ್ವರಯ್ಯನವರ ಸಲಹೆಯನ್ನು ಯಾವಾಗಲೂ ಪಡೆಯುತ್ತಿದ್ದರು. ಇದಕ್ಕೆ ಮುಖ್ಯ ಕಾರಣ ಸರ್ ಎಂ. ವಿ. ಯವರು ಭಯದಿಂದ ಮತ್ತು ಲಾಭದ ಉದ್ದೇಶದಿಂದ ಎಂದಿಗೂ ಕೆಲಸ ಮಾಡುತ್ತಿರಲಿಲ್ಲ. ತಮಗೆ ವಹಿಸಿದ ಕೆಲಸದ ಬಗ್ಗೆ ಉತ್ತಮ ಸಲಹೆ ಕೊಡುವುದರ ಕಡೆಗೆ ಮಾತ್ರ ಅವರ ಗಮನ ಕೇಂದ್ರೀಕೃತವಾಗಿರುತ್ತಿತ್ತು.

ಮುಂಬಯಿ ಮತ್ತು ಕರಾಚಿ ನಗರ ಪಾಲಿಕೆಗಳು ಆಡಳಿತ, ಆರ್ಥಿಕ ಮತ್ತು ಇತರ ಅಭಿವೃದ್ಧಿ ವಿಷಯಗಳ ಮೇಲೆ ಸರ್. ಎಂ.ವಿಯವರ ಸಲಹೆಯನ್ನು ಕೇಳಿದ್ದರು.

ಭಾರತದ ಹಲವು ನಗರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ತಮ್ಮ ಸಲಹೆಗಳ ಮೂಲಕ ಪರಿಪೂರ್ಣಗೊಳಿಸಿದ ವ್ಯಕ್ತಿ ಸರ್ ಎಂ. ವಿ. ಅವರು. ಇವುಗಳಲ್ಲಿ ಪ್ರಮುಖ ನಗರಗಳೆಂದರೆ, ಖಾನ್ ದೇಶದ ದುಲಿಯಾ, ಸೂರತ್, ಪೂನಾ, ನಾಸಿಕ್ ನಗರ, ಧಾರವಾಡ, ವಿಜಾಪೂರ, ಬೆಳಗಾಂ, ಕೊಲ್ಲಾಪುರ, ಅಕಲ್ಕೋಟ್, ಗ್ವಾಲಿಯರ್, ಇಂದೋರ್, ಗೋವಾ, ರಾಜಕೋಟ್, ಭಾವ ನಗರ್, ಬರೋಡಾ, ಸಾಂಗ್ಲಿ, ಪಂಡರಾಪುರ, ಅಹಮದ್‌ನಗರ್ ಇತ್ಯಾದಿ.

ಮುಂಬೈನ ಭಾರತೀಯ ಆರ್ಥಿಕ ಸಮಿತಿಯ ಚೇರ್‌ಮನ್ ಆಗಿ ಸರ್ ಎಂ. ವಿ.

ಮದರಾಸು ಮತ್ತು ಹೈದರಾಬಾದಿನ ಪಿ.ಡಬ್ಲ್ಯೂ.ಡಿ. ಪ್ರಧಾನ ಎಂಜಿನಿಯರ್‌ಗಳ ಮಧ್ಯೆ ಭಿನ್ನಾಭಿಪ್ರಾಯ ಬಂದಾಗ ಸರ್ ಎಂ. ವಿ. ಅವರನ್ನು ಕರೆಸಲಾಯಿತು. ಮಾತುಕತೆಯ ನಂತರ ಈ ಭಿನ್ನಾಭಿಪ್ರಾಯ ಶಮನವಾಯಿತು.

1921–22ರಲ್ಲಿ ಮುಂಬಯಿಯಲ್ಲಿ ಅಲ್ಲಿನ ತಾಂತ್ರಿಕ ಮತ್ತು ಕೈಗಾರಿಕಾ ಶಿಕ್ಷಣದ ಬಗ್ಗೆ ಅರಿತುಕೊಳ್ಳಲು ವರದಿಯನ್ನು ಮಂಡಿಸಲು ಸರ್ ಎಂ. ವಿ. ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು.

ಮಾರ್ಚ್ 1930ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್, ವಿಶ್ವವಿದ್ಯಾಲಯದ ರಾಸಾಯನಿಕ ತಂತ್ರಜ್ಞಾನ ವಿಭಾಗದ ಬಗ್ಗೆ ವಿವರವಾದ ಯೋಜನೆಯನ್ನು ತಯಾರಿಸುವ ಸಮಿತಿಗೆ ಸರ್ ಎಂ. ವಿ. ಅವರನ್ನು ಅಧ್ಯಕ್ಷರನ್ನಾಗಿ ಒಪ್ಪಿಕೊಂಡಿತು. ಈ ಸಮಿತಿಯು ರಾಸಾಯನಿಕ ಕೈಗಾರಿಕೆಗಳಿಂದಾಗುವ ಒಳಿತು ಕೆಡಕುಗಳ ಪರಿಶೀಲನೆಯನ್ನು ನಡೆಸಬೇಕಿತ್ತು. ಈ ಸಮಿತಿಯಲ್ಲಿ ಹಲವು ಅನುಭವಿಗಳು ಮತ್ತು ಉದ್ಯಮಿಗಳು ಇದ್ದರು.

1938ರಲ್ಲಿ ಮುಂಬಯಿ ಸರಕಾರವು ನೀರಾವರಿಯ ಕಾರ್ಯವೈಖರಿ ಮತ್ತು ಜಂಟಿಯಾಗಿ ಕಾರ್ಯನಿರ್ವಹಿಸುವ ವಿಷಯಗಳ ಬಗೆಗಿನ ಎಲ್ಲಾ ವಿವರಗಳನ್ನು ಪರಿಶೀಲಿಸಲು 10 ಜನ ಸರ್ಕಾರಿ ಮತ್ತು ಸರ್ಕಾರೇತರ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿತು. ಇದಕ್ಕೆ ಸರ್ ಎಂ. ವಿ. ಅವರು ಅಧ್ಯಕ್ಷರಾಗಿದ್ದರು.

ದೇಶದ ರಾಜಧಾನಿಯನ್ನು ಕಲ್ಕತ್ತಾದಿಂದ ದೆಹಲಿಗೆ ವರ್ಗಾಯಿಸಿದಾಗ ಅಲ್ಲಿ ವೈಸ್ ರಾಯ್ ಅವರ ನಿವಾಸ, ಕೇಂದ್ರ ಸರ್ಕಾರದ ಕಚೇರಿ, ಅಸೆಂಬ್ಲಿ ಕಟ್ಟಡ, ಇತ್ಯಾದಿಗಳ ನಿರ್ಮಾಣಕ್ಕೆ ಒಂದು ಯೋಗ್ಯ ಯೋಜನೆಯ ಅಗತ್ಯವಿತ್ತು. ಇದಕ್ಕಾಗಿ ಭಾರತ ಸರ್ಕಾರವು ರಾಜಧಾನಿ ಪರಿಶೀಲನಾ ಸಮಿತಿಯನ್ನು ರಚಿಸಿತು. ಈ ಸಮಿತಿಗೆ ಸರ್ ಎಂ. ವಿ. ಅವರು ಸದಸ್ಯರಾಗಿದ್ದರು.

ಸರ್ ಎಂ. ವಿ. ಯವರು 1926ರಲ್ಲಿ ಭಾರತ ಸರ್ಕಾರವು ನಿರ್ಮಿಸಿದ ಬ್ಯಾಕ್ ಬೇ ಎನ್‌ಕ್ವಾಯರಿ ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿಯು ಮಲಬಾರ್ ಬೆಟ್ಟಗಳಿಂದ ಮುಂಬಯಿಯ ಮೆರೈನ್ ಡ್ರೈವ್‌ವರೆಗೆ ಮರಳಿ ಪಡೆದ ಭೂಮಿಯ ವಿವರಗಳನ್ನು ಪರಿಶೀಲಿಸಿತು. ಇನ್ನೂ ಶುರು ಮಾಡದ ಕೆಲಸಗಳನ್ನು ಕೈಬಿಟ್ಟು, ಇತರ ಕೆಲಸಗಳನ್ನು ಸಧ್ಯಕ್ಕೆ ನಿಲ್ಲಿಸಿ, ಮರಳಿ ಪಡೆದ ಭೂಮಿಯ ಉದ್ಧಾರಕ್ಕೆ ಈ ಸಮಿತಿಯು ಸಲಹೆಯನ್ನು ನೀಡಿತು.

ಸರ್ ಎಂ. ವಿ. ಅವರನ್ನು ಹಲವು ರಾಜಕೀಯ ಚಿಂತನೆಗಳಲ್ಲಿ ಭಾಗವಹಿಸಲು ಆಮಂತ್ರಣ ನೀಡಲಾಗಿತ್ತು. ಮೊದಲನೇ ಬಾರಿಗೆ ಮೈಸೂರಿನ ದಿವಾನರಾಗಿದ್ದ ಸಂದರ್ಭದಲ್ಲಿ ಅವರು ರಾಜಕುಮಾರರು ಮತ್ತು ದಿವಾನರ ಸಮಿತಿಯಲ್ಲಿ ಮೈಸೂರನ್ನು ಪ್ರತಿನಿಧಿಸಿದ್ದರು. ಈ ಸಮಿತಿಯು ರಾಜ್ಯಗಳ ಮತ್ತು ಕೇಂದ್ರ ಸರ್ಕಾರದ ನಡುವಿನ ಸಂಬಂಧಗಳನ್ನು ಚರ್ಚಿಸುವುದಕ್ಕಾಗಿ ರಚಿತವಾಗಿತ್ತು.

ಜೆ.ಆರ್.ಡಿ. ಟಾಟಾ ಮತ್ತು ಎಚ್. ಜೆ. ಬಾಬಾ ಜೊತೆಗೆ ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಿರುವುದು

ಸರ್ ಎಂ. ವಿ. ಯವರ ಪರಿಶ್ರಮದಿಂದಾಗಿ ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಪ್ರಾರಂಭಿಸಲ್ಪಟ್ಟಿತು. ಇದಕ್ಕಾಗಿ ಮೈಸೂರು ಸರ್ಕಾರವು ಸಂಸ್ಥೆಯ ನಿರ್ಮಾಣಕ್ಕೆ ಉಚಿತವಾಗಿ ಜಮೀನನ್ನು ನೀಡುವುದರ ಜೊತೆಗೆ 5 ಲಕ್ಷ ರೂಪಾಯಿಯನ್ನೂ ಸಹ ನೀಡಿತು.

ಸರ್ ಎಂ. ವಿ. ಯವರು 1938ರಿಂದ 9 ವರ್ಷಗಳ ಕಾಲ ಸಂಸ್ಥೆಯ ಕೋರ್ಟ್‌ಗೆ ಅಧ್ಯಕ್ಷರಾಗಿದ್ದರು. 1947ರಲ್ಲಿ ನಿವೃತ್ತಿ ಹೊಂದಿದರು. 1924ರ ಜುಲೈನಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಸರ್ ಎಂ. ವಿ. ಯವರು ಹೇಳಿದ ಪ್ರಮುಖ ಹೇಳಿಕೆ ಈ ಕೆಳಗಿನಂತಿದೆ:

“ರಾಜ್ಯ ಸರ್ಕಾರವು ಈ ಉದಾರ ಸಹಾಯವನ್ನು ಮಾಡಿದೆಯೆಂದರೆ ಅದರರ್ಥ, ಬೆಂಗಳೂರಿನಲ್ಲಿರುವ ಈ ಸಂಸ್ಥೆಯು ಪ್ರಮುಖ ಕೈಗಾರಿಕೆಗಳಿಗೆ ಎದುರಾಗುವ ವೈಜ್ಞಾನಿಕ ತೊಂದರೆಗಳಿಗೆ ಪರಿಹಾರ ಕಂಡುಹಿಡಿಯುತ್ತದೆ. ಆದರೆ ಇಲ್ಲಿಯವರೆಗೆ ನಡೆದ ಕೆಲಸಗಳು ಕೈಗಾರಿಕೆ ಅಥವಾ ಜನರ ಶಿಕ್ಷಣ, ಎರಡಕ್ಕೂ ಸಹಾಯವಾಗಲಿಲ್ಲ. ನಿಜವಾದ ಗುರಿಯ ಕಡೆಗೆ ಹೋಗುವುದಕ್ಕಾಗಿ ನಾವು ಶ್ರಮ ಪಡಬೇಕಾಗಿದೆ.”

ಸರ್. ಎಂ.ವಿಯವರು ಟಾಟಾ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯ ನಿರ್ದೇಶಕರಾಗಿ 28 ವರ್ಷ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದರು. ಟಾಟಾ ಪರಿವಾರವು ಸರ್ ಎಂ. ವಿ. ಯವರ ಸಂಸ್ಥೆಯ ಜೊತೆಗಿನ ವಿಸ್ತಾರವಾದ, ಉಪಯುಕ್ತವಾದ ಮತ್ತು ಬುದ್ಧಿವಂತ ಸಹವಾಸಕ್ಕೆ ತಮ್ಮ ಗೌರವ ಮತ್ತು ಕೃತಜ್ಞತೆ ಸಲ್ಲಿಸಿತು.

ಮುಂಬಯಿಯ ಅಖಿಲ ಭಾರತ ಉತ್ಪಾದಕರ ಸಂಘ ಪ್ರಾರಂಭವಾದಾಗಿನಿಂದ, ತಮ್ಮ ಜೀವಿತಾವಧಿಯ ಕೊನೆಯವರೆಗೂ ಅದರ ಅಧ್ಯಕ್ಷರಾಗಿದ್ದರು.



ಲೇಡಿ ಲೋಕಸುಂದರಿ ಮತ್ತು ಸರ್ ಸಿ. ವಿ. ರಾಮನ್
ಅವರೊಂದಿಗೆ ಸರ್ ಎಂ. ವಿಶ್ವೇಶ್ವರಯ್ಯ (1955)

ಸರ್ ಎಂ. ವಿ. ಮತ್ತು ಮಹಾತ್ಮಾ ಗಾಂಧಿ

"ಕೈಗಾರೀಕರಣಗೊಳಿಸಿ ಅಥವಾ ನಾಶವಾಗಿ" ಎನ್ನುವುದು ಸರ್ ಎಂ. ವಿ. ಅವರ ವಾದವಾಗಿತ್ತು. ಇದಕ್ಕೆ ಸಂಪೂರ್ಣ ವಿರುದ್ಧವಾದ ಅಭಿಪ್ರಾಯ ಮಹಾತ್ಮಾ ಗಾಂಧಿಯವರದಾಗಿತ್ತು. "ಕೈಗಾರೀಕರಣಗೊಳಿಸಿ ಮತ್ತು ನಾಶವಾಗಿ" ಎನ್ನುವುದು ಅವರ ವಾದ. ಇದು ಅವರಿಬ್ಬರ ಅಭಿಪ್ರಾಯಗಳಲ್ಲಿರುವ ಮೂಲಭೂತ ವ್ಯತ್ಯಾಸ.

ಸಮೃದ್ಧ ಭಾರತವನ್ನು ಅನಾವರಣಗೊಳಿಸುವುದರಲ್ಲಿ ಸರ್ ಎಂ. ವಿ. ಮತ್ತು ಮಹಾತ್ಮಾ ಗಾಂಧಿ ಇವರಿಬ್ಬರ ಕೊಡುಗೆಯು ಗಣನೀಯವಾದದ್ದು.

ರಾಜಕೀಯ, ಧಾರ್ಮಿಕ ಮತ್ತು ನೀತಿ ತತ್ತ್ವದ ಕ್ಷೇತ್ರ ಗಾಂಧಿಯವರದ್ದಾಗಿದ್ದರೆ, ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರ ಸರ್ ಎಂ. ವಿ. ಅವರದ್ದಾಗಿತ್ತು. ಇಬ್ಬರೂ ಭಾರತವನ್ನು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸ್ವತಂತ್ರವನ್ನಾಗಿ ಮಾಡಲು ಬಯಸಿದ್ದರು. ಇಬ್ಬರ ಅಭಿಲಾಷೆ ಒಂದೇ ಆಗಿದ್ದರೂ ಸಹ ಅವರು ಆರಿಸಿಕೊಂಡ ದಾರಿಯಲ್ಲಿ ವ್ಯತ್ಯಾಸವಿತ್ತು. ಒಬ್ಬರಿಗೊಬ್ಬರು ವಿಭಿನ್ನ ಅಭಿಪ್ರಾಯದವರಾಗಿದ್ದರೂ ಸಹ ಇಬ್ಬರಿಗೂ ಪರಸ್ಪರ ಗೌರವವಿತ್ತು. ತಮ್ಮ ನಡುವಿನ ಭಿನ್ನಾಭಿಪ್ರಾಯ ಸಾರ್ವಜನಿಕರಲ್ಲಿ ಚರ್ಚೆಯ ವಿಷಯವಾಗಿ, ವಿವಾದವಾಗಿ ಮಾರ್ಪಾಡಾಗದಂತೆ ಇಬ್ಬರೂ ಎಚ್ಚರಿಕೆ ವಹಿಸುತ್ತಿದ್ದರು.

ಮಹಾತ್ಮಾ ಗಾಂಧಿಯವರು ಸರಳತೆ ಮತ್ತು ಸ್ವಾವಲಂಬನೆಯ ಸಂಕೇತವಾಗಿದ್ದರು. ಆದ್ದರಿಂದ ಆಧುನಿಕ ಯಂತ್ರೋಪಕರಣಗಳನ್ನು ವಿರೋಧಿಸುತ್ತಿದ್ದರು. ಕೈಗಾರಿಕೆಗಳಿಗೆ ನಾವು ಹೆಚ್ಚು ಒತ್ತು ಕೊಟ್ಟರೆ, ಅವು ಮನುಷ್ಯನಿಗೇ ಶಾಪವಾಗುತ್ತವೆ ಎಂದು ಗಾಂಧಿಯವರು ನಂಬಿದ್ದರು. ಆದರೆ ಸರ್ ಎಂ. ವಿ. ಯವರು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಉಪಯೋಗಿಸಿ ಕೈಗಾರಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಬೆಳೆಸಬೇಕು ಎನ್ನುವ ಸಿದ್ಧಾಂತದವರಾಗಿದ್ದರು.

ಜನಸಾಮಾನ್ಯರಲ್ಲಿ ಗಾಂಧೀಜಿಯವರಿಗಿದ್ದ ವರ್ಚಸ್ಸಿನ ಅರಿವು ಸರ್ ಎಂ.ವಿ. ಅವರಿಗೆ ಇತ್ತು. ಆದ್ದರಿಂದಲೇ ಗಾಂಧೀಜಿಯವರು ಯಾಕೆ ಬೃಹತ್ ಕೈಗಾರಿಕೆಗಳನ್ನು ವಿರೋಧಿಸುತ್ತಾರೆ ಎನ್ನುವುದಕ್ಕೆ ಸ್ಪಷ್ಟೀಕರಣವನ್ನು ಸರ್ ಎಂ. ವಿ. ಯವರು ಬಯಸಿದ್ದರು. ಸರ್ ಎಂ. ವಿ. ಅವರ ಪ್ರಕಾರ ದೇಶದ ಆರ್ಥಿಕ ಅಭಿವೃದ್ಧಿಗೆ ಬೃಹತ್ ಮತ್ತು ಸಣ್ಣ ಕೈಗಾರಿಕೆಗಳೆರಡೂ ಅವಶ್ಯಕ. ಒಂದೆಲ್ಲಾ ಒಂದು ದಿನ ಗಾಂಧೀಜಿಯವರು ತಮ್ಮ ಅಭಿಪ್ರಾಯವನ್ನು

ಬದಲಿಸುತ್ತಾರೆ ಎನ್ನುವ ಭರವಸೆಯನ್ನು ಸರ್ ಎಂ. ವಿ. ಯವರು ಹೊಂದಿದ್ದರು.

ಗಾಂಧೀಜಿಯವರೂ ಸಹ ಕೈಗಾರಿಕೆಗಳ ಸಂಪೂರ್ಣ ವಿರೋಧಿಯಾಗಿರಲಿಲ್ಲ. ಅವರ ಪ್ರಕಾರ ಹೆಚ್ಚು ಹೆಚ್ಚು ಜನ ಸೇರಿ ಉತ್ಪಾದನೆಯನ್ನು ಮಾಡಬೇಕೇ ಹೊರತು, ಒಂದೇ ಯಂತ್ರ ಹೆಚ್ಚು ಹೆಚ್ಚು ಉತ್ಪಾದನೆ ಮಾಡಬಾರದು. ಇದರಿಂದ ನಿರುದ್ಯೋಗ ಸೃಷ್ಟಿ ಆಗುತ್ತದೆ ಎನ್ನುವುದು ಅವರ ವಾದ. ಕೆಲಸ ಇಲ್ಲದ ಕೈಗೆ ಕೆಲಸ ಕೊಡಬೇಕು ಎನ್ನುವುದು ಗಾಂಧೀಜಿಯವರ ಬಯಕೆಯಾಗಿತ್ತು. 'ಮನುಷ್ಯನಿಂದ ಉತ್ಪಾದಿಸಲು ಸಾಧ್ಯವಾಗುವಂತದನ್ನು ಯಂತ್ರಗಳಿಂದ ಉತ್ಪಾದಿಸಬಾರದು' ಎನ್ನುವುದು ಗಾಂಧೀಜಿಯವರ ಸಿದ್ಧಾಂತ. ಅವರ ಈ ಸಿದ್ಧಾಂತವನ್ನು ಸಂಪೂರ್ಣವಾಗಿ ವಿರೋಧಿಸಿ, ಅವರ ಮನ ನೋಯಿಸುವುದು ಸರ್ ಎಂ. ವಿ. ಯವರಿಗೆ ಇಷ್ಟವಿರಲಿಲ್ಲ. ಆದ್ದರಿಂದ ಹಳ್ಳಿಯ ಜನರಿಗೆ ಉತ್ತಮ ವೇತನ ದೊರಕುವ ಇನ್ನೊಂದು ಪರ್ಯಾಯ ಮಾರ್ಗ ಸೃಷ್ಟಿ ಆಗುವವರೆಗೆ, ಕೈಗಳಿಗೆ ಕೆಲಸ ಕೊಡಬೇಕು ಎಂದು ತಮ್ಮ ಸಿದ್ಧಾಂತದಲ್ಲಿ ಸ್ವಲ್ಪ ಮಾರ್ಪಾಡು ಮಾಡಿಕೊಂಡು ಗಾಂಧೀಜಿಯವರೊಂದಿಗೆ ಸೈದ್ಧಾಂತಿಕ ಹೊಂದಾಣಿಕೆ ಮಾಡಿಕೊಂಡರು.

ಸತ್ಯ ಮತ್ತು ಶಾಂತಿ ಗಾಂಧೀಜಿಯವರ ಜೀವನ ಮತ್ತು ಉಸಿರಾಗಿತ್ತು. ಶಾಂತಿಯ ವಿಷಯದಲ್ಲಿ ಗಾಂಧೀಜಿಯವರ ಸಿದ್ಧಾಂತಕ್ಕೆ ಸರ್ ಎಂ. ವಿ. ಯವರ ಸಂಪೂರ್ಣ ಒಪ್ಪಿಗೆ ಇರಲಿಲ್ಲ. ಅವರ ಪ್ರಕಾರ ಆಂತರಿಕ ಮತ್ತು ಹೊರದೇಶದವರ ದಾಳಿಗೆ ದೇಶವು ಯಾವಾಗಲೂ ಸಿದ್ಧವಾಗಿರಬೇಕು.

ಗಾಂಧೀಜಿಯವರು ತಮ್ಮ ಹೋರಾಟದ ಅಸ್ತ್ರವಾನ್ನಾಗಿ ಮಾಡಿಕೊಂಡ ಉಪವಾಸ ಸತ್ಯಾಗ್ರಹ, ಚಳುವಳಿ, ಕಾನೂನನ್ನು ಪಾಲಿಸದೇ ಇರುವುದು ಮುಂತಾದವುಗಳ ಬಗ್ಗೆ ಸರ್ ಎಂ. ವಿ. ಯವರಿಗೆ ನಂಬಿಕೆ ಇರಲಿಲ್ಲ. ಅವರ ಪ್ರಕಾರ ಇವುಗಳಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಅಗೌರವ ತೋರಿದಂತೆ ಆಗುತ್ತದೆ. ಅದರ ಬದಲು ಚರ್ಚೆಯ ಮತ್ತು ಸಾಂವಿಧಾನಿಕ ವಿಧಾನಗಳು ಸೂಕ್ತ ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಇಷ್ಟೆಲ್ಲಾ ಭಿನ್ನಾಭಿಪ್ರಾಯಗಳಿದ್ದರೂ ಸಹ ಪರಸ್ಪರ ಗೌರವ ಎಂದಿಗೂ ಕಡಿಮೆ ಆಗಿರಲಿಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಅವರಿಬ್ಬರ ನಡುವಿನ ಪತ್ರಗಳು. ಈ ಪತ್ರಗಳ ಸಾರಾಂಶವನ್ನು ಇಲ್ಲಿ ನೀಡಲಾಗಿದೆ.

ಮಹಾತ್ಮಾ ಗಾಂಧಿಯವರು ಸರ್ ಎಂ. ವಿ. ಯವರಿಗೆ 15-11-1934ರಂದು ಬರೆದ ಪತ್ರ

ವಾರ್ಧಾ
15 ನವೆಂಬರ್, 1934

ಪ್ರೀತಿಯ ಸ್ನೇಹಿತ,

ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ ಅಡಿಯಲ್ಲಿ ಪ್ರಾರಂಭವಾಗುತ್ತಿರುವ ಆಲ್ ಇಂಡಿಯಾ ವಿಲ್ಲೇಜ್ ಇಂಡಸ್ಟ್ರೀಸ್ ಅಸೋಸಿಯೇಷನ್‌ಗೆ ವಿವಿಧ ವಿಷಯಗಳಲ್ಲಿನ ಪರಿಣಿತರ ಅವಶ್ಯಕತೆ ಇದೆ. ಇಂತಹ ಪರಿಣಿತರು ಆಗಾಗ ಮೀಟಿಂಗ್‌ಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ ಮತ್ತು ಅಸೋಸಿಯೇಷನ್‌ನ ಸದಸ್ಯರಾಗುವ ಅವಶ್ಯಕತೆಯೂ ಇರುವುದಿಲ್ಲ. ಅವರ ಪರಿಣಿತಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸಲಹೆಯನ್ನು ಮಾತ್ರ ಆಗಾಗ ಸಂಸ್ಥೆಯು ಕೇಳುತ್ತಿರುತ್ತದೆ. ಉದಾಹರಣೆಗೆ, ರಾಸಾಯನಿಕಗಳ ವಿಶ್ಲೇಷಣೆ, ಆಹಾರ ಪದಾರ್ಥಗಳ ಮೌಲ್ಯ, ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಬೆಳೆಸುವ ಹೊಸ ಸುಧಾರಿತ ವಿಧಾನಗಳು, ಹಳ್ಳಿಗಳಲ್ಲಿನ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸುವುದು, ಹಳ್ಳಿಯ ಸಾರಿಗೆಯ ವಿಧಾನಗಳು, ಶಿಕ್ಷಣ, ಇತ್ಯಾದಿ.

ತಾವು ದಯವಿಟ್ಟು ನಿಮ್ಮ ಹೆಸರನ್ನು ಪರಿಣಿತರ ಪಟ್ಟಿಯಲ್ಲಿ ಸೇರಿಸಲು ಅನುಮತಿ ಕೊಡುವಿರಾ? ಈ ಸಂಸ್ಥೆಯ ಉದ್ದೇಶಗಳಿಗೆ ನಿಮ್ಮ ಒಪ್ಪಿಗೆ ಇದೆ ಎಂದು ಸಹಜವಾಗಿಯೇ ನಾನು ಭಾವಿಸಿದ್ದೇನೆ.

ಗೌರವದಿಂದ
ಎಂ. ಕೆ. ಗಾಂಧಿ

ಮಹಾತ್ಮಾ ಗಾಂಧೀಜೀಯವರ ಪತ್ರಕ್ಕೆ ಸರ್ ಎಂ. ವಿ. ಯವರು ಬರೆದ ಉತ್ತರ

46, ಎಫ್. ವಾರ್ಡನ್ ರೋಡ್, ಬಾಂಬೆ
20 ನವೆಂಬರ್, 1934

ಪ್ರೀತಿಯ ಮಹಾತ್ಮಾಜೀ,

ನೀವು ನನಗೆ ಬರೆದ ಪತ್ರ ನಿನ್ನೆ ನನ್ನ ಕೈ ಸೇರಿತು. ಹಳ್ಳಿಗಳ ಕೈಗಾರಿಕೆಗಳ ಬಗ್ಗೆ ನೀವು ಶ್ರಮ ಪಡುತ್ತಿರುವುದನ್ನು ನಾನು ಬಹಳ ದಿನಗಳಿಂದ ಕುತೂಹಲದಿಂದ ಗಮನಿಸುತ್ತಿದ್ದೇನೆ.

ತಾವು ಕೇಳಿಕೊಂಡ ಹಾಗೆ ನಿಮ್ಮ ಸಂಸ್ಥೆಗೆ ನಾನು ಸಲಹೆಗಳನ್ನು ಕೊಡಲು ಸದಾ ಸಿದ್ಧನಿದ್ದೇನೆ. ಆದರೆ ಈ ಕ್ಷಣಕ್ಕೆ ನನ್ನ ಹೆಸರು ಅಧಿಕೃತವಾಗಿ ನಮೂದಾಗುವುದು ಬೇಡ. ನಾನು ನಂಬಿಕೆಯಿಟ್ಟ ಸಿದ್ಧಾಂತಗಳಂತೆ ಬೆಳವಣಿಗೆಯಾದರೆ, ಮುಂದೊಂದು ದಿನ ನನ್ನ ಹೆಸರನ್ನು ಅಧಿಕೃತವಾಗಿ ಸೇರಿಸಬಹುದು.

ನನ್ನ ಅಭಿಪ್ರಾಯದಂತೆ, ಇಂದಿನ ಯಾಂತ್ರಿಕ ಯುಗದಲ್ಲಿ ಯಂತ್ರಗಳನ್ನು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಉಪಯೋಗಿಸಬೇಕು. ಅದೇ ರೀತಿ, ಉತ್ತಮ ಆರ್ಥಿಕ ಪ್ರಗತಿಗೆ ಸಾರ್ವಜನಿಕರು ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ಯೋಜನೆಗಳನ್ನು, ನಿರ್ಧಿಷ್ಟ ಯೋಜನೆಯ ಜೊತೆ ಜೊತೆಗೆ ಹಾಕಿಕೊಳ್ಳಬೇಕು.

ಈ ಪತ್ರದ ಜೊತೆಗೆ ನಾನು ರಷ್ಯಾದ ನಾಯಕ, ಜೆ. ಸ್ಟಾಲಿನ್ ಅವರ ಭಾಷಣದ ಒಂದು ಪ್ರತಿಯನ್ನು ಕಳಿಸುತ್ತಿದ್ದೇನೆ. ಅದೇ ರೀತಿ, ಪ್ಲಾನ್ಡ್ ಎಕೊನಾಮಿ ಆಫ್ ಇಂಡಿಯಾ ಎನ್ನುವ ಪುಸ್ತಕವೊಂದನ್ನು ಸಹ ಕಳಿಸುತ್ತಿದ್ದೇನೆ. ಜೊತೆಗೆ, ಗ್ರಾಮೀಣ ಭಾರತದ ಪುನರ್ ನಿರ್ಮಾಣ ಎನ್ನುವ ಬರಹವೊಂದನ್ನು ಸಹ ಕಳಿಸುತ್ತಿದ್ದೇನೆ. ಇವು ನಿಮಗೆ ಸಹಾಯವಾಗಬಹುದು.

ಗೌರವದಿಂದ
ಎಂ. ವಿಶ್ವೇಶ್ವರಯ್ಯ

ಸರ್ ಎಂ. ವಿ. ಯವರ ಪತ್ರಕ್ಕೆ ಮಹಾತ್ಮಾ ಗಾಂಧೀಜೀಯವರ ಬರೆದ ಉತ್ತರ

ವಾರ್ಧಾ
23 ನವೆಂಬರ್, 1934

ಪ್ರೀತಿಯ ಸ್ನೇಹಿತ,

ನಿಮ್ಮ ಪತ್ರಕ್ಕೆ ಧನ್ಯವಾದಗಳು. ನಾವಿಬ್ಬರೂ ಸಂಪೂರ್ಣ ವಿರುದ್ಧವಾದ ಅಭಿಪ್ರಾಯವನ್ನು ಹೊಂದಿರುತ್ತೇವೆ. ಹಳ್ಳಿಗಳಲ್ಲಿನ ನನ್ನ ಅನುಭವದ ಪ್ರಕಾರ ಯಂತ್ರಗಳಿಂದ ಹಳ್ಳಿಗಳಲ್ಲಿರುವ ಬಡತನವನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಏಕೆಂದರೆ ಈಗಾಗಲೇ ಹಳ್ಳಿಗಳಲ್ಲಿನ ಹಲವು ಕೈಗಳು ಕೆಲಸವಿಲ್ಲದೇ ಖಾಲಿ ಕುಳಿತಿವೆ. ಇಂತಹ ಪರಿಸ್ಥಿತಿಯಲ್ಲಿ ಯಂತ್ರಗಳಿಂದ ಕೆಲಸ ಪ್ರಾರಂಭಿಸಿದರೆ, ಈ ಸಮಸ್ಯೆ ಇನ್ನಷ್ಟು ಹೆಚ್ಚುತ್ತದೆ. ಮನುಷ್ಯ ಶಕ್ತಿ ವ್ಯರ್ಥವಾಗುತ್ತದೆ. ನೀವು ಕಳಿಸಿದ ಪುಸ್ತಕ ಮತ್ತು ಇತರ ಸಾಮಗ್ರಿಗಳು ನನ್ನ ಮೇಲೆ ಅಷ್ಟೇನೂ ಪ್ರಭಾವ ಬೀರಲಿಲ್ಲ. ನನಗೆ ಹಳ್ಳಿಗಳು ಸೇನಾ ಸಾಮಗ್ರಿಗಳನ್ನು ತಯಾರಿಸುವ ಜಾಗಗಳಾಗಿ ಮಾರ್ಪಾಡಾಗುವುದು ಇಷ್ಟವಿಲ್ಲ. ಭಾರತವು ತನ್ನ ಪಾಡಿಗೆ ತಾನಿದ್ದು ಬಿಟ್ಟರೆ, ವಿದೇಶಗಳ ಯಾವುದೇ ಭಯವೂ ಅದಕ್ಕೆ ಕಾಡಲಾರದು.

ಈ ಎಲ್ಲ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ನಿಮ್ಮ ಸಾಮರ್ಥ್ಯವನ್ನು ಮತ್ತು ದೇಶದೆಡೆಗಿನ ನಿಮ್ಮ ಪ್ರೀತಿಯನ್ನು ನಾನು ಗೌರವಿಸುತ್ತೇನೆ. ನಿಮ್ಮ ಸಹಕಾರವನ್ನು ಪಡೆಯುವ ಅದೃಷ್ಟ ನನಗಿದೆಯೋ ಅಥವಾ ನಿಮ್ಮ ಪ್ರಾಮಾಣಿಕ ವಿರೋಧವನ್ನು ನಾನು ಎದುರಿಸಬೇಕೋ ಎನ್ನುವುದು ಇನ್ನೂ ತಿಳಿದುಬಂದಿಲ್ಲ.

ಗೌರವದಿಂದ
ಎಂ. ಕೆ. ಗಾಂಧಿ

ಮಹಾತ್ಮಾ ಗಾಂಧೀಜೀಯವರ ಪತ್ರಕ್ಕೆ
ಸರ್ ಎಂ. ವಿ. ಯವರು ಬರೆದ ಉತ್ತರ

46, ಎಫ್. ವಾರ್ಡನ್ ರೋಡ್, ಬಾಂಬೆ
27 ನವೆಂಬರ್, 1934

ಪ್ರೀತಿಯ ಮಹಾತ್ಮಾಜೀ,

ನಿಮ್ಮ ಪತ್ರಕ್ಕೆ ಧನ್ಯವಾದಗಳು,

ನಾವಿಬ್ಬರೂ ಪರಸ್ಪರ ಸಂಪೂರ್ಣ ವಿರುದ್ಧವಾದ ಅಭಿಪ್ರಾಯವನ್ನು ಹೊಂದಿರುವುದಾಗಿ ನೀವು ಹೇಳುತ್ತಿದ್ದೀರಿ. ನೀವು ಗುಡಿ ಕೈಗಾರಿಕೆಗಳ ಬೆಳವಣಿಗೆಗೆ ಒಲವನ್ನು ಹೊಂದಿದ್ದರೆ, ನಾನು ಗುಡಿ ಕೈಗಾರಿಕೆ ಮತ್ತು ಬೃಹತ್ ಕೈಗಾರಿಕೆ ಎರಡನ್ನೂ ಬೆಳೆಸಬೇಕೆನ್ನುವ ಅಭಿಪ್ರಾಯ ಹೊಂದಿದವನು. ಇದಕ್ಕೆ ಮುಖ್ಯ ಕಾರಣಗಳೆಂದರೆ,

1. ಬೃಹತ್ ಕೈಗಾರಿಕೆಗಳು ದೇಶದಿಂದ ಪ್ರತೀ ವರ್ಷ ಹೊರಹೋಗುತ್ತಿರುವ ದೊಡ್ಡ ಪ್ರಮಾಣದ ಹಣವನ್ನು ಉಳಿತಾಯ ಮಾಡುತ್ತವೆ.

2. ಸ್ಥಳೀಯ ಮತ್ತು ಗುಡಿ ಕೈಗಾರಿಕೆಗಳ ಯಂತ್ರಗಳ ಬಿಡಿ ಭಾಗಗಳನ್ನು ತಯಾರು ಮಾಡಲು ಬೃಹತ್ ಕೈಗಾರಿಕೆಗಳು ಬೇಕು.

3. ಅದೇ ರೀತಿ, ನಮ್ಮ ರೈಲುಗಳಿಗೆ ಮತ್ತು ಸೈನ್ಯಕ್ಕೆ ಬೇಕಾದ ಸಲಕರಣೆಗಳನ್ನು ತಯಾರು ಮಾಡಲು ಬೃಹತ್ ಕೈಗಾರಿಕೆಗಳು ಬೇಕೇ ಬೇಕು.

ನಿಮಗೆ ಬಹುಶ: ಗೊತ್ತಿರಬಹುದು, ಕೆಲವು ವರ್ಷಗಳಿಂದ ಸುಮಾರು 25ರಿಂದ 30 ಕೋಟಿ ಹಣವನ್ನು ರೈಲು ಮತ್ತು ಸೈನ್ಯಕ್ಕೆ ಬೇಕಾದ ಯಂತ್ರ ಮತ್ತು ಇತರ ಸಲಕರಣೆಗಳನ್ನು ಖರೀದಿಸಲು ಖರ್ಚು ಮಾಡಲಾಗುತ್ತಿದೆ. ಈ ಹಣವು ದೇಶದಲ್ಲಿಯೇ ಉಳಿದು, ದೇಶದ ಉಪಯೋಗಕ್ಕೆ ಸಿಗಬೇಕು. ಅಂದರೆ ಬೃಹತ್ ಉದ್ಯಮಗಳನ್ನು ಬೆಳೆಸಬೇಕು. ಇದು ದೇಶದ ಅಭಿವೃದ್ಧಿಗಾಗಿ ಮಾತ್ರ. ಇದರಲ್ಲಿ ಸ್ವಾರ್ಥ ಏನಿಲ್ಲ.

ನಾನು ಯಂತ್ರಗಳ ಉಪಯೋಗವನ್ನು ಯಾಕೆ ಉತ್ತೇಜಿಸುತ್ತೇನೆ ಎಂದರೆ, ಅವು ಮನುಷ್ಯನ ಶಕ್ತಿಗಿಂತಲೂ ವೇಗವಾಗಿ ದೇಶಕ್ಕೆ ಪರಿಣಾಮವನ್ನು ನೀಡುತ್ತವೆ. ಇದೆಲ್ಲದರ ಉದ್ದೇಶ ಏನೆಂದರೆ, ನಮ್ಮ ಜನಕ್ಕೆ ಉತ್ತಮ ಮಟ್ಟದ ಜೀವನ ನಡೆಸಲು ಆಹಾರ ಮತ್ತು ಇತರ ಸಾಮಗ್ರಿಗಳನ್ನು ವೇಗವಾಗಿ ದೊರಕಿಸಿಕೊಡುವುದು. ಅವುಗಳ ವಿತರಣೆ ಒಂದು ಸಮಸ್ಯೆಯಾಗಿದೆ ನಿಜ. ಆದರೆ ಈ ಸಮಸ್ಯೆ ಎಲ್ಲ ನಾಗರಿಕ ಜಗತ್ತಿನಲ್ಲೂ ಇದೆ. 100 ಮೈಲಿನ ಪ್ರಯಾಣವನ್ನು ಮಾಡಬೇಕಾದಾಗ, ಎತ್ತಿನ ಗಾಡಿ ಮತ್ತು ಕಾರ್, ಇವುಗಳಲ್ಲಿ ನಾವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆ? ಯಾವುದೇ ಕಾರಣಕ್ಕೂ ನಾವು ಎತ್ತಿನ ಗಾಡಿಯನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ.

ಭಾರತವು ಸಮೃದ್ಧವಾಗಬೇಕಾದರೆ ಈಗಾಗಲೇ ಯಶಸ್ವಿಯಾದ ಇತರ ಕೆಲವರ ಉದಾಹರಣೆಯನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ನಾನು ಪ್ರತಿಪಾದಿಸುತ್ತಿರುವ ಸಿದ್ಧಾಂತವು ಈಗಾಗಲೇ ನಾಗರಿಕ ಸಮಾಜ ಒಪ್ಪಿದ್ದು ಮತ್ತು ಅನುಭವಿಗಳು ಪುಷ್ಠೀಕರಿಸಿದ್ದು.

ನಾನು ತುಂಬಾ ಹೇಳುವುದಿದೆ. ಆದರೆ ಯಾವುದೂ ವಿವಾದವಾಗುವುದು ನನಗೆ ಇಷ್ಟವಿಲ್ಲ. ನಿಮಗೆ ಬೃಹತ್ ಕೈಗಾರಿಕೆಗಳಿಗೆ ಉತ್ತೇಜನ ಅವಶ್ಯವಿಲ್ಲ ಅಂತ ಅನ್ನಿಸಿದರೆ ನಾನು ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿಸುವುದಿಲ್ಲ. ನಿಮ್ಮ ಇತರ ಲಾಭದಾಯಿಕ ಯೋಜನೆಗಳಿಗೆ ನನ್ನ ವಿರೋಧವೇನಿಲ್ಲ.

ನಿಮಗೆ ಸಹಕಾರ ಕೊಡಲು ನಾನು ಸದಾ ಸಿದ್ಧನಿದ್ದೇನೆ.

ಗೌರವದಿಂದ
ಎಂ. ವಿಶ್ವೇಶ್ವರಯ್ಯ

ಸರ್ ಎಂ. ವಿ. ಯವರ ಪತ್ರಕ್ಕೆ ಮಹಾತ್ಮಾ ಗಾಂಧೀಜೀಯವರ ಬರೆದ ಉತ್ತರ

ವಾರ್ಧಾ
10 ಡಿಸೆಂಬರ್,1934

ಪ್ರೀತಿಯ ಸ್ನೇಹಿತ,

ಹಳ್ಳಿಗರ ಕ್ಷೇಮಕ್ಕೆ ನಾನು ಮಾಡುತ್ತಿರುವ ಕೆಲಸಕ್ಕೆ ನಿಮ್ಮ ಸಹಕಾರ ಇದೆ ಎನ್ನುವುದು ನಿಮ್ಮ ಪತ್ರದಿಂದ ತಿಳಿದು ಬಹಳ ಸಂತೋಷವಾಯಿತು. ಬೃಹತ್ ಯಂತ್ರಗಳ ಬಗ್ಗೆ ನೀವು ಮಂಡಿಸಿರುವ ವಾದಕ್ಕೆ ಖಂಡಿತ ಒಪ್ಪಿಗೆ ಇದೆ. ಅವುಗಳ ಉಪಯೋಗವನ್ನೂ ನಾನು ವಿರೋಧಿಸುತ್ತಿಲ್ಲ. ಒಂದು ವೇಳೆ ಅವುಗಳ ಉಪಯೋಗದಿಂದ ಮನುಷ್ಯರ ಕೈಗೆ ಕೆಲಸ ಕಡಿಮೆಯಾದರೆ ಮಾತ್ರ ಅದಕ್ಕೆ ನನ್ನ ವಿರೋಧವಿದೆ.

ಗೌರವದಿಂದ
ಎಂ. ಕೆ. ಗಾಂಧಿ

ವೈಯಕ್ತಿಕ ಹವ್ಯಾಸಗಳು ಮತ್ತು ದೃಷ್ಟಿಕೋನ

ಸರ್ ಎಂ. ವಿ. ಯವರು ಹೊರಜಗತ್ತಿಗೆ ಮತ್ತು ಸಾರ್ವಜನಿಕರಿಗೆ ಪಾಶ್ಚಾತ್ಯ ಶೈಲಿಯಲ್ಲಿ ಕಂಡುಬಂದರೂ ಸಹ ಒಳಗಡೆ ಸಾಂಪ್ರದಾಯಿಕವಾಗಿದ್ದರು, ಧೋತಿ ಮತ್ತು ಜನಿವಾರಗಳನ್ನು ಧರಿಸುತ್ತಿದ್ದರು ಹಾಗೂ ಮೈಸೂರಿನ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿರುವ ವ್ಯಕ್ತಿಯು ಇರಬೇಕಾದ ರೀತಿಯಲ್ಲಿಯೇ ಬದುಕಿದರು.

ಬೆಂಗಳೂರಿನ ಎಚ್.ಎ.ಎಲ್. ಕಾರ್ಖಾನೆಗೆ ಭೇಟಿ ನೀಡಿದ ಸಂದರ್ಭ (1950)

ಅವರ ಪ್ರಕಾರ ದೀರ್ಘಾಯುಷ್ಯ ಮತ್ತು ಆರೋಗ್ಯದ ಗುಟ್ಟು "ಶ್ರಮ, ಶಿಸ್ತುಬದ್ಧ ಹವ್ಯಾಸಗಳು, ಉತ್ಸಾಹ, ತೃಪ್ತಿ ಮತ್ತು ಸುಖದ ಕಡೆ ಬಯಕೆ ಇಲ್ಲದಿರುವುದು." ಅದರಂತೆ ಅವರೂ ಸಹ ಬದುಕಿದರು.

ಸರ್ ಎಂ. ವಿ. ಯವರ ವೈಯಕ್ತಿಕ ಜೀವನ ಹೇಗಿತ್ತು ಎನ್ನುವುದರ ಬಗ್ಗೆ ಕೆಲವರ ಹೇಳಿಕೆಗಳು:

- ಅವರು ಹಳೆಯ ಮತ್ತು ಹೊಸದರ ಮಿಶ್ರಣವಾಗಿದ್ದರು.
- ವ್ಯಾವಹರ ಮತ್ತು ಕೈಗಾರಿಕೆಗಳಲ್ಲಿ ಅಮೇರಿಕಾ ಮತ್ತು ಯುರೋಪಿಯನ್ ಶೈಲಿಗಳನ್ನು ಮೆಚ್ಚುತ್ತಿದ್ದರು, ಆದರೆ ಮನೆಯ ವಿಚಾರಗಳಲ್ಲಿ ಅವರು ಅಪ್ಪಟ ಮೈಸೂರು ಬ್ರಾಹ್ಮಣನಾಗಿದ್ದರು.
- ಅವರು ಕಟ್ಟುನಿಟ್ಟಿನ ಶಾಖಾಹಾರಿ. ಟೀ ಕುಡಿಯುತ್ತಿರಲಿಲ್ಲ ಮತ್ತು ಧೂಮಪಾನ ಸಹ ಮಾಡುತ್ತಿರಲಿಲ್ಲ.
- ಅವರು ಹಳೆಯ ಭಾರತೀಯ ಅವಿಭಕ್ತ ಕುಟುಂಬ ಪದ್ಧತಿಯನ್ನು ಇಷ್ಟ ಪಡುತ್ತಿದ್ದರು. ತಮ್ಮ ಕೊನೆಯವರೆಗೂ ತಂದೆತಾಯಿಗಳ ಕ್ರಿಯಾ ಕರ್ಮಗಳನ್ನು ನಡೆಸುತ್ತಿದ್ದರು.

1913ರಲ್ಲಿ ವಿಶ್ವೇಶ್ವರಯ್ಯನವರು ಬೆಂಗಳೂರಿನಲ್ಲಿ ಮಹಿಳಾ ಸೇವಾ ಸಮಾಜದ ಸ್ಥಾಪನೆಗೆ ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ಅವರು ಹೀಗೆ ಹೇಳಿದರು "ಯುವಕರ ಮನೆಗಳಿಗೆ ಯುವತಿಯರನ್ನು ನಿಜವಾದ ದೀಪಗಳನ್ನಾಗಿಸುವುದರಲ್ಲಿ ಇಂತಹ ಸಂಘ ಸಂಸ್ಥೆಗಳು ಮಹತ್ವದ ಪಾತ್ರ ಹೊಂದಬೇಕು."

1942ರಲ್ಲಿ ಸ್ತ್ರೀ ಸಂಘಕ್ಕೆ ಅವರು ಭೇಟಿನೀಡಿದ ಸಂದರ್ಭದಲ್ಲಿ ಹಲವು ಗಮನಿಸಬಹುದಾದ ಮಾತುಗಳನ್ನು ಯುವತಿಯರನ್ನು ಉದ್ದೇಶಿಸಿ ಹೇಳಿದರು.

- ಒಬ್ಬ ಯುವತಿಯು ಸವಾಲೋಚನೆಯನ್ನು ಆಕೆಯು 13ನೇ ವಯಸ್ಸಿನಿಂದಲೇ ಪ್ರಾರಂಭಿಸಬೇಕು. ಯುವತಿಯರ ಜೀವನವನ್ನು ರಕ್ಷಿಸುವ ಅಥವಾ ಹಾಳುಮಾಡುವ ವಿಷಯಗಳ ಬಗ್ಗೆ ಯುವತಿಯರಿಗೆ ಸರಿಯದ ಮಾಹಿತಿ ನೀಡದಿದ್ದಲ್ಲಿ ಅವರಿಗೆ ಅಪಕ್ಕಾರ ಮಾಡಿ ದಂತಾಗುತ್ತದೆ.
- ನಿಮ್ಮ ಬಟ್ಟೆಗಳನ್ನು ಸ್ವಚ್ಛವಾಗಿಡಿ ಹಾಗೂ ಸಾಮಾನ್ಯ ಸಂದರ್ಭಗಳಲ್ಲಿ ಸಂತೋಷದಿಂದಿರಿ ಮತ್ತು ನಗುತ್ತಿರಿ.
- ನಿಮ್ಮ 14ನೇ ವಯಸ್ಸಿನವರೆಗೆ ಶಾಲೆಗೆ ಹೋಗಿ ಹಾಗೂ ಶಿಕ್ಷಿತರಾಗಿರಿ. ನಿಮಗೆ ಸೌಲಭ್ಯಗಳಿದ್ದಲ್ಲಿ 18ನೇ ಅಥವಾ 21ನೇ ವಯಸ್ಸಿನವರೆಗೆ ಶಿಕ್ಷಣ ಪಡೆಯಿರಿ.
- ನಿಮ್ಮ ಕೊಠಡಿ ಮತ್ತು ಅದರ ಸುತ್ತಮುತ್ತ ಅಚ್ಚುಕಟ್ಟಾಗಿರಬೇಕು ಹಾಗೂ ಸ್ವಚ್ಛವಾಗಿರಬೇಕು. ಅದರೊಳಗಿರುವ ಪ್ರತಿಯೊಂದು ವಸ್ತುವೂ ಅದರದ್ದೇ ಜಾಗದಲ್ಲಿರಬೇಕು.

1948ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಸರ್ ಎಂ.ವಿಯವರಿಗೆ ಡಾಕ್ಟರೇಟ್ (LLD) ನೀಡಿತು. ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಸುಲ್ತಾನ ಮೊಹಿದ್ದೀನ್ ಜೊತೆಗಿನ ಫೋಟೋ.

- ಮದುವೆಯ ನಂತರದ ಗುಣನಡತೆ ಮತ್ತು ಸಚ್ಚಾರಿತ್ರ್ಯಕ್ಕೆ ಸಂಬಂಧಿಸಿದ ನಿಯಮಗಳ ಬಗ್ಗೆ ತಿಳಿಯಲು ಹಿರಿಯ ಹೆಂಗಸಿನ, ತಂದೆ, ತಾಯಿ ಅಥವಾ ನಿಮ್ಮ ಹಿತಚಿಂತಕರ ಸಲಹೆಯನ್ನು ಪಡೆಯಿರಿ. ನಿಮ್ಮ ಮನಸ್ಸು ಸ್ಥಿರ ಮತ್ತು ಅಚಲವಾಗಿರಬೇಕು.

- 16ನೇ ವಯಸ್ಸಿನವರೆಗೆ ಮದುವೆಯಾಗಬೇಡಿ ಸಾಧ್ಯವಾದರೆ 18 ಅಥವಾ ಅದಕ್ಕಿಂತಲೂ ಹೆಚ್ಚಿನ ವಯಸ್ಸಿನವರೆಗೆ ಮುಂದೂಡಿ. ಇದರಿಂದ ನೀವು ಆರೋಗ್ಯವಂತರಾಗಿರಬಹುದು ಮತ್ತು ಆರೋಗ್ಯವಂತ ಮಗುವನ್ನೂ ಪಡೆಯಬಹುದು.

- ನೀವು ಮದುವೆಯಾದಾಗ ಕುಟುಂಬವನ್ನು ನೋಡಿಕೊಳ್ಳುವ ಎಲ್ಲಾ ಜವಾಬ್ದಾರಿಯನ್ನು ನಿಮ್ಮ ಗಂಡನ ಮೇಲೆ ಹೇರಿಬಿಡಬೇಡಿ. ಅವನ ಕೆಲಸಗಳಲ್ಲಿ ನಿಮ್ಮ ಸಹಾನುಭೂತಿ ಹಾಗೂ ಒತ್ತಾಸೆಯ ಅಗತ್ಯವಿರುತ್ತದೆ. ಯಾವುದೇ ಸಂದರ್ಭದಲ್ಲಿ ನಿಮಗೆ ಆತನ ಆದಾಯವು ಕುಟುಂಬವನ್ನು ಸಲಹಲು ಮತ್ತು ನೆಮ್ಮದಿಯಾಗಿರಲು ಸಾಕಾಗುವುದಿಲ್ಲ ಎಂದೆನಿಸಿದರೆ ಆತನ ಒಪ್ಪಿಗೆ ಪಡೆದುಕೊಂಡು ಕುಟುಂಬವನ್ನು ನೆಮ್ಮದಿಯಾಗಿಡಲು ತಕ್ಕಮಟ್ಟಿಗೆ ಸಂಪಾದಿಸುವಂತೆ ಬೇರೆ ದಾರಿಯನ್ನು ಕಂಡುಕೊಳ್ಳಿ. ಇದು ನಿಮ್ಮನ್ನು ನೀವು ಮನೆಯ ಒಳಗೆ ಅಥವಾ ಹೊರಗೆ ಕೆಲಸದಲ್ಲಿ ತೊಡಗಿಸಿಕೊಳ್ಳಲು ಒಂದು ಅವಕಾಶ. ಇದೇ ಒಂದು ಹವ್ಯಾಸವಾಗಲೂಬಹುದು.

- ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ಕಲಿತುಕೊಳ್ಳಿ. ಯಾವುದಾದರೂ ತುರ್ತು ಸಂದರ್ಭ ಬಂದರೆ ನಿಮ್ಮ ಮನೆಯನ್ನು ನೀವು ರಕ್ಷಿಸಿಕೊಳ್ಳಲು ಸಮರ್ಥರಾಗಿರಬೇಕು.

- ನಿಯಮಿತವಾಗಿ ಕೆಲಸಮಾಡಲು ಅಭ್ಯಾಸ ಮಾಡಿಕೊಳ್ಳಿ ಮತ್ತು ನಿಯಮಗಳ ಜೊತೆ ಒಪ್ಪಂದ ಮಾಡಿಕೊಳ್ಳಿ. 8ಗಂಟೆ ಕೆಲಸಕ್ಕೆ, 8ಗಂಟೆ ನಿದ್ದೆಗೆ ಮತ್ತು ಉಳಿದ 8ಗಂಟೆಯನ್ನು ವ್ಯಾಯಾಮ, ಮನೋರಂಜನೆ, ದೇಹದ ಸ್ವಚ್ಛತೆಗೆ ಮತ್ತು ಮನೆಯ ಹಾಗೂ ಹೊರಗಿನ ಇತರ ಕೆಲಸಗಳನ್ನು ಮಾಡಲು ಉಪಯೋಗಿಸಿಕೊಳ್ಳಿ.

- ನಿಮಗೆ ವಹಿಸಿದ ಕೆಲಸವನ್ನು ನಿಶ್ಚಿತವಾಗಿ ಮುಗಿಸಬಹುದು ಎನ್ನುವ ಧೈರ್ಯವಿಲ್ಲದಿದ್ದರೆ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬೇಡಿ. ಆದರೆ ಸೆಳೆತದಿಂದಾಗಿ ಅಥವಾ ಸಾಂಸಾರಿಕ ವಿಷಯಗಳಿಂದಾಗಿ ನೀವು ಒಂದು ಕೆಲಸವನ್ನು ಮಾಡಲೇಬೇಕಾಗಿ ಬಂದರೆ ಆ ಕೆಲಸವನ್ನು ಮಾಡುವುದರಲ್ಲಿ ಯಾವುದೇ ರೀತಿಯ ಸೋಲನ್ನನುಭವಿಸಬೇಡಿ. ಎಲ್ಲಾ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ಮಾಡಲೇಬೇಕು.

- ಹಿರಿಯರ ಬಗ್ಗೆ ಅಭಿಮಾನವಿರಲಿ, ಮಕ್ಕಳ ಬಗ್ಗೆ ಪ್ರೀತಿ ಮತ್ತು ಕರುಣೆಯಿರಲಿ. ಕೆಲಸದವರ ಜೊತೆ ಹಾಗೂ ನೆರೆಹೊರೆಯವರ ಜೊತೆ ಕರುಣೆಯಿಂದ ನಡೆದುಕೊಳ್ಳಿ. ನಿಮಗೆ ಸಾಧ್ಯವಾದರೆ ಸ್ವಲ್ಪ ಸಮಯವನ್ನು ನಮ್ಮ ನಾಡಿನ ಕೆಲಸಗಳಿಗಾಗಿ ವಿನಿಯೋಗಿಸಿ.

- ನೀವು ಒಂದು ಚಿಕ್ಕ ಅಣು ಎಂಬ ಭಾವನೆಯನ್ನು ಮತ್ತು ನಾಚಿಕೆಯನ್ನು ಬಿಟ್ಟು ಬಿಡಿ. ಪಾಶ್ಚಾತ್ಯ ಮಹಿಳೆ ಮತ್ತು ನಮ್ಮಲ್ಲಿನ ಮುಂದುವರೆಯುತ್ತಿರುವ ಮಹಿಳೆ, ಮುಂದುವರಿದ ಮತ್ತು ಸುಸಂಸ್ಕೃತ ಮಹಿಳೆ, ಹೀಗೆ ಎಲ್ಲರೂ ತಮ್ಮ ಜೀವನವನ್ನು ಆತ್ಮವಿಶ್ವಾಸದಿಂದ ಮತ್ತು ಧೈರ್ಯದಿಂದ ಜೀವಿಸಬೇಕು.

- ನಿಮ್ಮ ಗೆಲುವು ಮತ್ತು ನಿಮ್ಮ ಸಂತೋಷ ನಿಮ್ಮ ಮೇಲೆಯೇ ನಿಂತಿದೆ. ಬೇರೆ ಯಾರೊಬ್ಬರೂ ನಿಮ್ಮ ಜೀವನಕ್ಕೆ ಒಂದು ರೂಪ ಕೊಡಲಾರರು. ಹಿರಿಯರ ಮತ್ತು ಅನುಭವಿಗಳ ಸಲಹೆಯನ್ನು ಪಡೆದುಕೊಳ್ಳಿ, ಅವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ನಿರ್ಧಾರವನ್ನು ನೀವೇ ತೆಗೆದುಕೊಳ್ಳಿ. ಜೀವನದಲ್ಲಿ ಗುಣ, ನಿಯಮ ಮತ್ತು ಕ್ರಮಬದ್ಧತೆ ಮುಖ್ಯವಾಗಿದೆ. ನಿಮ್ಮಲ್ಲಿ ಇವುಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿ. ಪರಿಸ್ಥಿತಿ ಬದಲಾದಾಗ ಸೂಕ್ತವಾದ ಬದಲಾವಣೆ ಮತ್ತು ತಿದ್ದುಪಡಿಗಳನ್ನು ಬದಲಾದ ಪರಿಸ್ಥಿತಿಗನುಗುಣವಾಗಿ ಮಾಡಿಕೊಳ್ಳಬೇಕು.

ವಿದೇಶ ಪ್ರಯಾಣ

ಅಭಿವೃದ್ಧಿ ಹೊಂದಿದ ದೇಶಗಳ ಕ್ರಿಯಾಶೀಲತೆ ಮತ್ತು ಸಮೃದ್ಧತೆಯ ಗುಟ್ಟನ್ನು ತಿಳಿದುಕೊಳ್ಳಲು ಸರ್ ಎಂ. ವಿ. ಯವರು ಅಭಿವೃದ್ಧಿ ಹೊಂದಿದ ದೇಶಗಳಿಗೆ ಪ್ರವಾಸ ಕೈಗೊಳ್ಳಲು ನಿರ್ಧರಿಸಿದರು. ಅವರ 6 ವಿದೇಶ ಪ್ರಯಾಣಗಳಲ್ಲಿ, ಅಮೇರಿಕಾಗೆ 5 ಸಲ ಮತ್ತು ಜಪಾನಿಗೆ 2 ಸಲ ಭೇಟಿ ನೀಡಿದರು.

1898ರಲ್ಲಿ ಮುಂಬಯಿ ಸರಕಾರದ ಸೇವೆಯಲ್ಲಿ ನೀರಾವರಿ ಪ್ರಧಾನ ಎಂಜಿನಿಯರ್‌ಗೆ ಸಹಾಯಕರಾಗಿದ್ದಾಗ ಕೈಗೊಂಡ ಮೊದಲನೆಯ ವಿದೇಶ ಪ್ರಯಾಣದಲ್ಲಿ ಜಪಾನ್‌ಗೆ ಭೇಟಿ ನೀಡಿದರು. ಜಪಾನಿನ ಅಭಿವೃದ್ಧಿಯ ಕುರಿತು ಈ ರೀತಿ ಟಿಪ್ಪಣಿ ಬರೆದುಕೊಂಡರು. "ಉತ್ತಮ ಮುಂದಾಲೋಚನೆ ಮತ್ತು ಶಕ್ತಿಯಿರುವಂತಹ ರಾಜಕಿಯ ನಾಯಕರ ತಂಡವು ಅಮೇರಿಕಾ ಮತ್ತು ಇಂಗ್ಲೆಂಡಿಗೆ ಭೇಟಿ ನೀಡಿತು ಮತ್ತು ಹೊಸ ಯೋಜನೆ, ಪ್ರಸ್ತಾಪ ಹಾಗೂ ಅಸಂಖ್ಯ ರೂಪುರೇಖೆಗಳನ್ನು ಅವರ ದೇಶದ ಉತ್ತಮ ಸ್ತರದ ಆಡಳಿತ ಹಾಗೂ ವ್ಯವಹಾರಿಕ ಜೀವನವನ್ನು ಬೆಳೆಸಲು ತಂದರು ಎಂಬುದನ್ನು ನಾನು ಅಲ್ಲಿ ಗಮನಿಸಿದೆ"



ಸರ್ ಎಂ.ವಿಯವರು (ಎಡದಿಂದ 5ನೇಯವರು) ಮುಂಬಯಿನಲ್ಲಿ A.I.M.O.ದ ಸದಸ್ಯರೊಂದಿಗೆ (1942)

ಅವರು ಕೈಗೊಂಡ ಎರಡನೆಯ ಪ್ರವಾಸವು 1908ರ ಕೊನೆ ಹಾಗೂ 1909ರ ಪ್ರಾರಂಭದಲ್ಲಿ ಮುಂಬಯಿಯ ಸರಕಾರದ ಸೇವೆಯಿಂದ ನಿವೃತ್ತಿ ಪಡೆಯುವುದಕ್ಕೆ ಮೊದಲು ಪಡೆದ ರಜೆಯಲ್ಲಾಗಿದ್ದಿತ್ತು. ಈ ಸಂದರ್ಭದಲ್ಲಿ ಸರ್ ಎಂ. ವಿ. ಯವರು 5 ತಿಂಗಳು ಅಮೇರಿಕಾ ಮತ್ತು ಯೂರೋಪ್‌ನಲ್ಲಿ ನೆಲೆಸಿದರು. ಕೆನಡಾದ ಸ್ವೀಡನ್, ಡೆನ್ಮಾರ್ಕ್, ಹಾಲೆಂಡ್, ಸೈಂಟ್ ಪೀಟರ್‌ಬರ್ಗ್ (ಈಗಿನ ಲೆನಿನ್ ಗ್ರಾಡ್), ನ್ಯೂಯಾರ್ಕ್, ಒಟ್ಟಾವಾ ಮತ್ತು ಟೊರ್ಯಾಂಟೋ ಹಾಗೂ ಡೆಟ್ರೋಇಟ್‌ಗೆ ಭೇಟಿ ನೀಡಿದರು. ಪ್ರವಾಸದಿಂದ ಹಿಂದಿರುಗುವಾಗ ಲಂಡನ್ ಮತ್ತು ಫ್ರಾನ್ಸ್‌ಗೆ ಭೇಟಿನೀಡಿದರು. ಬಹುಶಃ ನೀರಿನ ವಿತರಣೆ, ಚರಂಡಿ, ಆಣೆಕಟ್ಟು ಮತ್ತು ನೀರಾವರಿ ಬಗ್ಗೆ ಕಲಿಯಲು ಈ ಪ್ರವಾಸ ಕೈಗೊಂಡಿದ್ದರು.

1919ರಲ್ಲಿ ಸರ್ ಎಂ. ವಿ. ಯವರು ಮೈಸೂರು ರಾಜ್ಯ ಸರ್ಕಾರದ ಸೇವೆ

ಬಿಟ್ಟು 3 ತಿಂಗಳ ನಂತರ 3ನೇ ಪ್ರವಾಸ ಕೈಗೊಂಡರು. ಆಗ ಅವರು ಜಪಾನ್, ಕೆನಡಾ ಮತ್ತು ಅಮೇರಿಕಾ ದೇಶಗಳಿಗೆ ಭೇಟಿ ನೀಡಿದರು ಮತ್ತು ಶಿಕ್ಷಣ, ಕೈಗಾರಿಕೆ ಹಾಗೂ ವಾಣಿಜ್ಯ ವಿಷಯಗಳ ಬಗ್ಗೆ ಅಧ್ಯಯನ ನಡೆಸಿದರು.

ಸರ್ ಎಂ. ವಿ. ಯವರು ಚಿಕಾಗೋದಲ್ಲಿ ಒಂದು ಉದಾಹರಣೆ ಕೊಡುತ್ತಾ ಹೇಳುತ್ತಾರೆ. ಒಮ್ಮೆ ಒಬ್ಬ ವ್ಯಾಪಾರಿಯೊಬ್ಬನಿಗೆ ಸರ್ ಎಂ. ವಿ. ಯವರು ಒಂದು ಡಾಲರ್ ಹಣವನ್ನು ಹೆಚ್ಚಿಗೆ ನೀಡಿದ್ದರಂತೆ. ಆದರೆ ಆ ವ್ಯಾಪಾರಿಯು ಆ ಹಣವನ್ನು ಹಿಂತಿರುಗಿಸಲು ಇವರನ್ನು ಹೊಟೆಲ್ಲಿನವರೆಗೆ ಇವರನ್ನು ಹುಡುಕಿಕೊಂಡು ಬಂದಿದ್ದನಂತೆ. ಅದನ್ನು ನೀನೇ ಇಟ್ಟುಕೋ ಎಂದು ಎಷ್ಟೇ ಹೇಳಿದರೂ ಕೇಳಲಿಲ್ಲವಂತೆ. ಅವನ ಪ್ರಕಾರ ಅದು ಅವನು ಗಳಿಸಿದ ಹಣವಲ್ಲ. ಆದ್ದರಿಂದ ಅದನ್ನು ಇಟ್ಟುಕೊಳ್ಳುವುದು ತಪ್ಪು.

ಅವರು 1920ರಲ್ಲಿ ಲಂಡನ್‌ಗೆ ಹಿಂತಿರುಗಿ ಬಂದು 10ತಿಂಗಳುಗಳ ಕಾಲ ಅಲ್ಲಿ ತಂಗಿದ್ದು "Reconstructing India" ಎಂಬ ಪುಸ್ತಕ ಬರೆದರು.

USAನ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ, ವಿಶ್ವವಿದ್ಯಾನಿಲಯವು ಯಾವುದೇ ವಿಷಯದಲ್ಲಿ ವಿಶೇಷ ಪರಿಣತಿಯನ್ನು ಹೊಂದಿದೆಯೇ ಎಂದು ಅಧ್ಯಕ್ಷರನ್ನು ಕೇಳಿದಾಗ ಅವರು "ನಾವು ಎಲ್ಲಾ ಕುದುರೆಗಳನ್ನೂ ಸರಿಸಮವಾಗಿ ಓಡಿಸುತ್ತೇವೆ" ಎಂದರು. ಅದರರ್ಥ ವಿಶ್ವವಿದ್ಯಾನಿಲಯವು ಯಾವತ್ತೂ ಹಿಂದುಳಿದಿಲ್ಲ ಎಂದು.

1919ರಲ್ಲಿ ಟೋಕಿಯೋಗೆ ಸರ್ ಎಂ. ವಿ.
ಭೇಟಿ ನೀಡಿದ ಸಂದರ್ಭ

ಸರ್ ಎಂ. ವಿ. ಯವರು ವಾಷಿಂಗ್ಟನ್ (USA)ನ Federal Reserve Board ನ ಗವರ್ನರ್‌ರನ್ನು ಭೇಟಿ ಮಾಡಿ ಭಾರತದ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲು ಇರುವ ಉತ್ತಮ ವಿಧಾನದ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಆಗ ಅವರು ಹೀಗೆ ಹೇಳಿದರು "ಇವರನ್ನು ಅವರ ದೇಶಕ್ಕೆ ಹಿಂದಿರುಗಲು ಹೇಳಿ ಹಾಗೂ ಅಲ್ಲಿನ ಸಂವಿಧಾನವನ್ನು ರಾಷ್ಟ್ರೀಯ ಸರಕಾರಕ್ಕೆ ಬದಲಾಯಿಸಿ ನನ್ನನ್ನು ಭೇಟಿ ಮಾಡಲು ಹೇಳಿ. ಆಗ ನಾನು ಇವರಿಗೆ ಸರಿಯಾದ ಸೂಚನೆಯನ್ನು ಕೊಡಬಲ್ಲೆ." ಇದು ನಮ್ಮ ದೇಶವು ಬೇರೆ ದೇಶಗಳ ಮೇಲೆ ಆಧಾರವಾಗಿರುವುದೇ ನಾವು ಹಿಂದುಳಿದಿರುವುದಕ್ಕೆ ಕಾರಣ ಎಂಬುದಕ್ಕೆ ಸಾಕ್ಷಿಯಾಗಿದೆ.

*ಇಂಗ್ಲೆಂಡಿನ ಬ್ರಿಸ್ಟೋಲ್‌ಗೆ 1946ರಲ್ಲಿ **A.I.M.O.**ದ ಸದಸ್ಯರಾಗಿ ಭೇಟಿ ನೀಡಿದಾಗ*

ಅಮೇರಿಕದ Secretary of Commerce ಹರ್ಬರ್ಟ್ ಹೂವರ್ ರವರು ವಿಶ್ವೇಶ್ವರಯ್ಯ ನವರಿಗೆ ಭಾರತ ಹಿಂದುಳಿದಿರು ವುದಕ್ಕೆ ಕಾರಣ ವನ್ನು ಒಂದು ಗೂಢಾರ್ಥ ವಿರುವ ವಾಕ್ಯದಲ್ಲಿ ಹೇಳಿದರು "ನಿಮ್ಮಲ್ಲಿನ ಜನಗಳಲ್ಲಿ ಆತುರ ವಿಲ್ಲ" ಎಂದು. ಜರ್ಮನಿಯ ಭೇಟಿಯ ಸಂದರ್ಭದಲ್ಲಿ ಅಲ್ಲಿನ ಜನರಲ್ಲಿ ರುವ ಸಂಘಟನಾ ಶಕ್ತಿಯನ್ನು ಗುರುತಿಸಿದರು. ಅಮೇರಿಕನ್ನರಲ್ಲಿರುವ "ಆತುರವನ್ನು" ಮತ್ತು ಜರ್ಮನ್ನರಲ್ಲಿರುವ "ಸಂಘಟನಾ ಶಕ್ತಿ"ಯು ಭಾರತದ ಅಭಿವೃದ್ಧಿಗೆ ಅಗತ್ಯವಾಗಿದ್ದಿತು.

ಸರ್ ಎಂ. ವಿ. ಯವರು ತಮ್ಮ 4ನೇ ಪ್ರವಾಸವನ್ನು 1926ರಲ್ಲಿ "Backbay Reclamation Committee"ಯ ಇಂಜಿನಿಯರ್ ಸದಸ್ಯನಾಗಿ ಲಂಡನ್‌ಗೆ ಭೇಟಿ ನೀಡಿದರು. ಕೆಲಸ ಮುಗಿದ ನಂತರ ಅವರು ಅಮೇರಿಕಾ ಮತ್ತು ಯೂರೋಪ್ ದೇಶಗಳಿಗೆ ಸ್ಟೀಲ್ ತಯಾರಿಕೆ ಹಾಗೂ ಮರದ ಭಟ್ಟಿ ಇಳಿಸುವುಕೆಯಲ್ಲಿರುವ ತೊಂದರೆಗಳ ಬಗ್ಗೆ ತಿಳಿಯಲು ಹೋಗಿದ್ದರು.

ಭಾರತದಲ್ಲಿ ಒಂದು ಆಟೋಮೊಬೈಲ್ ಕಾರ್ಖಾನೆಯನ್ನು ಸ್ಥಾಪಿಸುವ ಉದ್ದೇಶದಿಂದ ಸರ್ ಎಂ. ವಿ. ಯವರು 1935ರಲ್ಲಿ ತಮ್ಮ 75ನೇ ವಯಸ್ಸಿನಲ್ಲಿ 5ನೇ ವಿದೇಶಪ್ರವಾಸ ಕೈಗೊಂಡರು. ಅವರು ಇಂಗ್ಲೆಂಡ್ (ಕಾವೆಂಟ್ರಿ, ಆಕ್ಸ್‌ಫರ್ಡ್, ಬರ್ಮಿಂಗ್‌ಹ್ಯಾಮ್) ಮತ್ತು ಯುರೋಪ್ (ಇಟಲಿ, ಜರ್ಮನಿ ಮತ್ತು ಫ್ರಾನ್) ದೇಶಗಳಿಗೆ ಪ್ರವಾಸ ಕೈಗೊಂಡರು. ಇಟಲಿಯ ಟುರಿಯನ್‌ನಲ್ಲಿರುವ ಫಿಯೆಟ್

ಮಾದರಿಯಿಂದ ಅವರು ಪ್ರಭಾವಿತರಾದರು. ಅವರು ಫೋರ್ಡ್ ಫ್ಯಾಕ್ಟರಿ, ಜನರಲ್ ಮೋಟಾರ್ಸ್ ಕಾರ್ಪೊರೇಶನ್ USA, ಕ್ರಿಸ್ಲರ್ ಕಾರ್ಪೊರೇಶನ್‌ಗೆ ಭೇಟಿ ನೀಡಿದರು. ಭಾರತದಲ್ಲಿ ಒಂದು ಆಟೋಮೊಬೈಲ್ ಘಟಕವನ್ನು ಪ್ರಾರಂಭಿಸಲು ಬೇಕಾದ ಆರ್ಥಿಕ ಹಾಗೂ ತಾಂತ್ರಿಕ ಸಂಭವನೀಯತೆಯ ವರದಿಯನ್ನು ಪಡೆದುಕೊಂಡರು. ಕರಾರಿನ ಮಾತುಕತೆಯನ್ನು ಕೂಡಾ ನಡೆಸಿದರು. ಈ ಕರಾರಿನ ಮೂಲಕ ಶ್ರೀ ವಾಲ್ಚಂದ್ ಹೀರಾಚಂದ್‌ರವರ ಪಾರುಪತ್ಯದಲ್ಲಿ ಪ್ರೀಮಿಯರ್ ಅಟೋಮೊಬೈಲ್ ಕಂಪನಿಯು ಭಾರತದಲ್ಲಿ ಸ್ಥಾಪಿಸಲ್ಪಟ್ಟಿತು.

1946ರಲ್ಲಿ ಮುಂಬಯಿಯ "ಅಖಿಲ ಭಾರತ ಉತ್ಪಾದಕರ ಸಂಘ"ದ ಪ್ರತಿನಿಧಿಗಳ ಮುಖ್ಯಸ್ಥರಾಗಿ UK, USA ಯುರೋಪ್ ಮತ್ತು ಕೆನಡಾಗಳಿಗೆ 86ನೇ ವಯಸ್ಸಿನಲ್ಲಿ ತಮ್ಮ 6ನೇ ವಿದೇಶ ಪ್ರವಾಸ ಕೈಗೊಂಡರು. ಇವರು ಬೇರೆ ಬೇರೆ ಗುಂಪುಗಳಲ್ಲಿ ವಸ್ತ್ರ, ಇಂಜಿನಿಯರಿಂಗ್, ರಾಸಾಯನಿಕ ಮತ್ತು ವೈಮಾನಿಕ ಕಾರ್ಖಾನೆಗಳಿಗೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ಗಮನಿಸಿದರು. ಭಾರತದ ಕೈಗಾರಿಕೆಗಳ ಶೀಘ್ರ ಅಭಿವೃದ್ಧಿಗೆ ಸಹಾಯವಾಗುವಂತೆ ಸಲಹೆ ಮತ್ತು ವ್ಯವಹಾರಿಕ ಬೆಲೆಯುಳ್ಳಂತಹ ಅಂಶಗಳನ್ನೊಳಗೊಂಡ ಒಂದು ಸರ್ವ ವ್ಯಾಪಕ ವರದಿಯನ್ನು ನೀಡಿದರು.

ಅವರ ವಿದೇಶ ಪ್ರವಾಸಗಳಲ್ಲಿ ಸರ್. ಎಂ.ವಿ.ಯವರು ಒಂದು ಗುರಿಯಿಂದ ಮಾರ್ಗದರ್ಶನ ಪಡೆಯುವುದನ್ನು ಕಾಣಬಹುದು.

ಸರ್ ಎಂ. ವಿ. ರವರ ಈಜಿಪ್ಟ್‌ನ ವಿದೇಶ ಪ್ರಯಾಣ

ವಿಶ್ವೇಶ್ವರಯ್ಯನವರ ವಿಚಾರಧಾರೆಗಳು

ಸರ್ ಎಂ. ವಿ. ಯವರ ಅನುಭವ ಅಗಾಧವಾದದ್ದು. ಪ್ರಪಂಚದ ವಿವಿಧ ಭಾಗಗಳಿಗೆ ಭೇಟಿ ನೀಡುವುದರ ಮೂಲಕ, ಹಲವು ಉನ್ನತ ವ್ಯಕ್ತಿಗಳ ಜೊತೆ ಒಡನಾಟದ ಮೂಲಕ ಹಾಗೂ ಅಧ್ಯಯನದ ಮೂಲಕ ತಮ್ಮ ಅನುಭವದ ವಿಸ್ತಾರವನ್ನು ಹೆಚ್ಚಿಸಿಕೊಂಡಿದ್ದರು. ಸರ್ ಎಂ. ವಿ. ಯವರು ತಮ್ಮ ಕಾಲದ ಇತರರಿಗಿಂತ 50 ವರ್ಷ ಮುಂದಿದ್ದರು ಎನ್ನುತ್ತಾರೆ. ಇದಕ್ಕೆ ಮುಖ್ಯ ಕಾರಣ ಅವರ ವಿಚಾರಧಾರೆಗಳು. ತಮ್ಮ ಅಗಾಧ ಅನುಭವದ ಮೂಲಕ ಪ್ರಗತಿಪರ ಭಾರತ ಹೇಗಿರಬೇಕೆಂದು 1950ರ ವೇಳೆಯಲ್ಲಿಯೇ ಹೇಳಿದ್ದು ಇಂದಿಗೂ ಸಹ ಪ್ರಸ್ತುತವಾಗಿದೆ. ಅವುಗಳಲ್ಲಿ ಕೆಲವುಗಳ ಸಂಕ್ಷಿಪ್ತ ರೂಪವನ್ನು ಕೆಳಗೆ ಗಮನಿಸಬಹುದು:

- ಭಾರತದ ಜನಸಂಖ್ಯೆ ಬೆಳವಣಿಗೆ ಹೀಗೆಯೇ ಮುಂದುವರೆದರೆ ದೇಶಕ್ಕೆ ಉಳಿಗಾಲವಿಲ್ಲ. ಆಹಾರ ಉತ್ಪಾದನಾ ಪ್ರಮಾಣಕ್ಕಿಂತ ಜನಸಂಖ್ಯಾ ಪ್ರಮಾಣ ವೇಗದಲ್ಲಿದೆ. ಆದ್ದರಿಂದ ಜನನ ನಿಯಂತ್ರಣ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳುವುದು ಅನಿವಾರ್ಯ.
- ನಾವು ಹೆಚ್ಚು ಹೆಚ್ಚು ಆಹಾರ ಉತ್ಪಾದಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದಕ್ಕೆ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಬೇಕು.
- ನಮ್ಮ ದೇಶದಲ್ಲಿ ಮಳೆಯು ಅನಿಶ್ಚಿತತೆಯಿಂದ ಕೂಡಿದೆ. ಆದ್ದರಿಂದ ಜಲಾಶಯಗಳ ಅಭಿವೃದ್ಧಿ ಅತಿ ಅವಶ್ಯ. ಅದೇ ರೀತಿ, ಹಳ್ಳಿಯಲ್ಲಿ ಕೈಗಾರಿಕೆಗಳನ್ನು ತರಬೇಕು. ಆಗ ಹಳ್ಳಿಯ ಜನ ಅಗತ್ಯವಾದಷ್ಟು ಆದಾಯವನ್ನು ಮನೆಗೆ ತರಲು ಸಹಕಾರಿಯಾಗುತ್ತದೆ.
- ನಮ್ಮ ಸೈನ್ಯಕ್ಕೆ ಆಧುನಿಕ ಸಲಕರಣೆಗಳನ್ನು ನೀಡಬೇಕು ಮತ್ತು ಸೂಕ್ತ ತರಬೇತಿ ನೀಡಬೇಕು. ಸೈನ್ಯಕ್ಕೆ ಪರಿಣಿತ ಮನುಷ್ಯ ಶಕ್ತಿಯನ್ನು ನೀಡಬೇಕು. ಇಂದಿನ ಕಾಲದಲ್ಲಿ ಆದಷ್ಟು ಮಟ್ಟಿಗೆ ಸೈನ್ಯದಲ್ಲಿ ಯಂತ್ರದ ಬಳಕೆ ಮಾಡಿಕೊಳ್ಳಬೇಕು. ಭಾರತವು ಶಾಂತಿ ಪ್ರೇಮ ರಾಷ್ಟ್ರವಾದರೂ ಸಹ ಹೊರಗಿನಿಂದ ಎದುರಾಗಬಹುದಾದ ದಾಳಿಗೆ ನಾವು ಯಾವಾಗಲೂ ಸಿದ್ಧರಾಗಿರಬೇಕು.
- ಸೈನ್ಯದ ಸಾಮರ್ಥ್ಯ ನಿಂತಿರುವುದು ಅದರ ಆಡಳಿತಗಾರರ ಬುದ್ಧಿಶಕ್ತಿಯ ಮೇಲೆ. ಆದ್ದರಿಂದ ಶೈಕ್ಷಣಿಕ ವರ್ಗದಿಂದ ಹೆಚ್ಚು ಹೆಚ್ಚು ಜನರನ್ನು ಸೈನ್ಯಕ್ಕೆ ಆಯ್ಕೆ ಮಾಡಿಕೊಳ್ಳಬೇಕು. ಅದೇ ರೀತಿ, ಭಾರತದ ಎಲ್ಲ ಭಾಗಗಳಿಂದಲೂ, ಎಲ್ಲ ಜಾತಿಯಿಂದಲೂ ಯುವಕರನ್ನು ಸೈನ್ಯಕ್ಕೆ ಆಯ್ಕೆ ಮಾಡಿಕೊಳ್ಳಬೇಕು. ಸೈನ್ಯ ವಿಜ್ಞಾನಕ್ಕೆ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವಿಷಯದಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು.

- ರಕ್ಷಣೆಗೆ ಸಂಬಂಧಪಟ್ಟ ವಿವಿಧ ವಿಷಯಗಳನ್ನು ಅಧ್ಯಯನ ಮಾಡುವುದು ಮತ್ತು ಆಧುನಿಕ ಸೈನಿಕ ಉಪಕರಣಗಳನ್ನು ತಯಾರಿಸುವುದು ಇಂದಿನ ಅಗತ್ಯವಾಗಿದೆ.

- ನಮ್ಮ ಆರ್ಥಿಕ ಸ್ಥಿತಿ ಅಸಮತೋಲನದಿಂದ ಕೂಡಿದೆ. ಕೆಲವರಿಗೆ ಸುಖ ಅನುಭವಿಸುವಷ್ಟು ಆದಾಯವಿದ್ದರೆ, ಕೆಲವರಿಗೆ ಊಟಕ್ಕೂ ಹಣವಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಕೆಲಸಗಾರರನ್ನು ಶೋಷಿಸಲಾಗುತ್ತಿದೆ. ಅವರು ಉತ್ಪಾದನೆಯಲ್ಲಿ ಬಂದ ಲಾಭದಲ್ಲಿ ಕಡಿಮೆ ಪಾಲನ್ನು ಪಡೆಯುತ್ತಿದ್ದಾರೆ. ಕೆಲಸವನ್ನು ಕೊಡುವವರು ಹೆಚ್ಚಿನ ಪಾಲನ್ನು ಪಡೆಯುತ್ತಿದ್ದಾರೆ. ಇದಕ್ಕೆ ಸಮಾಜವಾದ ಪರಿಹಾರ ಆಗಬಹುದು.

- ಸಮಾಜವಾದದ ಪ್ರಕಾರ ಎಲ್ಲ ಆದಾಯವನ್ನೂ ದುಡಿಮೆಯಿಂದಲೇ ಗಳಿಸಬೇಕು. ಭೂಮಿಯಿಂದ, ಆನುವಂಶಿಕವಾಗಿ, ಬಡ್ಡಿಯಿಂದ ಮತ್ತು ಲಾಭದಿಂದ ಬರುವ ಆದಾಯಗಳು ನಿಲ್ಲಬೇಕು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಉತ್ಪಾದನೆ ಮತ್ತು ವಿತರಣೆಯನ್ನು ಇಡೀ ಸಮಾಜ ಒಂದಾಗಿ ಮಾಡಬೇಕು.

- ಯಾವುದೇ ದೇಶದ ಬೆಳವಣಿಗೆಯು ಆ ದೇಶದ ಜನರ ಶಿಕ್ಷಣದ ಮೇಲೆ ನಿಂತಿದೆ. ಶಿಕ್ಷಣವಿಲ್ಲದಿದ್ದರೆ ನಾವು ಕೇವಲ ಮಗುವಾಗಿಯೇ ಉಳಿದುಬಿಡುತ್ತೇವೆ.

- ಒಬ್ಬ ಮನುಷ್ಯ ಮತ್ತು ಇನ್ನೊಬ್ಬ ಮನುಷ್ಯನ ನಡುವಿನ ವ್ಯತ್ಯಾಸವು ಕೇವಲ ಹುಟ್ಟು ಮತ್ತು ಸಾಮಾಜಿಕ ಸ್ಥಾನ ಮಾನದಿಂದ ಮಾತ್ರವಲ್ಲದೇ, ಅವನ ಜ್ಞಾನದ ಇತಿ ಮಿತಿ ಮತ್ತು ಅವನು ನಡೆಸುತ್ತಿರುವ ಸಾಮಾನ್ಯ ಮತ್ತು ಪ್ರಾಯೋಗಿಕ ಜೀವನದಿಂದಲೂ ಬರುತ್ತದೆ. ಎಲ್ಲಾ ದೇಶಗಳಲ್ಲಿಯೂ ಜನರ ಬುದ್ಧಿವಂತಿಕೆಯ ಮಟ್ಟ ಒಂದೆ ಆಗಿರುತ್ತದೆ. ಒಂದು ನಾಗರಿಕ ಮತ್ತು ಅನಾಗರಿಕ ಸಮಾಜದ ಮಧ್ಯದ ವ್ಯತ್ಯಾಸವನ್ನು ನಾವು ಅವರು ಪಡೆದ ಬುದ್ಧಿವಂತಿಕೆ ಮತ್ತು ಪರಿಣಿತಿಯಿಂದ ತಿಳಿದುಕೊಳ್ಳಬಹುದು.

- ನಮ್ಮ ಕೆಳಸ್ಥರದ ಜೀವನಕ್ಕೆ ಕಾರಣ ತಿಳಿದೆ ಇದೆ. ಒಬ್ಬ ಇಂಗ್ಲೆಂಡ್ ಮನುಷ್ಯನ ಆದಾಯ ಭಾರತೀಯನಿಗಿಂತ 20 ಪಟ್ಟು ಹೆಚ್ಚಾಗಿದೆ. ಇಂಗ್ಲೆಂಡಿನ ಶೇಕಡಾ 95ರಷ್ಟು ಜನ ಅಕ್ಷರಸ್ಥರು. ಮೈಸೂರಿನಲ್ಲಿ ಶೇಕಡಾ 6ರಷ್ಟು ಮಾತ್ರ ಅಕ್ಷರಸ್ಥರು. ಮೈಸೂರಿನ 4 ಹುಡುಗರಲ್ಲಿ ಒಬ್ಬನೇ ಒಬ್ಬ ಹುಡುಗ ಅಕ್ಷರಸ್ಥನಾಗಿ ಬೆಳೆಯುತ್ತಾನೆ. ಹದಿನೆಂಟು ಹುಡುಗಿಯರಲ್ಲಿ ಒಬ್ಬಳು ಅಕ್ಷರ ಕಲಿಯುತ್ತಾಳೆ. ನಾವು ಶಿಕ್ಷಿತ ಜನರ ಪ್ರಮಾಣದಲ್ಲಿ

ಇಂಗ್ಲೆಂಡ್ ಅಥವಾ ಇತರೇ ಯಾವುದೇ ವಿದೇಶಗಳನ್ನು ಸಮೀಪಿಸಿದಲ್ಲಿ ನಮ್ಮ ದೇಶದ ಆದಾಯ ಮತ್ತು ಬೆಳವಣಿಗೆ ಜಾಸ್ತಿಯಾಗುತ್ತದೆ.

- ಈಗಿನ ಶಿಕ್ಷಣದ ಸ್ತರವು ಕೆಳಮಟ್ಟದಲ್ಲಿದೆ. ಈ ಶಿಕ್ಷಣವು ನಮಗೆ ಯಾವುದೇ ತರಬೇತಿ ನೀಡುವುದಿಲ್ಲ. ನಮ್ಮ ನಡುವಳಿಕೆಗಳಲ್ಲಿನ ತಪ್ಪುಗಳನ್ನು ತಿದ್ದುವುದಿಲ್ಲ. ಆಧುನಿಕ ಸ್ತರದ ಜೀವನಕ್ಕೆ ಹೊಂದುವ ಪ್ರಾಯೋಗಿಕ ಕೆಲಸಗಳನ್ನೂ ಹೇಳಿಕೊಡುವುದಿಲ್ಲ.

- ಏಕವ್ಯಕ್ತಿ ಆಡಳಿತಕ್ಕೆ ನಮ್ಮ ಜೀವನ ಹೊಂದಿಕೊಂಡಿದೆ. ಹೊಂದಾಣಿಕೆಯ ಗುಣ ನಮ್ಮಲ್ಲಿ ಬಹಳ ಕಡಿಮೆ ಇದೆ. ನಮ್ಮ ಸಂಘಟನೆಗಳು, ಸಮಿತಿಗಳು ಏಕೋ ಬೆಳೆಯುತ್ತಿಲ್ಲ.

- ನಾವು ನಮ್ಮ ಹಣೆಬರಹ, ಭಾವನೆ, ಜಾತಿ ಇತ್ಯಾದಿಗಳಿಂದ ಪ್ರಭಾವಿತರಾಗಿದ್ದೇವೆ. ಆದರೆ ಪಾಶ್ಚಿಮಾತ್ಯ ದೇಶಗಳ ಚಟುವಟಿಕೆಗಳು ಆರ್ಥಿಕ ಸ್ಥಿತಿಯ ಮೇಲೆ ನಿಂತಿವೆ. ಅವರು ಆರ್ಥಿಕ ಅಗತ್ಯಗಳಿಗೆ ತಕ್ಕಂತೆ ಯೋಚಿಸುತ್ತಾರೆ. ಅದರಂತೆಯೇ ನಡೆದುಕೊಳ್ಳುತ್ತಾರೆ. ನಾವು ವಿಜ್ಞಾನದ ವಿಚಾರವನ್ನು, ಶಿಸ್ತನ್ನು, ಮತ್ತು ಆಧುನಿಕ ನಾಗರೀಕತೆಯ ಅಂಶಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳದೆಯೇ ಬೆಳೆಯಲು ಸಾಧ್ಯವಿಲ್ಲ.

ಅಖಿಲ ಭಾರತ ಉತ್ಪಾದಕರ ಸಂಸ್ಥೆ ನಿಯೋಗದ ಅಧ್ಯಕ್ಷರಾಗಿ 1946ರಲ್ಲಿ ಟೋರಾಂಟೋಗೆ ಭೇಟಿ ನೀಡಿದ ಸಂದರ್ಭ

ಭಾರತ ರತ್ನ ಪುರಸ್ಕಾರ

ಭಾರತದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಭಾರತ ರತ್ನವನ್ನು ಸರ್ ಎಂ. ವಿ. ಯವರಿಗೆ ಕೊಡಬೇಕೆಂದು ತೀರ್ಮಾನಿಸಿದ ಪಂಡಿತ್ ಜವಾಹರ ಲಾಲ್ ನೆಹರೂ ನೇತೃತ್ವದ ಭಾರತ ಸರಕಾರ ಸರ್ ಎಂ. ವಿ. ಯವರಿಗೆ ಇದಕ್ಕೆ ಸಂಬಂಧಿಸಿದ ಸಂದೇಶವನ್ನು ಕಳಿಸಿತು. ಈ ಸಂದೇಶಕ್ಕೆ ಪಂಡಿತ್ ನೆಹರೂ ಅವರಿಗೆ ಎಂ. ವಿ. ಅವರು ಉತ್ತರಿಸಿದ್ದು ಹೀಗೆ:

"ಈ ಪ್ರಶಸ್ತಿಯನ್ನು ಕೊಟ್ಟ ತಕ್ಷಣ ನಾನು ನಿಮ್ಮ ಸರಕಾರವನ್ನು ಹೊಗಳುತ್ತೇನೆ ಎಂದು ನೀವಂದುಕೊಂಡರೆ ನಿಮಗೆ ನಿರಾಸೆಯಾಗಬಹುದು. ಏಕೆಂದರೆ ನಾನು ಸತ್ಯವನ್ನು ಹುಡುಕುವ ಮನುಷ್ಯ."

ಸರ್ ಎಂ. ವಿ. ಯವರ ಈ ನೇರತನವನ್ನು ಇಷ್ಟಪಟ್ಟ ಪಂಡಿತ್ ಜವಾಹರ ಲಾಲ್ ನೆಹರು, ಪ್ರಶಸ್ತಿಯನ್ನು ಸ್ವೀಕರಿಸುವಂತೆ ಮನವಿ ಮಾಡಿದರು. 1955, ಸೆಪ್ಟೆಂಬರ್ 7 ರಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸರ್ ಎಂ. ವಿ. ಯವರಿಗೆ ಭಾರತರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಭಾರತ ರತ್ನ ಪ್ರಶಸ್ತಿ ಪತ್ರದ ಸಂಕ್ಷಿಪ್ತ ಸಾರಾಂಶವು ಈ ಕೆಳಗೆ ನೀಡಲಾಗಿದೆ.

ಅಂದಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರಪ್ರಸಾದ್‌ಅವರು ಸರ್ ಎಂ. ವಿ. ರವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸುತ್ತಿರುವ ದೃಶ್ಯ

ಪ್ರಶಸ್ತಿ ಪ್ರದಾನ ಸಮಾರಂಭ, ರಾಷ್ಟ್ರಪತಿ ಭವನ, ನವದೆಹಲಿ, 7ನೇ ತಾರೀಖು ಬುಧವಾರ ಸೆಪ್ಟಂಬರ್ 1955 ಭಾರತ ರತ್ನ ಶ್ರೀ ಮೋಕ್ಷ ಗುಂಡಂ ವಿಶ್ವೇಶ್ವರಯ್ಯ.

ಸಪ್ಟೆಂಬರ್ 1861ರಲ್ಲಿ ಶ್ರೀ ಎಂ. ವಿಶ್ವೇಶ್ವರಯ್ಯನವರು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ ಒಂದು ಸಣ್ಣ ಗ್ರಾಮದಲ್ಲಿ ಜನಿಸಿದರು. ಪೂನಾದ ವಿಜ್ಞಾನ ಕಾಲೇಜಿನಲ್ಲಿ ತಮ್ಮ ಇಂಜಿನಿಯರಿಂಗ್ ಶಿಕ್ಷಣ ಮುಗಿಸಿದ ನಂತರ ಮುಂಬಯಿ ಸರಕಾರದ ಸಾರ್ವಜನಿಕ ಸೇವಾ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ನೇಮಿಸಲ್ಪಟ್ಟರು.



"ಭಾರತ ರತ್ನ" ಪದಕದ ಒಂದು ನೋಟ

ಶ್ರೀ ಎಂ. ವಿಶ್ವೇಶ್ವರಯ್ಯನವರ ವೃತ್ತಿ ಜೀವನವು ವಿಶಾಲವಾಗಿದ್ದು ಹಾಗೂ ಏರಿಳಿತಗಳಿಂದ ಕೂಡಿತ್ತು. ಕಳೆದ 70 ವರ್ಷಗಳಿಂದ ಇವರು ಒಂದಲ್ಲ ಒಂದು ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನೀರಾವರೀ ಇಂಜಿನಿಯರ್ ಆಗಿದ್ದಾಗ ಇವರು ಜಲಾಶಯಗಳು ಮತ್ತು ಅಣೆಕಟ್ಟುಗಳ ರಚನೆ ಮತ್ತು ನಿರ್ಮಾಣಕ್ಕೆ ಜವಾಬ್ದಾರರಾಗಿದ್ದರು. ಸಲಹಾ ಇಂಜಿನಿಯರ್ ಆಗಿ ಮತ್ತು ಸಲಹೆಗಾರನಾಗಿ ವಿಶ್ವೇಶ್ವರಯ್ಯನವರು ಬರೋಡಾ, ಇಂಧೋರ್, ಭೋಪಾಲ್ ಮತ್ತು ಕೊಲ್ಲಾಪುರ ಸೇರಿದಂತೆ ಭಾರತದ ಅನೇಕ ರಾಜ್ಯಗಳಲ್ಲಿ ಹಾಗೂ ಮುಂಬಯಿ, ಕರಾಚಿ ಮತ್ತು ನಾಗಪುರದಂತಹ ಮಹಾನಗರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

1909ರಲ್ಲಿ ಇವರು ಮೈಸೂರಿನ ಸರಕಾರಕ್ಕೆ ಪ್ರಧಾನ ಇಂಜಿನಿಯರ್ ಆಗಿ ನೇಮಕಗೊಂಡರು. 3 ವರ್ಷಗಳ ನಂತರ ಮೈಸೂರಿನ ದಿವಾನರಾದರು. ಈ ನೇಮಕಾತಿಯನ್ನು ಅವರು 6 ವರ್ಷಗಳವರೆಗೆ ಉತ್ತಮ ಸೇವೆಗಳ ಮೂಲಕ ನಡೆಸಿದರು. ಇವರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಬ್ಯಾಂಕ್, ಭದ್ರಾವತಿ ಕಬ್ಬಿಣ ಮತ್ತು ಸ್ಟೀಲ್ ಕಾರ್ಖಾನೆ ಮತ್ತು ಕೃಷ್ಣರಾಜಸಾಗರ ಅಣೆಕಟ್ಟಿನ ನಿರ್ಮಾಣಕ್ಕೆ ಕಾರಣಕರ್ತರಾಗಿದ್ದರು. ನಿವೃತ್ತಿಯ ನಂತರ ಏಳು ವರ್ಷಗಳ ಕಾಲ ಮೈಸೂರು ಕಬ್ಬಿಣ ಮತ್ತು ಸ್ಟೀಲ್ ಕಾರ್ಖಾನೆಯ ಆಡಳಿತ ಮಂಡಳಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಇವರು ಶ್ರೀ ಜಯಚಾಮರಾಜೇಂದ್ರ ಉದ್ಯೋಗ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು.

1941ರಲ್ಲಿ ಅಖಿಲ ಭಾರತ ಉತ್ಪಾದಕರ ಸಂಸ್ಥೆ ಪ್ರಾರಂಭವಾದಾಗಿನಿಂದಲೂ ಇವರು ಅದರ ಅಧ್ಯಕ್ಷರಾಗಿದ್ದರು. ಈ ಸಂಸ್ಥೆಯ ಗುರಿ, ಹಣ ಮತ್ತು ಬುದ್ಧಿಶಕ್ತಿಯನ್ನು ಕೈಗಾರಿಕಾ ಸೇವೆಗಳಿಗಾಗಿ ಸಜ್ಜುಪಡಿಸುವುದಾಗಿತ್ತು. ಭಾರತ ಮತ್ತು ಮುಂಬಯಿ ಸರಕಾರಗಳ ಬಹಳಷ್ಟು ಸಂಘ ಸಂಸ್ಥೆಗಳಲ್ಲಿ ಇವರು ಸೇವೆ ಸಲ್ಲಿಸಿದ್ದಾರೆ.

ಪ್ರಖ್ಯಾತ ಎಂಜಿನಿಯರ್, ಕೈಗಾರಿಕೋದ್ಯಮಿ ಮತ್ತು ನಿಪುಣರಾದಂತಹ ಶ್ರೀ ಎಂ. ವಿಶ್ವೇಶ್ವರಯ್ಯನವರು ತಮ್ಮ ಜೀವಿತಾವಧಿಯಲ್ಲಿ ದೇಶಕ್ಕೆ ಸೇವೆ ಸಲ್ಲಿಸಿದಷ್ಟು ಭಾರತದಲ್ಲಿ ಬೇರೆ ಯಾರೊಬ್ಬರೂ ಸೇವೆ ಸಲ್ಲಿಸಲಿಲ್ಲ. "Reconstruction of India" ಮತ್ತು "Planned Economy for India" ಈ ಪುಸ್ತಕಗಳ ಲೇಖಕ. ಭಾರತದ ಯೋಜಿತ ಬೆಳವಣಿಗೆಯ ಕಲ್ಪನೆಯ ರೂವಾರಿ.



ದೆಹಲಿಯ ಕನ್ನಡ ಸಂಘದ ಅಭಿನಂದನಾ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿಗಳಾದ ಡಾ. ಎಸ್. ರಾಧಾಕೃಷ್ಣ ಅವರೊಂದಿಗೆ

ವಿಶ್ವೇಶ್ವರಯ್ಯನವರು ಬಿ. ಎಂ. ಬಿರ್ಲಾ ಜತೆಗೆ ಕಲ್ಕತ್ತಾದಲ್ಲಿ ಹಿಂದುಸ್ತಾನ್ ಮೋಟಾರ್ಸ್‌ನ ಇಂಜಿನಿಯರಿಂಗ್ ವಿಭಾಗದ ಎರಕವನ್ನು ಪರೀಕ್ಷಿಸುತ್ತಿರುವುದು.

ಸರ್ ಎಂ. ವಿ. ಅವರ ಕೆಲವು ನುಡಿಮುತ್ತುಗಳು

- ಸಮೀಕ್ಷೆ ಮಾಡುವುದು, ಯೋಜನೆ ತಯಾರಿಸುವುದು, ಅವಶ್ಯವಾದ ಸಂಪನ್ಮೂಲಗಳನ್ನು ಸೂಚಿಸುವುದು, ಕೈಗೊಂಡಿರುವ ಕೆಲಸಕ್ಕಾಗಿ ಅವೆಲ್ಲವನ್ನೂ ಒಗ್ಗೂಡಿಸುವುದು, ಅನುಷ್ಠಾನಗೊಳಿಸುವುದು ಮತ್ತು ಫಲಿತಾಂಶವನ್ನು ಹೊರತೆಗೆಯುವುದು – ಇವು ಇಂಜಿನಿಯರ್ ಒಬ್ಬನ ಮುಖ್ಯ ಕೆಲಸಗಳು.
- ಉತ್ಪಾದಕ ಕೆಲಸಗಳು ಮತ್ತು ಕೈಗಾರಿಕೆಗಳು, ಶಿಕ್ಷಣದ ನಂತರ ದೇಶದ ಅಭಿವೃದ್ಧಿಗೆ ಇರುವ ಉತ್ತಮ ಮಾರ್ಗಗಳು.
- ಸೋದರಳಿಯನಿಗೆ ಸರ್. ಎಂ.ವಿ. ಅವರು ಒಮ್ಮೆ ಹಣದ ಸಹಾಯ ಮಾಡಿದ್ದರು. ಅದಕ್ಕೆ ಪ್ರತಿಯಾಗಿ ಆತ ಧನ್ಯವಾದಗಳನ್ನು ಅರ್ಪಿಸಿದಾಗ ವಿಶ್ವೇಶ್ವರಯ್ಯನವರು ಹೀಗೆ ಪತ್ರವನ್ನು ಬರೆದಿದ್ದರು: ನೀನು ನನ್ನಿಂದ ಪಡೆದ ಸಹಾಯಕ್ಕೆ ಕೃತಜ್ಞತೆ ತೋರಿಸುವ ಉತ್ತಮ ಮಾರ್ಗವೆಂದರೆ ನಿನ್ನ ಪ್ರಾಮಾಣಿಕತೆ, ಸಾಮರ್ಥ್ಯ, ವ್ಯಕ್ತಿತ್ವ ಮತ್ತು ಐಕ್ಯತೆಯನ್ನು ಯಾವಾಗಲೂ ಕಾಪಾಡಿಕೊಳ್ಳುವುದು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ದಿನ ಕಳೆದಂತೆ ಮತ್ತು ಪರಿಸ್ಥಿತಿ ಬದಲಾದಂತೆ ಸಾಮಾನ್ಯವಾಗಿ ಜನ ಬದಲಾಗುತ್ತಾರೆ.
- ಮೈಸೂರು ರಾಜ್ಯದ ಮಂತ್ರಿಯೊಬ್ಬರು ಸರ್ ಎಂ.ವಿ.ಯವರನ್ನು ಭೇಟಿಯಾಗಲು ಸಮಯ ನಿಗದಿಮಾಡಿದರು. ಆದರೆ ಅವರಿಗೆ ಆ ದಿನ ಬರಲಾಗಲಿಲ್ಲ. ಮರುದಿನ ಅವರು ಎಂ. ವಿ. ಯವರನ್ನು ಭೇಟಿ ಆಗಲು ಬಂದಿದ್ದಾಗ ಸರ್ ಎಂ. ವಿ. ಹೇಳಿದ್ದು ಹೀಗೆ: "ನೀವು ಎರಡು ತಪ್ಪು ಮಾಡಿದ್ದೀರಿ. ಮೊದಲನೆಯದಾಗಿ ಬರಬೇಕಾದಾಗ ಬರಲಿಲ್ಲ. ಎರಡನೆಯದಾಗಿ ಬರಬಾರದ ಸಮಯದಲ್ಲಿ ಬಂದಿದ್ದೀರಿ."
- ಯಾವುದೇ ಸಮಸ್ಯೆ ಇರಲಿ, ನಾವು ಎದೆಗುಂದಬಾರದು. ಜೀವನದಲ್ಲಿ ಸವಾಲುಗಳು ಎದುರಾಗುವುದು ಸಹಜ. ಸವಾಲುಗಳು ಅವಕಾಶಗಳಿದ್ದಂತೆ. ಕೇವಲ ಸುಖವನ್ನು ಬಯಸುವವರು ಮತ್ತು ನೋವಿನಿಂದ ತಪ್ಪಿಸಿಕೊಳ್ಳುವವರು ಯಶಸ್ಸಿನ ಜೀವನ ನಡೆಸುವುದು ಕಷ್ಟ.
- ನನಗೆ ಕೆಲವೊಮ್ಮೆ ಜೀವನವು ಕುತೂಹಲಕಾರಿ ಎನಿಸುತ್ತದೆ. ನಿಜ ಏನೆಂದರೆ, ನಮ್ಮ ಜನರಿಗೆ ಕಠಿಣ ಶ್ರಮ ಪಡುವುದು ಇಷ್ಟವಿಲ್ಲ. ಆದರೆ ದೇಶವನ್ನು ಮತ್ತು ಮನುಷ್ಯನನ್ನು ಆರೋಗ್ಯಕರವಾಗಿ ಇಡುವುದು ಕೆಲಸ ಮಾತ್ರ.

- ತಾನು ಗಳಿಸುವುದಕ್ಕಿಂತ ಹೆಚ್ಚು ಖರ್ಚು ಮಾಡುವವನು ಮೂರ್ಖ.
- ಕಬ್ಬಿಣದ ಹಾಗೆ ತುಕ್ಕು ಹಿಡಿಯುವುದಕ್ಕಿಂತ, ಸ್ಟೀಲಿನ ರೀತಿಯಲ್ಲಿ ಸೇವೆ ಸಲ್ಲಿಸುವುದು ಉತ್ತಮ.
- ವಿಶ್ರಾಂತಿ ತೆಗೆದುಕೊಳ್ಳಿ ಎಂದು ಸರ್ ಎಂ. ವಿ. ಯವರಿಗೆ ಸಲಹೆ ನೀಡಿದಾಗ ಅವರು ಹೇಳಿದ್ದು ಹೀಗೆ: "ತುಕ್ಕು ಹಿಡಿದು ಸಾಯುವುದು ನನಗೆ ಇಷ್ಟವಿಲ್ಲ. ಕೆಲಸ ಮಾಡಿ ಮಾಡಿ ದಹಿಸಿ ಹೋಗುವುದು ನನಗೆ ಇಷ್ಟ."
- ಅದೃಷ್ಟ ಎನ್ನುವುದು ದೇವರ ಹತ್ತಿರವಿಲ್ಲ. ಅದು ಜಡವಾದ ವಸ್ತುವೂ ಅಲ್ಲ. ಅದು ನಮ್ಮ ಹತ್ತಿರವೇ ಇದೆ ಮತ್ತು ಕ್ರಿಯಾಶೀಲವಾಗಿದೆ. ಅದನ್ನು ಹೇಗೆ ಬೇಕೋ ಹಾಗೆ ಬದಲಾಯಿಸಿಕೊಳ್ಳುವುದು ನಮ್ಮ ಹತ್ತಿರವೇ ಇದೆ.
- ಕೈಗಾರಿಕೀಕರಣಗೊಳಿಸು ಅಥವಾ ನಾಶವಾಗು.
- ನೀವು ಬಿಡಿಭಾಗಗಳನ್ನು ಚೆನ್ನಾಗಿ ನೋಡಿಕೊಳ್ಳಿ. ಇಡೀ ಯಂತ್ರವು ತನ್ನನ್ನು ತಾನೇ ನೋಡಿಕೊಳ್ಳುತ್ತದೆ.
- ಬಡತನವನ್ನು ಇತರ ರೋಗಗಳಂತೆ ಗುಣಪಡಿಸಲು ಸಾಧ್ಯ. ಪರಾವಲಂಬನೆ, ಸಾಮರ್ಥ್ಯ ಇಲ್ಲದೇ ಇರುವುದು, ಸೋಮಾರಿತನ ಮತ್ತು ಕಡೆಗಣಿಸುವಿಕೆ ಬಡತನಕ್ಕೆ ನಿಜವಾದ ಕಾರಣಗಳು.
- ವಿಜ್ಞಾನವು ಬೆಳೆಯುತ್ತಿರುವ ಶಕ್ತಿ. ಇದು ನಮಗೆ ಹೊಸ ಜಗತ್ತನ್ನು ಸೃಷ್ಟಿ ಮಾಡುತ್ತಿದೆ. ಇದರ ಸೇವೆಯನ್ನು ನಾವು ಪಡೆದುಕೊಳ್ಳಬೇಕು. ಒಂದು ವೇಳೆ ವಿಜ್ಞಾನವನ್ನು ನಾವು ಕಡೆಗಣಿಸಿದರೆ ಭಾರೀ ಅನಾಹುತವಾಗುತ್ತದೆ.
- ತಪ್ಪುಗಳನ್ನು ನಿಸರ್ಗವು ಎಂದಿಗೂ ಕ್ಷಮಿಸುವುದಿಲ್ಲ.
- ಕೆಲಸದಿಂದ ಮನುಷ್ಯ ಎಂದಿಗೂ ಸಾಯುವುದಿಲ್ಲ. ಚಿಂತೆ, ಅಶಿಸ್ತು ಮತ್ತು ಅನಿರ್ದಿಷ್ಟತೆ ಇವು ಮನುಷ್ಯನನ್ನು ಸಾಯಿಸುತ್ತವೆ.
- 'ಯಶಸ್ಸು' ನೀವು ಮಾಡುವ ಕೆಲಸದ ಮೇಲೆ ಅವಲಂಬಿತವಾಗಿದೆ. ಕೇವಲ ಅನಿಸಿಕೆ ಅಥವಾ ಆಲೋಚನೆಯಿಂದ ಯಶಸ್ಸು ಸಿಗುವುದಿಲ್ಲ. ಕೆಲಸ ಮಾಡಲೇಬೇಕು.
- ಒಂದು ಜಾಗವನ್ನು ಸ್ವಚ್ಛವಾಗಿಡುವುದು ಮಾತ್ರ ನಿಮ್ಮ ಕೆಲಸ ಎಂದಾದಾಗ, ಆ ಜಾಗವನ್ನು ಜಗತ್ತಿನ ಅತಿ ಸ್ವಚ್ಛ ಜಾಗವನ್ನಾಗಿ ಮಾಡುವುದು ನಿಮ್ಮ ಜವಾಬ್ದಾರಿ ಆಗಿರುತ್ತದೆ.

- ಇವರಿಗೆ ನಾಲ್ಕು ಜನರ ಊಟವನ್ನು ಏಕ ಕಾಲಕ್ಕೆ ಮಾಡುವ ಶಕ್ತಿ ಇದೆ ಎಂದು ವ್ಯಕ್ತಿ ಒಬ್ಬನನ್ನು ಸರ್ ಎಂ. ವಿ. ಯವರಿಗೆ ಪರಿಚಯಿಸಿದರು. ಆಗ ಸರ್ ಎಂ. ವಿ. ಯವರು ಕೇಳಿದ್ದು ಹೀಗೆ 'ಇವರು ನಾಲ್ಕು ಜನರ ಕೆಲಸವನ್ನು ಏಕಕಾಲಕ್ಕೆ ಮಾಡಬಲ್ಲರಾ?'
- ನೀವು ನಿಮಗೆ ಅಗತ್ಯವಾಗಿರದ ವಸ್ತುವನ್ನು ಇಂದು ಕೊಂಡುಕೊಂಡರೆ, ನಿಮಗೆ ಕೊಂಡುಕೊಳ್ಳಲು ಸಾಧ್ಯವಾಗದ ವಸ್ತುವಿನ ಅವಶ್ಯಕತೆ ಮುಂದೊಂದು ದಿನ ಬರುತ್ತದೆ.
- ನಂಜನಗೂಡು ದೇವಾಲಯದ ಸುತ್ತಮುತ್ತಲಿನ ಹೊಲಸನ್ನು ನೋಡಿದಾಗ ಸರ್ ಎಂ. ವಿ. ಯವರು ಹೀಗೆ ಹೇಳಿದರು: ದೇವರ ಜಾಗ ಸ್ವಚ್ಛವಾಗಿರಬೇಕು. ಇಲ್ಲವೆಂದರೆ ದೇವರು ಓಡಿ ಹೋಗುತ್ತಾನೆ.

ಸರ್ ಎಂ. ವಿ. ಅವರ ಬಳಿಯಲ್ಲಿ ಸದಾ ಇದ್ದಂತಹ
ಕಿಸೆಗಡಿಯಾರ





ಸರ್ ಎಂ. ವಿ. ಯವರು ಉಪಯೋಗಿಸುತ್ತಿದ್ದಂತಹ
ಚಿನ್ನದ ಅಂಗಿಯಗುಂಡಿ

ಪ್ರಶಸ್ತಿಗಳು ಮತ್ತು ಸನ್ಮಾನ

1883 James Berkeley Gold Medal for outstanding perfomance.

1887 Associate Member of Institute of Civil Engineers (London)

1904 Fellow, Bombay University.

Hon. Member, Institution of Civil Engineers, London

1906 Kaiser - e - Hind in recognition of services by British Government

1911 Companion of Indian Empire (C.I.E.) by British Government.

1915 Knight Commander of Indian Empire (K.C.I.E.) by British Government.

1921 D.Sc., Engineering, Calcutta University.

1931 Doctor of Laws, Bombay University.

1937 D. Litt., Benaras Hindu University.

1944 Hon. Life Member, The Institution of Engineers (India), Calcutta.

D.Sc., University of Allahabad and Patna University.

1948 Doctorate, Mysore University.

1952 Hon. Roll of Council of Institution of Civil Engineers, London.

1953 D. Litt., Andhra University.

Hon. Fellowship, Indian Institute of Town Planners

1955 Bharat Ratna

1959 Durga Prasad Khaitan Memorial Gold Medal by the Royal Asiatic Society.

Fellowship, Indian Institute of Science, Bangalore.

99ನೇ ಹುಟ್ಟುಹಬ್ಬದಂದು ಮೈಸೂರುನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಸರ್ ಎಂ. ವಿ. ಯವರನ್ನು ಅಭಿನಂದಿಸುತ್ತಿರುವುದು. (1959)

ವಿಶ್ವೇಶ್ವರಯ್ಯನವರ ಪ್ರಕಟಣೆಗಳು

- **Speeches of Sir M. Visvesvaraya** (Dewan of Mysore) - (1910-11 to 1916-17), Printed at the Government Press, 1917
- **Reconstructing India,** Published by P. S. King & Son Ltd., Orchard House, Westminster, London, 1920
- **Planned Economy for India,** Printed at the Bangalore Press, Lake View, Mysore Road, Bangalore, 1934
- **A.I.M.O. – Rapid Development of Industries** (Report of the delegation which visited the industrially developed countries of the West) (1946-47), 1947
- **Memoirs of My Working Life,** Printed at the Caxton Press of G. Claridge & Co. Ltd., Frere Road, Fort, Bombay, 1951
- **Sayings - Wise or Witty**, Compiled by Sir M. V., Printed at the Bangalore Press, Bangalore, 1957
- **A Brief Memoir of my Complete Working Life**, Printed at the Government Press, Bangalore, 1959

Pamphlets by Sir M. Visvesvaraya

- Proposals for an Automobile Factory in Bombay - April 1936, Reprinted in Government Press, Bangalore, 1941
- Proposed Occupational Institute in Bangalore - Preliminary Note by Sir M. Visvesvaraya, Printed in Government Press, Bangalore, September, 1942
- Village Industries Handbook - Part I
- Village Industries Handbook - Part II, 1950
- Rural Industrialization Scheme in Mysore: Proposed extension to entire State, 1953
- Rural Industrialization Scheme in Mysore, Aug, 1955
- Rural Industrialization Scheme in Mysore, Aug, 1956
- Rural Industrialization Scheme in Mysore, April, 1958

Other Pamphlets by Sir M. Visvesvaraya

- Rural Industrialization in India-An Outline of a Scheme, 1931
- Unemployment in India-Its Causes and Cure, September,1932
- Nation Building - A Five Year Plan for the Provinces, 1937
- District Development Scheme (Economic progress by forced marches), 1939
- Automobile Industry in Bombay - Latest Phase of the Project. Printed in Times of India Press, Bombay, 1940
- The Indian Automobile Co. Ltd. - An Explanatory Note, Printed at the Government Press, Bangalore, April, 1941
- Indian Automobile Factory Scheme - Government of India's Obstructive Attitude - by Sir M. Visvesvaraya, Printed in Caxton Press, Claridge & Co., Bombay, February, 1942
- Pamphlets Published through The All-India Manufacturers' Organization, Bombay, as President of the Organization
- Prosperity through Industry, September, 1942
- Iron and Steel Industry in India, A.I.M.O.Monograph No.2, June, 1943
- District Industrialization Drive (Measures for rapid promotion of industries and industrial pursuits in rural areas), December, 1943
- Reconstruction in Post-war India. A Plan of Development all round, September, 1944
- Development of Heavy Industries in Provinces - Proposals by A.I.M.O., 1945
- Village Industrialization (A scheme for developing industries suitably grouping villages), April, 1945
- Rapid Development of Indian Industries (Report of the delegation which visited the industrially developed countries of the West, 1946 - 47), June, 1947
- Industrialization scheme for Rural Areas, May, 1949

Government Committee Reports

- Technical and Industrial Education Committee appointed by the Government of Bombay with Sir M. Visvesvaraya as Chairman, 1921
- City of Bombay - Municipal Retrenchment and Reform-Retrenchment Adviser Sir M. Visvesvaraya - Preliminary Report, 1924
- City of Bombay-Municipal Retrenchment and Reform. Final Report by Sir M. Visvesvaraya, 1925
- Indian Economic Enquiry Committee appointed by the Government of India with Sir M. Visvesvaraya. Chairman's Report, 1925
- Karachi Municipal Finances and Administration - A Survey and Recommendations by Sir M. Visvesvaraya, 1926
- City of Bombay - Corporation Resolution on Final Report, 1928
- Report on the Lloyd Barrage & Canals Project in Sind by Sir M. Visvesvaraya, K.C.I.E., M.I.C.E., and Nawab Ali Nawazjung Bahadur, F.C.H.,appointed by the Government of Bombay,1929
- Disturbances in Bangalore City (July 1928) Report of the Committee of Enquiry appointed by the Government of His Highness the Maharaja of Mysore, Vol. I. Report, 1928-29
- Report of the Committee appointed by the Academic Council, University of Bombay - Scheme for a University Department of Chemical Technology at Matunga (Bombay), 1930
- Report of the Irrigation Inquiry Committee appointed by the Government of Bombay with Sir M. Visvesvaraya as Chairman, 1938
- Report of the Board of Engineers appointed by the Governments of Madras and Hyderabad for settlement of certain disputed points in the design and construction of the Tungabhadra Dam with Sir M. Visvesvaraya as Chairman, October, 1947

- Government of India (Railway Board) Committee to select a proper site for a new railway bridge across the Ganges in Bihar, Report, 1952
- Village Industries Handbook - Industrialization Scheme for Rural Areas (Small- scale or Minor industries), October, 1949
- Industrialization Scheme in Two Parts, 1949
- A Comprehensive Administrative System for Industries in the Indian Union, March, 1953
- Nation Building Plan for India, April, 1957

ಪಂಚಭೂತಗಳಲ್ಲಿ ಲೀನ

14ನೇ ಏಪ್ರಿಲ್ 1962 ಬೆಳಗಿನ ಜಾವ 6.15ಕ್ಕೆ ಬೆಂಗಳೂರಿನ ಕಬ್ಬನ್ ರೋಡ್‌ನಲ್ಲಿರುವ ತಮ್ಮ ನಿವಾಸದಲ್ಲಿ ಸರ್ ಎಂ. ವಿ. ಯವರು ಕೊನೆಯುಸಿರೆಳೆದರು.

ಅವರ ನಿವಾಸದಿಂದ ಸ್ವಲ್ಪವೇ ದೂರದಲ್ಲಿರುವ ಆಕಾಶವಾಣಿಯು ಈ ದು:ಖಭರಿತ ಸುದ್ದಿಯನ್ನು ಮೊದಲು ಸಂಗ್ರಹಿಸಿ, ಮುಖ್ಯಾಂಶಗಳಲ್ಲಿ ಇದನ್ನು ತಕ್ಷಣ ಪ್ರಕಟಿಸಿತು. ತಕ್ಷಣಕ್ಕೆ ಎಲ್ಲರೂ ಕಾರ್ಯಪ್ರವೃತ್ತರಾದರು. ಆಗಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಾಸಾದ್‌ರವರು ರಾಜ್ಯ ಸರಕಾರದ ಜೊತೆ ಮಾತನಾಡಿ ಸರ್ ಎಂ. ವಿ. ಯವರ ಮರಣಾರ್ಥ ರಾಜ್ಯ ಶೋಕಾಚರಣೆಯನ್ನು ಮಾಡಬೇಕೆಂದು ಹೇಳಿದರು. ಸರ್ ಎಂ. ವಿ. ಯವರು ಹುಟ್ಟಿದ ರಾಜ್ಯವು ಅವರನ್ನು ಗೌರವಿಸಿದಷ್ಟೇ ಭಾರತ ದೇಶವೂ ಅವರನ್ನು ಗೌರವಿಸುತ್ತಿತ್ತು. ಯಾವುದೇ ಆಡಂಬರ, ಸದ್ದುಗದ್ದಲಗಳಿಲ್ಲದೇ ಕೊನೆಯ ವಿಧಿ ವಿಧಾನಗಳನ್ನು ಮುದ್ದೇನಹಳ್ಳಿ ಯಲ್ಲಿ ಮಾಡಬೇಕೆಂಬ ಸರ್ ಎಂ. ವಿ. ಯವರ ಆಸೆಯಾಗಿತ್ತು. ಈ ಅವರ ಆಸೆಯನ್ನು ಅವರ ಅಳಿಯ ಪ್ರಧಾನ ಕಾರ್ಯದರ್ಶಿಗಳಿಗೆ ತಿಳಿಸಿದರು. ಆದರೆ ಅಷ್ಟರಲ್ಲಾಗಲೇ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳೆರಡೂ ಅವರ ಅಂತಿಮ ಸಂಸ್ಕಾರಕ್ಕೆ ಎಲ್ಲ ಏರ್ಪಾಡುಗಳನ್ನು ಮಾಡಿ ಕೊಂಡಿದ್ದ ಕಾರಣ ಸರ್ ಎಂ. ವಿ. ಯವರ ಅಳಿಯ ಮತ್ತು ಕಾರ್ಯದರ್ಶಿಗಳಿಬ್ಬರೂ ಅಸಹಾಯಕ ರಾಗಿದ್ದರು.

ಅವರ ದೇಹವನ್ನು ಅಲಂಕರಿಸಿದ ಟ್ರಕ್‌ನಲ್ಲಿಟ್ಟರು. ಮೋಟಾರು ಕಾರುಗಳ ಮೆರವಣಿಗೆಯು ಸಂಜೆ 4 ಗಂಟೆಗೆ ಅವರ ಮನೆ ಬಿಟ್ಟು ಮುದ್ದೇನಹಳ್ಳಿಯನ್ನು ತಲುಪಿತು. 90 ವರ್ಷಗಳಿಂದ ಸರ್ ಎಂ. ವಿ. ಯವರು ಬಹಳಷ್ಟು ಸಲ ಓಡಾಡಿದ ದಾರಿಯು ಈಗ ಶೋಕಿಸುವ ಜನರ ಗುಂಪಿನಿಂದ ಕೂಡಿತ್ತು. ಬಾವಿಯ ಬದಿಯಲ್ಲಿ ಬಂಗಲೆಯಿಂದ 100 ಯಾರ್ಡ್‌ನಷ್ಟು ದೂರದಲ್ಲಿ ಅವರ ಚಿತೆಗೆ ವ್ಯವಸ್ಥೆ ಮಾಡಲಾಗಿತ್ತು. ವೈದಿಕ ಕೆಲಸಗಳೆಲ್ಲವೂ ರಾತ್ರಿ 8.55ಕ್ಕೆ ಮುಗಿಯಿತು. ಸರ್ ಎಂ. ವಿ. ಯವರಿಗೆ ಸರಕಾರಿ ಗೌರವಗಳನ್ನು ನೀಡಲಾಯಿತು. ಕೊನೆಯದಾಗಿ ಕಹಳೆಯು ಶಬ್ದ ಮಾಡಿತು. ಈ ಶಬ್ದವು ಆ ಪ್ರದೇಶದಲ್ಲಿ ಪ್ರತಿಧ್ವನಿಸಿತು. ಇದು ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದವರು ಮರೆಯಲಾಗದಂತಹ ಸಂದರ್ಭವಾಗಿತ್ತು. ಸರಕಾರಿ ನೌಕರರು, ಸರಕಾರಿ ಅಧಿಕಾರಿಗಳು, ಅಭಿಮಾನಿಗಳು ಮತ್ತು ಸಂಬಂಧಿಗಳ ಸಮ್ಮುಖದಲ್ಲಿ ರಾತ್ರಿ 9 ಗಂಟೆಗೆ ಅವರ ಅಳಿಯ ಚಿತೆಗೆ ಬೆಂಕಿಕೊಟ್ಟರು.

ಅಗರಬತ್ತಿ ತಯಾರಕರು ತಮ್ಮ ಗೌರವವನ್ನು ಒಂದು ಗಾಡಿ ತುಂಬಾ ಅಗರಬತ್ತಿ ನೀಡುವುದರ ಮೂಲಕ ತೋರಿಸಿಕೊಂಡರು. ಇದರಿಂದಾಗಿ ಅಲ್ಲಿದ್ದ ಪ್ರಖರವಾದ

ವಾಸನೆಯು ಸುವಾಸನೆಯಾಗಿ ಪರಿವರ್ತನೆಗೊಂಡಿತು. ತುಂಬಾ ಕಡಿಮೆ ಸಮಯದಲ್ಲಿ ಎಲ್ಲಾ ಕೆಲಸವು ಮುಗಿದು ಹೋಯಿತು. ಅವರ ಗ್ರಾಮದಲ್ಲಿನ ಅವರ ನೆನಪಿನ ಪರಿಮಳವನ್ನು ಗಾಳಿಯೊಂದಿಗಿನ ಸುಗಂಧವು ಇನ್ನೂ ಹೆಚ್ಚಾಗಿಸಿತು. ಚಂದ್ರ ಬೆಳಗಿದ ಆಕಾಶವು ಇವರ ಚಿತೆಯಿಂದಾಗಿ ಇನ್ನೂ ಪ್ರಕಾಶಮಾನವಾಯಿತು.

ವಿಶ್ವೇಶ್ವರಯ್ಯನವರ ಸಮಾಧಿ







Government of Mysore

The Death of Bharatha Ratna
Sri Mokshagundam Visvesvaraya

We deeply regret to announce the death of Sir Mokshagundam Visvesvaraya the former Dewan of Mysore State at 6-15 a.m. this morning at his residence in Cubbon Road.

The funeral rites will take place at Muddenahalli near Chikballapur.

The body will be taken in a procession in the following route :

The cortege will leave the deceased's residence at 4 p.m. march in front of the Vidhana Soudha, Mysore Bank Circle, Kempegowda Circle, Ananda Rao Circle and pass by the Congress Bhavan, Race Course Road, Ringwood Circle and in front of Balabrooie reaching Muddenahalli via Sankey Road and Bellary Road Tollgate.

Sd/-
R.J. REBELLO
Chief Secretary
Govt. of Mysore

Date : 14-4-1962

ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರ ಉಯಿಲು:

"ನನ್ನ ಸಾವು ಬೆಂಗಳೂರು ನಗರದಲ್ಲಿಯೇ ಸಂಭವಿಸಬೇಕು. ನನ್ನ ದೇಹವನ್ನು ತಕ್ಷಣ ಮೋಟಾರು ಕಾರಿನಲ್ಲಿ ನಂದಿಬೆಟ್ಟದ ಹತ್ತಿರ ಇರುವ ನನ್ನ ಊರಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅಂತ್ಯ ಸಂಸ್ಕಾರ ಮಾಡಬೇಕು ಎನ್ನುವುದು ಆ ಸಮಯದಲ್ಲಿ ನನ್ನ ಸುತ್ತಮುತ್ತ ಇರುವುವವರಲ್ಲಿ ನನ್ನ ಕೋರಿಕೆ. ಈ ಸಮಾರಂಭವು ಸರಳ, ವಿನೀತ ಮತ್ತು ನಿಷ್ಕಪಟವಾಗಿರಬೇಕು. ಪ್ರಾರಂಭದ ದಿನಗಳ ಶೋಕ ಒಂದು ರೂಪು ಕೊಡುತ್ತದೆ. ದುಖಃವನ್ನು ಹಂಚಿಕೊಳ್ಳಲು ಸಮಯ ಮತ್ತು ಅಂತ್ಯದ ಭಾವನೆಯನ್ನು ತಂದುಕೊಡುತ್ತದೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇ ಬೇಕು."

ಸರ್ ಎಂ. ವಿ. ಯವರು ಉದ್ಯಮಿಗಳ, ಪ್ರಗತಿಪರ ವ್ಯಕ್ತಿಗಳ ಮತ್ತು ಪ್ರಮುಖವಾಗಿ ಎಲ್ಲಾ ವರ್ಗದ ಎಂಜಿನಿಯರುಗಳ ಮನಸ್ಸಿನಲ್ಲಿ ಬದುಕಿದ್ದಾರೆ ಮತ್ತು ಇದರಿಂದಾಗಿ ಅವರು ಅಜರಾಮರವಾಗಿದ್ದಾರೆ.

ವಿಶ್ವೇಶ್ವರಯ್ಯನವರ ಬದುಕಿನ ಪ್ರಮುಖ ವರ್ಷಗಳು

1860	Born as the second son of Shri Srinivasa Shastry on the 15th September at Muddenahalli, Chikkaballapur Taluk, Kolar Dist., Karnataka State.
1871-1874	Early education in Chikkaballapur
1875-1881	Demise of Shri Srinivasa Shastry (1875) Joined Wesley Mission High School, Bangalore Joined Central College, Bangalore and completed B.A., (Madras University) securing First Class (1881).
1881-1883	Joined Science College in Poona (presently Government College of Engineering) to study engineering. Ranked First in L.C.E., awarded by the College in November 1883 (equivalent to Bachelor's Degree in Civil Engineering) Awarded "James Ber keley Gold Medal" for outstanding performance.
	Married Ms. Saraswathi, daughter of Rama Chandra Sastry of Chikkaballapur (1882)
1884	Appointed Assistant Engineer, Bombay Public Works Department, joined duty in March, posted Toasik and Khandesh.
1885	Acting Executive Engineer, passed Departmental examination, First Grade Assistant Engineer (October)
1887	Associate Member of Institute of Civil Engineers (London) (November)
1888	Demise of Mrs. Saraswathi (Wife) along with new born baby
1889	Second Marriage with Ms. Savithri

1890	Demise of Mrs. Savithri (Wife), along with new born baby
1891	Third marriage. But seperated soon after, for unknown reasons, ensured to send her money for her livelihood till death, lived alone thereafter. Founded Deccan Club, Poona.
1894-1895	Sukkur Drainage and Water Works
1896	Posted to Surat Dist.
1897	Back to Poona as Assistant to Chief Engineer
1898	Visits Japan while in Bombay Government Service
1899	Executive Engineer, Poona Irrigation Dist., (water works for Poona)
	Memorandum for the Irrigation Commission Block System of Irrigation.
1901	Acting Sanitary Engineer to Government, Sewerage disposal for Poona
1901-1903	Automatic Sluice gates patented
1904	Attends Irrigation Conference
	Nominated Fellow of Bombay University
	Permanent appointment as Sanitary Engineer to Bombay Government
	Hon. Membership of Institution of Civil Engineers, London
1905	Special Officer for Water Supply in addition to normal duties.
1906	Sewerage disposal and provision of drinking water to Aden, similar works at Kolhapur.

	Kaiser - e - Hind in recongnition of his services by British Government
1907	Additional charge covering Divisions of Three Superintending Engineers
	Drinking Water scheme to Dharwar and Bijapur. Appointment as Member, Bombay Health Committee. Member, College of Science Review Committee.
	Gets invitation from two States as Chief Engineer
	Requests for retirement from service before due time. Retires from Bombay Government Service.
1908-1909	Visits Italy, U.K., U.S.A., Canada, Sweden, Russia on leave preparatory to retirement from Bombay Government service.
1909	Special Consulting Engineer, Hyderabad (April) Chief Engineer, Mysore (November 15th)
	Recommendation for extension of Railways.
	Plan for Kannambadi Dam (later Krishnaraja Sagar)
1911	President, Economic Conference (June), C.I.E. (Companion of Indian Empire) by British Government
1912	Appointment as Dewan of Mysore (November, 12) Suggestions for claiming of Assigned Tract Revenue, Bangalore
1913	Started Bank of Mysore (October)
	Visit of Lord Hardinge - The Mysore Treaty
	Reforms of the Representative Assembly to have Council, Mahila Seva Samaj, Bangalore

1914	Malnad Improvement Scheme
	(Beginning of First world war)
	Mechanical Engineering School
1915	Public Libraries - Bangalore & Mysore Kannada Sahitya Parishad, Bangalore
	Knight Commander of Indian Empire (K.C.I.E.) by British Government
1916	Engineering College, Bangalore
	Scheme for non-Brahmin and backward students
	Mysore Chamber of Commerce
	Modern Hotels at Bangalore and Mysore, Mysore University
	Large Printing presses
	Civil and Social Progress Association
	Starting several industries - Soap, Sandal Oil, Metal, Tanning of leather
1917-1918	Member of Committee of Indian Princes and Ministers, Bikaner
1918	Scheme for Iron Works, Bhadravathy Developing Harbour at Bhatkal
	Harvesting Hydroelectric Power at Jog, near Bhadravathi
1919	Retires as Dewan of Mysore (10th June)
1919 - 1920	Tours Japan, Canada, U.S.A. & U.K.

	Offered seat in the Council of the Secretary of State for India. Publishes the book 'Reconstructing India', by P.S. King & Son Ltd., London
1921	D.Sc., Engineering, Calcutta University
	Chairman, Bombay Technical and Industrial Education Committee.
1922	President, Political Conference of All - Parties' Representatives in Bombay
	Member, Committee for Construction of Capital, New Delhi
	Invitation from Hyderabad for Technical Services.
1923	President, Indian Science Congress (Lucknow)
	Chairman, Bhadravathy Iron Works (March 23, 1923 to Sept. 29, 1929)
1924	Proposal to start Occupational Institute, Bangalore. President, Indian Economic Conference (Bombay) Member, Retrenchment and Reforms, Bombay and Karachi Corporations.
1925	Chairman, Indian Economic Enquiry Committee New scheme for supply of drinking water to Bangalore
1926	Member, Back Bay Enquiry Committee, Bombay
	Member, Karachi Municipal Finance Administration Committee
1926-1927	Tour of Europe and America (to study manufacture of Iron and Steel)
	Director, Tata Iron and Steel Board (1927-1955)

1929	Chairman, Committee of Enquiry into Bangalore Disturbances.
	President, South Indian States People's Conference (Trivandrum)
	Member, Sukkur Barrage Works Committee
	Established]ayachamarajendra Occupational Institute, Bangalore.
	Member Fact Finding Report on 'Lloyd Barrage' across Sind River.
1930	Improvement of Hyderabad City.
	Member, Bombay University "Committee for promoting Chemical Industries".
1931	Doctor of Laws, Bombay University.
	Krishnarajasagar (K.R.S) Dam works Completed.
1932	Publication of "Unemployment in India - Its Causes and Cure", Bangalore Press, Bangalore.
1934	Publication of "Planned Economy for India", by Bangalore Press, Bangalore.
1935	Journey to Europe, U. S .A., to collect information on Automobile Industry.
1937	D. Litt., Benaras Hindu University
	Chairman, Bombay Irrigation Enquiry Committee
	Visit to Orissa (Mahanadi Delta) to advise on effective flood control measures
	Publication of 'Nation Building - A Five Year Plan for the Provinces', Bangalore Press, Bangalore.

1938	President, Court of the Indian Institute of Science, Bangalore (1938 - 1947)
1939	Scheme for an aircraft factory
	Orissa Flood Relief Report
	Water supply scheme to Goa
	Publication of "District Employment Scheme Economic Progress by Forced Marches", Bangalore Press, Bangalore.
1941	Founder- President, All India Manufacturers' Organisation, Bombay (1941-54)
1942	Automobile Industry ('Premier Automobile Company') established in Bombay.
1943	"Prosperity Through Industry" published by A.I.M.O., Bombay
1944	Hon. Life Member, The Institution of Engineers (India), Calcutta
	D.Sc., University of Allahabad
	D.Sc., Patna University
1946-1947	Visit to U.S.A as leader of delegation of the All India Manufacturers' Organisation.
	Chairman of the Board of Enquiries into disputes between Madras and Hyderabad on Tungabhadra River Works.
	Hindustan Aircrafts established in Bangalore
1948	Doctorate, Mysore University
1949	Scheme for organisation of Village Industries Location of sites for reservoirs in Sourashtra

1951	Publication of "Memoirs of My Working Life", Publication Division, Government of India, Delhi
1952	Finalising Location of Railway Bridge on the Ganges at Mokamesh, Bihar.
	Hon. Roll of Council of Institution of Civil Engineers, London
1953	D. Litt., Andhra University
	Hon. Fellowship, Indian Institute of Town Planners (Sept)
1955	Bharat Ratna (September 07), Nation's Highest Civilian Honour at New Delhi
1958	D.Sc., Jadhavpur University (December)
1959	Durgaprasad Khaitan Memorial Gold Medal by the Royal Asiatic Society Council of Bengal
	Fellowship, Indian Institute of Science, Bangalore
1960	Centenary Celebrations (Sept 15)
1962	Passes away (April 14) at Bangalore

ಸರ್ ಎಂ. ವಿ. ಯವರ ಬಗೆಗೆ ಪ್ರಮುಖರ ಅನಿಸಿಕೆಗಳು

Sir M. Visvesvaraya has had a long span of active life and throughout this period, service of the people to the best of his capacity has been his motto. Every field of activity, be it industry or administration or business, bears the indelible mark of his conscientious hard work.

– Babu Rajendra Prasad

Sir M.V. is a great engineer, a great patriot and a great statesman. Inspite of his eminence, he is still a humble man at heart. The whole idea of planning in this country started with him and the industrial progress made, owes its inspiration to his thoughts, though it may not always be in conformity with his ideas.

– Dr. S. Radhakrishnan

Sir M. Visvesvaraya is a DREAMER, THINKER AND A MAN OF ACTION' not lost in the past but always thinking of the future, living an integrated life, bringing into existence and giving shape to dreams not for himself but for India and the people of India.

– Pandit Jawaharlal Nehru

Sir M.V. is a pioneer in the field of imagination and successful execution. Every project executed by Sir M.V. stands as a living monument to his skill as a nation builder.

– Swaran Singh

Sir M.V's life has been one of intense fruitful activity and service to the peo-ple. His services, as Statesman, Engineer and Economist, assume a place in Indian history. His achievements during the period of office in Mysore State are indeed too numerous to mention. It can truly be said that he was the person who laid the foundation for a prosperous and progressive future of the State.

– His Highness Sri Jayachamaraja Wodeyar

Sir M. Visvesvaraya – it is good to point out this in these days – is a man of incorruptible integrity and model of personal PURITY OF character. His simplicity and sense of correct behaviour are extraordinary, rising sometimes to an urbelieveble degree.

– Bharat Ratna C. Rajagopalachari

Sir M.V. called on the people of India to take a lesson from Japan and America, realising as he did, the fundamental importance of the application of science and up-to-date scientific methods to industry and to agriculture for the purpose of increasing the food. supply and raising the low standard of living.

– Sir C. P. Ramaswami Aiyar

Sir M.V. believed in industrialization and indeed it was his foremost conviction that.by industrialization alone, the standard of living of the people can be raised. He was no respector of slogans and no worshipper of things of the past, merely because they are ancient. He believed in combining the best of our holy past with the best of the most modern civilised amenities.

– Sir A. Ramaswami Mudaliar

By his own personal example and by the issue of circular instructions and otherwise, Sir M.V. inculcated in Government servants the importance of working hard, observing regular hours of office attendance, receiving complaints and grievances of the public at specified times, and so on. A number of manuals were issued to regulate and standardise the work and procedures of Government Offices.

In whatever he said, Sir M.V. ardently believed; he has not attempted to preach to others what he had not practised in his own life. With him, as was the case with Gandhiji, the spoken and written word is the expression of burning convictions. He is an integrated personality.

– Pradhana Siromani N. Madhava Rao

Sir M. V's courtesy, earnestness, cool and collected objectivity and above all his imaginative vision stamped him at once in my eyes as one of the noblest sons of India.

– C.D. Deshmukh

Sir M.V. made use of statistics to show that the percapita income of India, in relation to the incomes of various western countries, was grievously low and said that our root problem was the eradication of poverty. He argued that this was not merely essential but was also practicable; and he added that it could only be done if we took stock of our affairs in a sober manner, prepared an economic plan and operated that plan: In such a process Government had a crucial role to pay.

– H.V.R. Iyengar

Sri. M.V. is India's greatest builder of dams. The country is filled with the wonderful monuments of his engineering skill. In the near future it may come to pass that this engineering genius be remembered as Henry Ford of India.

– The People (A London Daily)

I should like to say that in my broad experience, I have rarely met a man for whom I had a deeper respect not only for his moral character and his ideals and earnest patriotism, but also for his engineering skill.

– His Highness Sri Nalvadi Krishnaraja Wodeyar (1884-1940)

Sir M. Visvesvaraya, a realist and a man of action prodigious energy, guided by the vision of a great, prosperous and renascent India. He is an Engineer, an economist, a writer and humanist – all in the superlative degree, and all in one. He was a living embodiment of plain living and high thinking.

– Prof. M. S. Thacker

Sir M. V often quotes with approval an extract from a daily paper which greatly impressed him. "Nature is a huge banking concern with an inex-haustible store of health, strength, happiness, good-

temper, clear wits and bright eyes. To those who call most frequently upon her, she is in kindliest mood. Hurry up to her headquarters 10 miles away and she will allow you to draw on your account with her as lavishly as you require.

– B.V. Narayana Reddy

Three things, those who worked with Sir M. Visvesvaraya could learn from him each day; SCRUPULOUS PUNCTUALITY, METICULOUS PRECISION, UNTIRING EFFORT TO DO A THING WELL. An equally important quality which one got the opportunity to notice, sometimes, was his careful attention to detail.

– Rajaseva Prasakta M. Venkatesha Iyengar

Sir M. Visvesvaraya was one of the noblest sons of the country. A patriot, an Engineer of eminence, an ardent industrialist and a far sighted administrator; he had rendered yeoman service to the country in many capacities over a period of 75 years, ever seeking fresh opportunities to serve, in the true spirit of a Karmayogi.

– K. C. Reddy

Sir M. Visvesvaraya's personality and his public services evoke love, respect and admiration in a grateful people who bless him for what he was and what he had done and the manner of it. He is a world figure, a most eminent Indian and undoubtedly the greatest Mysorean who ever lived. It is said in ancient Indian lore that an ocean can be compared only with itself and the Himalayas with themselves and with no other. Sir M. Visvesvaraya can be compared only with himself, for there is no other like him. He is a rare combination of ancient Hindu Bhishma and modern American Ford.

– P. Kodanda Rao

From his early distinguished career as an Engineer in Mysore State, Dr. Visvesvaraya was obsessed with the dream of an industrialised India, a vision he shared with Jamsetji Tata. It comes to few men to devote three-quarters of a century or more to a single cause, and the country owes a deep dept of gratitude to this grand old man whose contribution to the economic regeneration of India has not been sufficiently recognised.

I knew Dr. Visvesvaraya well during his 28 years of membership of the Board of the Tata Iron and Steel Company, from 1927 to 1955. Throughout he pressed for a bold expansion of this and other industries and the creation of new ones. The rapid industrial development in the country after Independence largely ful-filled Dr. Visvesvaraya's vision and it is good to know that he lived long enough to see the realisation of his long standing dream. Today, as never before, India needs men like Dr. Visvesvaraya, with single-minded purpose, undeterred by obstacles, difficulties of setbacks, and extending interest in his exemplary life to inspire others dedicated to the economic growth of our country to follow his example.

– J.R.D. Tata

Great minds have always faced stiff opposition from mediocre people. Sir M. V. was one of them.

– Albert Einstein

ಸರ್ ಎಂ.ವಿ. ಅವರ ಅಪರೂಪದ ಭಾವಚಿತ್ರ
(1940)

ಡಾ. ವೂಡೇ ಪಿ. ಕೃಷ್ಣ ಅವರನ್ನು ನಾನು ಕಳೆದ ಒಂದು ದಶಕದಿಂದ ಬಲ್ಲೆ. ಅವರು ನಾನು ಹತ್ತಿರದಿಂದ ಕಂಡ ಅತ್ಯಂತ ಸುಸಂಸ್ಕೃತ ವ್ಯಕ್ತಿತ್ವಗಳಲ್ಲಿ ಒಬ್ಬರು. ರಾಮಕೃಷ್ಣ ಪರಮಹಂಸ ಹಾಗು ವಿವೇಕಾನಂದರ ತತ್ತ್ವಾದರ್ಶಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡಿರುವ ಕೃಷ್ಣ ಹರೆಯದ ಉತ್ಸಾಹ ಹಾಗು ಪ್ರೌಢ ಚಿಂತನೆ ಎರಡನ್ನು ಹದವಾಗಿ ಒಳಗೊಂಡಿರುವ ವಿಶಿಷ್ಟ ವ್ಯಕ್ತಿ. 'ಸಮಾಜ ಸೇವೆ' ಇಂದು ಒಂದು ದಂಧೆಯ ಸ್ವರೂಪ ತಾಳಿರುವಾಗ ಕೃಷ್ಣ ಅಂಥವರು ಕೆಲವು ಮೌಲ್ಯಗಳನಿಟ್ಟುಕೊಂಡು ಬದುಕುತ್ತಾ 'ಸೇವಾ ಕ್ಷೇತ್ರ'ಕ್ಕೆ ಘನತೆಯನ್ನು, ಮೌಲಿಕತೆಯನ್ನು ತಂದು ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಅಧಃಪತನದತ್ತ ಸಾಗುತ್ತಿರುವ ಸಾರ್ವಜನಿಕ ವಲಯದಲ್ಲಿ ಕೃಷ್ಣ ಭರವಸೆಯ ಬೆಳ್ಳಿಗೆರೆಯಂತೆ ಕಾಣಿಸುತ್ತಾರೆ.

ಈ ಪುಟ್ಟ ಪುಸ್ತಕ ವಿಶ್ವೇಶ್ವರಯ್ಯನವರ ಜೀವನ ಚರಿತ್ರೆಯಲ್ಲಿ ಅವರ ವ್ಯಕ್ತಿತ್ವವನ್ನು ಕೃಷ್ಣ ತಾವು ಕಂಡ ರೀತಿಯಲ್ಲಿ ಇಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ವಿಶ್ವೇಶ್ವರಯ್ಯನವರು ಯಾಕೆ ಮಹತ್ವದ ವ್ಯಕ್ತಿ, ಅವರ ವ್ಯಕ್ತಿತ್ವದ ಸ್ವರೂಪ ಯಾವ ಬಗೆಯದು, ಇಂದು ಅವರು ನಮಗೆ ಹೇಗೆ ಪ್ರಸ್ತುತ – ಮೊದಲಾದ ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಕೃಷ್ಣ ಅವರು ವಿಶ್ವೇಶ್ವರಯ್ಯನವರ ಬದುಕು - ಸಾಧನೆಗಳನ್ನು ಇಲ್ಲಿ ಚಿತ್ರಿಸಿದ್ದಾರೆ.

– ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

ಖ್ಯಾತ ವಿಮರ್ಶಕರು